ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 23 ಭಾನುವಾರ 2025

ಸಂಪುಟ: 45 | ಸಂಚಿಕೆ: 306 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಚಾಂಪಿಯನ್ಸ್ ಟ್ರೋಫಿ: ಇಂದು ಭಾರತ–ಪಾಕ್ ಹೈ ವೋಲ್ಟೇಜ್ ಪಂದ್ಯ

ವಿಶ್ವ ಕ್ರಿಕೆಟ್ ಅಭಿಮಾನಿಗಳಲ್ಲಿ ತವಕ!



ದುಬೈ, ಫೆ22– ಇಡೀ ವಿಶ್ವವೇ ಕಾತುರದಿಂದ ಕಾಯುತ್ತಿರುವ ಸಾಂಪ್ರದಾಯಿಕ ಎದುರಾಳಿಗಳಾದ ಇಂಡಿಯಾ–ಪಾಕಿಸ್ತಾನ ನಡುವಿನ ಹೈವೋಲ್ಟೇಜ್ ಪಂದ್ಯಕ್ಕೆ ದುಬೈ ಅಂತಾರಾಷ್ಟ್ರೀಯ ಮೈದಾನ ಸಿದ್ಧವಾಗಿದ್ದು, ಭಾರತೀಯ ಕಾಲಮಾನ ಭಾನುವಾರ (ಫೆ.23) ಮಧ್ಯಾಹ್ನ 2.30ಕ್ಕೆ ಪಂದ್ಯ ಆರಂಭಗೊಳ್ಳಲಿದೆ.

2017ರ ಬಳಿಕ ನಡೆಯುತ್ತಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಮತ್ತೊಮ್ಮೆ ಉಭಯ ತಂಡಗಳು ಮುಖಾಮುಖಿಯಾಗುತ್ತಿದ್ದು, ಪಂದ್ಯ ವೀಕ್ಷಣೆಗೆ ವಿಶ್ವ ಕ್ರಿಕೆಟ್ ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಟೂರ್ನಿಯ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಬಗ್ಗು ಬಡಿದಿರುವ ಟೀಂ ಇಂಡಿಯಾ, ಇದೀಗ ಪಾಕ್‌ಗೆ ಸೋಲಿನ ರುಚಿ ತೋರಿಸಲು ಭರ್ಜರಿ ತಯಾರಿ ನಡೆಸಿದೆ. ಮತ್ತೊಂದೆಡೆ ನ್ಯೂಜಿಲೆಂಡ್ ವಿರುದ್ಧ ಸೋತು, ಈಗ ಟೂರ್ನಿಯಿಂದ ಹೊರಬೀಳುವ ಆತಂಕದಲ್ಲಿರುವ ಪಾಕಿಸ್ತಾನಕ್ಕೆ ಈ ಪಂದ್ಯ ಡು ಆರ್ ಡೈ ಎಂಬಂತಾಗಿದ್ದು, ಭಾರತದ ವಿರುದ್ಧದ ಪಂದ್ಯ ಗೆಲ್ಲಲೇಬೇಕಾದ ಒತ್ತಡದಲ್ಲಿದೆ.

ಈ ಪಂದ್ಯ ಉಭಯ ತಂಡಗಳಿಗೂ ಮಹತ್ವದ್ದಾಗಿದ್ದು, ಭಾರತ ಪಂದ್ಯ ಗೆದ್ದರೆ ಸೆಮೀಸ್‌ಗೆ ಬಹುತೇಕ ಎಂಟ್ರಿ ಕೊಡಲಿದೆ. ಪಾಕಿಸ್ತಾನ ಗೆದ್ದರೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತದ ವಿರುದ್ಧ ತನ್ನ ಪ್ರಾಬಲ್ಯ ಮುಂದುವರಿಸಲಿದೆ ಎಂದು ಪಾಕಿಸ್ತಾನ ಅಭಿಮಾನಿಗಳು ಆಶಿಸುತ್ತಿದ್ದರೆ, ಈ ಬಾರಿ ಭಾರತ ಗೆದ್ದೇ ಗೆಲ್ಲುತ್ತೆ ಎಂಬ ವಿಶ್ವಾಸ ಭಾರತೀಯ ಅಭಿಮಾನಿಗಳಲ್ಲಿದೆ. ಭಾರತದ ಪರ ನಾಯಕ ರೋಹಿತ್ ಶರ್ಮಾ, ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ, ■6ನೇ ಪುಟಕ್ಕೆ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ ಎಲ್ ರಾಹುಲ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ರವೀಂದ್ರ ಜಡೇಜಾ, ಹರ್ಷಿತ್ ರಾಣಾ, ಮೊಹಮ್ಮದ್ ಶಮಿ, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಅರ್ಶ್‌ದೀಪ್ ಸಿಂಗ್, ರಿಷಭ್ ಪಂತ್, ವಾಷಿಂಗ್ಟನ್ ಸುಂದರ್.

ಪಾಕಿಸ್ತಾನ: ಇಮಾಮ್ ಉಲ್ ಹಕ್, ಬಾಬರ್ ಅಜಮ್, ಸೌದ್ ಶಕೀಲ್, ಮೊಹಮ್ಮದ್ ರಿಜ್ವಾನ್ (ನಾಯಕ, ವಿಕೆಟ್ ಕೀಪರ್), ಸಲ್ಮಾನ್ ಅಘಾ, ತಯ್ಯಬ್ ತಾಹಿರ್, ಖುಷ್ದಿಲ್ ಶಾ, ಶಾಹೀನ್ ಅಫ್ರಿದಿ, ನಸೀಮ್ ಶಾ, ಹ್ಯಾರಿಸ್ ರೌಫ್, ಅಬ್ರಾರ್ ಅಹ್ಮದ್, ಮೊಹಮ್ಮದ್ ಹಸ್ನೈನ್, ಉಸ್ಮಾನ್ ಖಾನ್, ಕಮ್ರಾನ್ ಗುಲಾಂ, ಫಹೀಮ್ ಅಶ್ರಫ್.

ಬೇಸಿಗೆಯಲ್ಲಿ ವಿದ್ಯುತ್ ಅಭಾವ ಸಂಭವ

● ಲೋಡ್‌ಶೆಡ್ಡಿಂಗ್ ಅನಿವಾರ್ಯವಾಗಬಹುದು ● ಅಕಾಲಿಕ ಮಳೆಯಾದರೆ ಪರಿಸ್ಥಿತಿ ಸುಧಾರಣೆ ● ಉತ್ತರಪ್ರದೇಶ, ಪಂಜಾಬ್‌ನಿಂದ ವಿದ್ಯುತ್ ಸಾಲ ಪಡೆಯುವುದು; ಸ್ಥಗಿತಗೊಂಡ ವಿದ್ಯುತ್ ಸ್ಥಾವರಕ್ಕೆ ಚಾಲನೆ ನೀಡುವ ಮೂಲಕ ಪರಿಸ್ಥಿತಿ ಸುಧಾರಣೆಗೆ ಚಿಂತನೆ



ಬೆಂಗಳೂರು, ಫೆ. 22(ಕೆಎಂಶಿ)– ಬೇಸಿಗೆ ದಿನಗಳಲ್ಲಿ ಅಕಾಲಿಕ ಮಳೆ ಬರದಿದ್ದರೆ ರಾಜ್ಯದಲ್ಲಿ ವಿದ್ಯುತ್ ಅಭಾವ ತೀವ್ರಗೊಂಡು ಲೋಡ್‌ಶೆಡ್ಡಿಂಗ್ ಅನಿವಾರ್ಯವಾಗಲಿದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೂ, ಕಡು ಬೇಸಿಗೆಯಲ್ಲಿನ ಬೇಡಿಕೆಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಇದನ್ನು ಸರಿದೂಗಿಸಲು ಅಧಿಕಾರಿಗಳು ಉತ್ತರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಿಂದ ಸಾಲದ ರೂಪದಲ್ಲಿ ವಿದ್ಯುತ್ ಪಡೆಯಲು ಹಾಗೂ ನಮ್ಮಲ್ಲಿನ ಸ್ಥಗಿತಗೊಂಡಿರುವ ಎಲ್ಲಾ ತೆರನಾದ ವಿದ್ಯುತ್ ಉತ್ಪಾದನಾ ಮೂಲಗಳನ್ನು ಚಾಲನೆಗೊಳಿಸುವಂತೆ ಆದೇಶಿಸಲಾಗಿದೆ.

ರಾಜ್ಯದ ಜಲಾಶಯಗಳಲ್ಲಿ ಶೇಕಡ 70ರಷ್ಟು ನೀರು ಸಂಗ್ರಹವಿದೆ. ಈ ನೀರನ್ನು ಕೃಷಿಯ ಎರಡನೇ ಬೆಳೆಗೆ ಬಳಕೆ ಮಾಡುವಂತೆ ಸಂಬಂಧಪಟ್ಟ ಜಿಲ್ಲಾಡಳಿತಕ್ಕೆ ಸರ್ಕಾರ ಆದೇಶ ಮಾಡಿದೆ. ಈ ಆದೇಶವೇ ವಿದ್ಯುತ್ ಭಾರಿ ಬೇಡಿಕೆಗೆ ಕಾರಣವಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಕಬ್ಬು ಕಟಾವು ಪೂರ್ಣಗೊಂಡಿದ್ದು, ಹೆಚ್ಚಿನ ಬೇಡಿಕೆ ಇಲ್ಲ. ಹಳೇ ಮೈಸೂರು ಭಾಗದಲ್ಲಿ ಜಲಾಶಯಗಳಿಂದ ನೀರು ಹರಿಸಲಾಗುತ್ತಿದೆ. ಅದರಲ್ಲೂ ಮಂಡ್ಯ, ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಬಳಕೆ ಆಗುತ್ತಿದೆ. ನಿಗದಿತ ಸರಬರಾಜಿಗಿಂತ ಶೇಕಡ 30ರಷ್ಟು ಹೆಚ್ಚು ವಿದ್ಯುತ್ ಬೇಡಿಕೆ ಈ ಪ್ರದೇಶದಲ್ಲಿದೆ. ಇದನ್ನು ನಿಭಾಯಿಸಲು ಬೇಡಿಕೆಗೆ ಅಗತ್ಯವಿರುವಷ್ಟು ಪೂರೈಕೆ ಮಾಡಲು ಸೂಚಿಸಲಾಗಿದೆ. ಹಿಂದಿನ ಮೂರು ವರ್ಷಗಳಲ್ಲಿ ಬರದಿಂದ ತತ್ತರಿಸಿರುವ ರೈತರಿಗೆ ಈ ಬಾರಿ ನೀರಿರುವುದರಿಂದ ■6ನೇ ಪುಟಕ್ಕೆ

ಮಹಾ ಕುಂಭಮೇಳ ಮುಕ್ತಾಯಕ್ಕೆ ಇನ್ನು ಕೇವಲ ನಾಲ್ಕು ದಿನ ಬಾಕಿ

ತ್ರಿವೇಣಿ ಸಂಗಮದಲ್ಲಿ ಮಿಂದೆದ್ದ ಜೆ.ಪಿ.ನಡ್ಡಾ, ಯೋಗಿ ಆದಿತ್ಯನಾಥ್



ಪ್ರಯಾಗ್‌ರಾಜ್, ಫೆ.22– ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳ ಮುಕ್ತಾಯಕ್ಕೆ ಕೇವಲ ನಾಲ್ಕು ದಿನಗಳು ಬಾಕಿ ಉಳಿದಿದ್ದು, 41 ನೇ ದಿನವಾದ ಶನಿವಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಸಿಎಂ ಯೋಗಿ ಆದಿತ್ಯನಾಥ್ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ್ದಾರೆ.

ಇಂದು ಅರೈಲ್‌ನಲ್ಲಿರುವ ತ್ರಿವೇಣಿ ಅತಿಥಿ ಗೃಹಕ್ಕೆ ಆಗಮಿಸಿದ ಜೆ.ಪಿ. ನಡ್ಡಾ ಅವರನ್ನು ಸಿಎಂ ಯೋಗಿ ಆದಿತ್ಯನಾಥ್ ಸ್ವಾಗತಿಸಿದರು. ತದನಂತರ ಮಧ್ಯಾಹ್ನ 3 ಗಂಟೆಗೆ ಉಭಯ ನಾಯಕರು ಗಂಗಾ ನದಿಗೆ ಅರ್ಘ್ಯ ಸಲ್ಲಿಸಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ಬಡೇ ಹನುಮಾನ್ ದೇವಾಲಯ ಮತ್ತು ಅಕ್ಷಯವತ್‌ಗೆ ಭೇಟಿ ನೀಡಿ, ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಶನಿವಾರ ಬೆಳಗ್ಗೆ 8 ಗಂಟೆಯವರೆಗೂ ಸುಮಾರು 33.10 ಲಕ್ಷ ಭಕ್ತರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಇಲ್ಲಿಯವರೆಗೂ ಸುಮಾರು 59.64 ಕೋಟಿ ಯಾತ್ರಾರ್ಥಿಗಳು ಪುಣ್ಯಸ್ನಾನ ಮಾಡುವ ಮೂಲಕ ಇತಿಹಾಸದಲ್ಲಿ ಹೊಸ ದಾಖಲೆ ಮಾಡಲಾಗಿದೆ.

ಸರ್ಕಾರದಿಂದ ಮೊದಲ ಹಂತದಲ್ಲಿ 20 ಕೋಟಿ ಬಿಡುಗಡೆ

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಅಭಿವೃದ್ಧಿ ಪರ್ವ

● ಹಳೇಬೀಡು ಪಾರಂಪರಿಕ ಶೈಲಿಯಲ್ಲಿ 'ಎ' ಬ್ಲಾಕ್ ಮಳಿಗೆ, ಪ್ರವೇಶದ್ವಾರ ನಿರ್ಮಾಣ ● ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್ ಮಾಹಿತಿ ● 10 ಕೋಟಿ ವೆಚ್ಚದಲ್ಲಿ ಸಂಗೀತ ಕಾರಂಜಿ ನಿರ್ಮಾಣ



ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಫೆ.22(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಅಭಿವೃದ್ಧಿಗೆ 20 ಕೋಟಿ ರೂ. ಅನುದಾನ ನೀಡಿದ್ದು, ಮಾರ್ಚ್ ಅಂತ್ಯದ ವೇಳೆಗೆ ವಿವಿಧ ಅಭಿವೃದ್ಧಿ ಕಾಮಗಾರಿ ಆರಂಭಿಸಲು ಉದ್ದೇಶಿಸಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ತಿಳಿಸಿದ್ದಾರೆ.

ದಸರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದ ಅಭಿವೃದ್ಧಿಗಾಗಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ 20 ಕೋಟಿ ರೂ. ನೀಡಿದ್ದಾರೆ. ಇಷ್ಟು ದೊಡ್ಡ ಮೊತ್ತದ ಹಣ ಇದೇ ಮೊದಲ ಬಾರಿಗೆ ಬಿಡುಗಡೆಯಾಗಿದೆ. ಮೈಸೂರಿನವರೇ ಆದ ಸಿಎಂ ಸಿದ್ದರಾಮಯ್ಯ, ವಿವಿಧ ಅಭಿವೃದ್ಧಿ ಕಾಮಗಾರಿಗೆ ಇಷ್ಟು ದೊಡ್ಡ ಮೊತ್ತದ ಹಣ ನೀಡಿದ್ದಾರೆ. ಅದಕ್ಕಾಗಿ ಮೈಸೂರಿನ ಜನತೆಯ ಪರವಾಗಿ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ವಸ್ತುಪ್ರದರ್ಶನ ಆವರಣದಲ್ಲಿ ಅಭಿವೃದ್ಧಿಗೆ 47 ಕೋಟಿ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಮೊದಲ ಹಂತದಲ್ಲಿ 20 ಕೋಟಿಗೆ ಸಂಪುಟ ಸಭೆಯಲ್ಲಿ ಅನುಮೋದಿಸಿ, ಬಿಡುಗಡೆ ಮಾಡಲಾಗಿದೆ. ಇದರಿಂದ ವಸ್ತುಪ್ರದರ್ಶನ ಮಾತ್ರವಲ್ಲದೆ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೂ ಅನುಕೂಲವಾಗಲಿದೆ. ದಸರಾ ಸಂದರ್ಭದಲ್ಲಿ 90 ದಿನ ನಡೆಯುವ ವಸ್ತುಪ್ರದರ್ಶನ ವೀಕ್ಷಣೆಗೆ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಲಿದ್ದು, ವಿವಿಧ ಅಭಿವೃದ್ಧಿ ಕಾರ್ಯ ನಡೆದರೆ ಮತ್ತಷ್ಟು ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಬಹುದು ಎಂದರು.

ಹಳೇಬೀಡಿನ ಪಾರಂಪರಿಕ ಶೈಲಿಯಲ್ಲಿ ನವೀಕರಣ: ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಎ ಬ್ಲಾಕ್‌ನಲ್ಲಿರುವ ಒಟ್ಟು 154 ವಾಣಿಜ್ಯ ಮಳಿಗೆಗಳು, 20 ವರ್ಷಗಳ ಹಿಂದೆ ನಿರ್ಮಿಸಿದವು. ಇವುಗಳನ್ನು ದಸರಾ ವೇಳೆ 3 ತಿಂಗಳು ಮಾತ್ರ ಉಪಯೋಗಿಸಲಾಗುತ್ತಿದೆ. ಈ ಬ್ಲಾಕ್ ಅನ್ನು ಹಳೇಬೀಡು ಶೈಲಿಯಲ್ಲಿ ಎಫ್‌ಆರ್‌ಪಿ ಬಳಸಿ ನವೀಕರಿಸಲಾಗುವುದು. ಈ ಮಳಿಗೆಗಳಲ್ಲಿ ಅಂತಾರಾಜ್ಯ ■6ನೇ ಪುಟಕ್ಕೆ

ಮಾ.3ರಿಂದ ಬಜೆಟ್ ಅಧಿವೇಶನ

ಸರ್ಕಾರದ ವಿರುದ್ಧ ಮುಗಿಬೀಳಲು ಬಿಜೆಪಿ ಸಜ್ಜು



ಬೆಂಗಳೂರು, ಫೆ.22– ಮಾರ್ಚ್ 3 ರಿಂದ ರಾಜ್ಯ ಬಜೆಟ್ ಅಧಿವೇಶನ ಆರಂಭವಾಗುತ್ತಿದ್ದು, ಈ ವೇಳೆ ಸರ್ಕಾರದ ವಿರುದ್ಧ ಮುಗಿಬೀಳಲು ಬಿಜೆಪಿ ಸಜ್ಜಾಗಿದೆ. ಅಧಿವೇಶನ ವೇಳೆ ಸರ್ಕಾರದ ವಿರುದ್ಧ ಹಲವು ಅಸ್ತ್ರಗಳ ಪ್ರಯೋಗಿಸಲು ಬಿಜೆಪಿ ಸಜ್ಜಾಗಿದ್ದು, ಈ ಸಂಬಂಧ ಶುಕ್ರವಾರ ಪೂರ್ವಭಾವಿ ಸಭೆ ನಡೆಸಿತು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಂಬರುವ ಬಜೆಟ್ ಅಧಿವೇಶನ ಕುರಿತು ಮಹತ್ವದ ಚರ್ಚೆ ನಡೆಸಲಾಗಿದ್ದು, ಸದನದಲ್ಲಿ ಪ್ರಶ್ನೆಗಳನ್ನು ಕೇಳುವುದು, ಚರ್ಚೆಗೆ ಒಳಪಡಿಸುವ ವಿಷಯಗಳು ಹಾಗೂ ನಿಲುವಳಿ ಸೂಚನೆಯ ಮಂಡನೆಗೆ ಸಂಬಂಧಿಸಿದಂತೆ ಮಾತುಕತೆ ನಡೆಸಲಾಗಿದೆ ಎಂದು ಹೇಳಿದರು.

ರಾಜ್ಯ ಸರ್ಕಾರದ ಭ್ರಷ್ಟಾಚಾರ, ವೈಫಲ್ಯ, ಜನವಿರೋಧಿ ನೀತಿಗಳನ್ನು ಬಹಿರಂಗಪಡಿಸಲು ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಲು ಸದನದಲ್ಲಿ ಬಲವಾದ ಪ್ರತಿಪಕ್ಷದ ಹೋರಾಟ ನಡೆಸಲಾಗುವುದು. ಈ ಕುರಿತು ಸರ್ವ ಸದಸ್ಯರು ತೀವ್ರ ಚರ್ಚೆ ನಡೆಸಿ, ಸರ್ಕಾರದ ಅಸಮರ್ಥತೆ ವಿರುದ್ಧ ರಾಜ್ಯದ ಜನತೆಗಾಗಿ ಪ್ರಭಾವೀ ನಿಲುವು ಕೈಗೊಳ್ಳಲು ನಿರ್ಧರಿಸಲಾಗಿದೆ. ಜೆಡಿಎಸ್ ಸದಸ್ಯರೊಂದಿಗೆ ಸಮನ್ವಯ ಸಾಧಿಸಲಾಗುವುದು ಎಂದು ತಿಳಿಸಿದರು.

ಚಾಮುಂಡಿಬೆಟ್ಟ ಅರಣ್ಯಕ್ಕೆ ಕಿಡಿಗೇಡಿಗಳಿಂದ ಬೆಂಕಿ

35 ಎಕರೆ ವನ್ಯ ಸಂಪತ್ತು ನಾಶ; ಯಾವುದೇ ವನ್ಯಜೀವಿ ಪ್ರಾಣಹಾನಿ ಇಲ್ಲ

● ಡಿಸಿಎಫ್ ಕೆ.ಎನ್.ಬಸವರಾಜು ಸ್ಪಷ್ಟನೆ ● ದುಷ್ಕರ್ಮಿಗಳು ಬೆಂಕಿ ಹಾಕುವ ಕೃತ್ಯ ಕಣ್ಣಿಗೆ ಬಿದ್ದ ಕೂಡಲೇ ಕಾರ್ಯಾಚರಣೆ ● ಸತತ 11 ಗಂಟೆ ಕಾರ್ಯಾಚರಣೆ ಬಳಿಕ ಬೆಂಕಿ ಶಮನ



ಮೈಸೂರು, ಫೆ.22(ಎಂಟಿವೈ)– ಚಾಮುಂಡಿಬೆಟ್ಟದ ಮೀಸಲು ಅರಣ್ಯಕ್ಕೆ ಶುಕ್ರವಾರ ಮಧ್ಯಾಹ್ನ ಎರಡು ಕಡೆ ಕಿಡಿಗೇಡಿಗಳು ಬೆಂಕಿ ಹಚ್ಚಿದ ಪರಿಣಾಮ 35 ಎಕರೆ ಅರಣ್ಯ ನಾಶವಾಗಿದ್ದು, ಆದರೆ ವನ್ಯಜೀವಿಗಳ ಪ್ರಾಣಹಾನಿ ಸಂಭವಿಸಿಲ್ಲ ಎಂದು ಡಿಸಿಎಫ್ ಕೆ.ಎನ್.ಬಸವರಾಜು ಸ್ಪಷ್ಟಪಡಿಸಿದ್ದಾರೆ. ಮೈಸೂರಿನ ಅಶೋಕಪುರಂನಲ್ಲಿ ಇರುವ ಅರಣ್ಯ ಭವನದ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, ಚಾಮುಂಡಿಬೆಟ್ಟದ ದೇವಿಕೆರೆ ಗಸ್ತಿನ ಗಂಟೆಹಳ್ಳ ಮತ್ತು ಗೊಲ್ಲಹಳ್ಳ ಭಾಗಗಳಿಗೆ ಕಿಡಿಗೇಡಿಗಳು ಶುಕ್ರವಾರ ಮಧ್ಯಾಹ್ನ 11.30ರ ಸುಮಾರಿನಲ್ಲಿ ಬೆಂಕಿ ಹಚ್ಚಿದ್ದಾರೆ. ನಿಗಾ ವಹಿಸುವ ಸಲುವಾಗಿ ಅರಣ್ಯ ಇಲಾಖೆಯಿಂದ ಬೆಟ್ಟದಲ್ಲಿ ನಿರ್ಮಿಸಿರುವ ವಾಚಿಂಗ್ ಟವರ್‌ನ ಸಿಬ್ಬಂದಿ ಅದನ್ನು ಗಮನಿಸಿದ ಪರಿಣಾಮ ಸಕಾಲದಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆ ಪ್ರಾರಂಭಿಸಲು ಸಾಧ್ಯವಾಯಿತು ಎಂದರು.

ಮಧ್ಯಾಹ್ನ 12.30ಕ್ಕೆ ಆರಂಭವಾದ ಕಾರ್ಯಾಚರಣೆ ರಾತ್ರಿ 11.30ರ ಸುಮಾರಿಗೆ ಮುಕ್ತಾಯಗೊಂಡು ಸತತ 11 ಗಂಟೆಯ ಪ್ರಯತ್ನದ ಫಲವಾಗಿ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಲಾಯಿತು. ಕಾರ್ಯಾಚರಣೆ ಪ್ರಯುಕ್ತ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಉತ್ತನಹಳ್ಳಿ ರಸ್ತೆಯನ್ನು ಮಧ್ಯಾಹ್ನದಿಂದ ಹಾಗೂ ಮುಖ್ಯ ರಸ್ತೆಯನ್ನು ಸಂಜೆ ನಂತರ ಬಂದ್ ಮಾಡಲಾಗಿತ್ತು. ರಾತ್ರಿ 11.30ರ ಸುಮಾರಿನಲ್ಲಿ ಸಂಪೂರ್ಣ ಬೆಂಕಿ ನಂದಿಸಿದ ನಂತರವೂ 3 ತಂಡಗಳನ್ನು ರಚಿಸಿ ಬೆಂಕಿ ಬಿದ್ದಿದ್ದ ಸ್ಥಳದಲ್ಲಿನ ಕಿಡಿ ಆರಿಸಲು ಕ್ರಮ ಕೈಗೊಳ್ಳಲಾಗಿತ್ತು. ಅಲ್ಲದೇ ಇಂದು (ಶನಿವಾರ) ಮತ್ತೆ ಎರಡು ತಂಡ ಕಾರ್ಯಾಚರಣೆ ನಡೆಸಿ ಎಲ್ಲಾದರೂ ಹೊಗೆ ಬರುತ್ತಿದೆಯೇ ಎಂಬುದನ್ನು ಪರಿಶೀಲಿಸುವುದರ ಜೊತೆಗೆ ಡ್ರೋಣ್ ಮೂಲಕವೂ ಬೆಂಕಿ ಬಿದ್ದಿದ್ದ ಪ್ರದೇಶವನ್ನು ಪರಿಶೀಲಿಸಲಾಯಿತು ಎಂದು ಅವರು ಹೇಳಿದರು.

ಚಾಮುಂಡಿಬೆಟ್ಟ ಮೀಸಲು ಅರಣ್ಯವು 1516 ಎಕರೆ ವಿಸ್ತೀರ್ಣವಿದ್ದು, ಬೇಸಿಗೆ ಸಂದರ್ಭದಲ್ಲಿ ಅರಣ್ಯವನ್ನು ಬೆಂಕಿಯಿಂದ ರಕ್ಷಿಸುವ ಸಲುವಾಗಿ ಈ ಬಾರಿ 65 ಕಿ.ಮೀ. ಬೆಂಕಿ ರೇಖೆ ನಿರ್ಮಿಸಲಾಗಿತ್ತು. 3 ಕಡೆ ವಾಚಿಂಗ್ ಟವರ್‌ನಲ್ಲಿ ಸಿಬ್ಬಂದಿ ನಿಗಾ ವಹಿಸುವ ವ್ಯವಸ್ಥೆ ಕಲ್ಪಿಸಿ, ಬೆಂಕಿ ಅವಘಡ ಆಗದಂತೆ ಎಚ್ಚರ ವಹಿಸಲಾಗಿತ್ತಾದರೂ, ಒಂದೇ ಸಮಯದಲ್ಲಿ ಕಿಡಿಗೇಡಿಗಳು ■6ನೇ ಪುಟಕ್ಕೆ

ದಸರಾ ವಸ್ತುಪ್ರದರ್ಶನದಲ್ಲಿ ಕಸದ ರಾಶಿಗೆ ಬೆಂಕಿ; ದಟ್ಟ ಹೊಗೆ ಸಹಿತ ಜ್ವಾಲೆಯಿಂದ ಕೆಲಕಾಲ ಆತಂಕ



ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ತ್ಯಾಜ್ಯಕ್ಕೆ ಬೆಂಕಿ ಬಿದ್ದಿರುವುದು.

ಮೈಸೂರು, ಫೆ.22(ಎಂಟಿವೈ)– ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸಂಗ್ರಹಿಸಿದ್ದ ನಿರುಪಯುಕ್ತ ತ್ಯಾಜ್ಯಕ್ಕೆ ಬೆಂಕಿ ಬಿದ್ದ ಪರಿಣಾಮ ಉಂಟಾದ ದಟ್ಟ ಹೊಗೆಯಿಂದಾಗಿ ಮೈಸೂರು–ನಂಜನಗೂಡು ನಡುವಿನ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು.

ದಸರಾ ವಸ್ತುಪ್ರದರ್ಶನ ಆವರಣದ ಕಾಂಪೌಂಡ್ ಒಳಗೆ ಎಂಜಿ ರಸ್ತೆ ಹಾಗೂ ನಂಜನಗೂಡು ರಸ್ತೆ ಜಂಕ್ಷನ್‌ನಲ್ಲಿ ಅಲಂಕಾರಕ್ಕೆ ಬಳಸಿದ್ದ ಥರ್ಮಕೋಲ್ ಹಾಗೂ ಪ್ಲಾಸ್ಟಿಕ್ ಸೇರಿದಂತೆ ನಿರುಪಯುಕ್ತ ವಸ್ತುಗಳನ್ನು ರಾಶಿ ಹಾಕಲಾಗಿತ್ತು. ಇತ್ತೀಚೆಗೆ ವಸ್ತುಪ್ರದರ್ಶನ ಆವರಣದಲ್ಲಿ ನಡೆದ ನಟ ಡಾಲಿ ಧನಂಜಯ ಅವರ ವಿವಾಹ ಮಹೋತ್ಸವದ ವೇದಿಕೆ ಅಲಂಕಾರಕ್ಕೂ ಬಳಸಿದ್ದ ಥರ್ಮಕೋಲ್ ಶೀಟ್‌ಗಳು ಸೇರಿದಂತೆ ದಸರಾ ವಸ್ತುಪ್ರದರ್ಶನದ ವೇಳೆ ಕೆಲ ಮಳಿಗೆಗಳಲ್ಲಿ ಬಳಸಿದ್ದ ಕಚ್ಚಾ ■6ನೇ ಪುಟಕ್ಕೆ

ಫೆ.26ರಂದು ಶಿವರಾತ್ರಿ ಆಚರಣೆ

ಮೈಸೂರು,ಫೆ.22–ಮೈಸೂರಿನ ಹೆಬ್ಬಾಳು ಬಡಾವಣೆ 2ನೇ ಹಂತದ ಅಕ್ಕಾ ಮಂದಿರ ನಿವೇಶನ ಮತ್ತು ವಸತಿ ದಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಫೆ.26ರಂದು ಶಿವ ರಾತ್ರಿ ಹಬ್ಬ ಆಚರಿಸಲಾಗುವುದು.



ಅಂದು ಬೆಳಿಗ್ಗೆ 6ರಿಂದ ಜಲ ಕ್ಷೀರಾಭಿಷೇಕ, 7.30ರಿಂದ ರುದ್ರಾಭಿಷೇಕ, ಬೆಳಗ್ಗೆ 9ಕ್ಕೆ ಮಹಾ ಮಂಗಳಾರತಿ ನಡೆಯಲಿದೆ. ಮೊದಲನೇ ಜಾವದ ಪೂಜೆ ಸಂಜೆ 6ರಿಂದ 9ರ ಮಂಗಳಾರತಿ 7.30ಕ್ಕೆ ಭಸ್ಮ ಅಲಂಕಾರ, ಎರಡನೇ ಜಾವದ ಪೂಜೆ ರಾತ್ರಿ 9ರಿಂದ 12 ಮಹಾಮಂಗಳಾರತಿ 10.30ಕ್ಕೆ ಗಂಧದ ಅಲಂಕಾರ; ಮೂರನೇ ಜಾವದ ಪೂಜೆ ರಾತ್ರಿ 12ರಿಂದ ಬೆಳಗ್ಗೆ 3 ಮಹಾ ಮಂಗಳಾ ರತಿ 1.30ಕ್ಕೆ ಅರ್ಧನಾರೇಶ್ವರಿ ಅಲಂಕಾರ; ನಾಲ್ಕನೇ ಜಾವದ ಪೂಜೆ ರಾತ್ರಿ 3ರಿಂದ ಬೆಳಗ್ಗೆ 6 ಮಹಾ ಮಂಗಳಾರತಿ 4.30ಕ್ಕೆ ಹೂವಿನ ಅಲಂಕಾರ, ಐದನೇ ಜಾವದ ಪೂಜೆ ಬೆಳಗ್ಗೆ 6ರಿಂದ 8 ಮಹಾಮಂಗ ಳಾರತಿ 7.30ಕ್ಕೆ ವಜ್ರ ಅಲಂಕಾರ. ಮಾಹಿತಿಗೆ ಮೊ. 9611073 330, 9945308870 ಸಂಪರ್ಕಿಸಬಹುದು.

ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ: ಮೈಸೂರಿನ ವಿ.ವಿ.ಮೊಹಲ್ಲಾ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ (ಈಶ್ವರ ದೇವ ಸ್ಥಾನ)ದಲ್ಲಿ ಫೆ.26ರಂದು ಮಹಾ ಶಿವರಾತ್ರಿ ಉತ್ಸವದ ಅಭಿಷೇಕಗಳು, ಅರ್ಚನೆ, ಪೂಜೆ ಬೆಳಗ್ಗೆ 6ರಿಂದ ಮಧ್ಯಾಹ್ನ 1.30ರವರೆಗೆ ಮತ್ತು ಸಂಜೆ 4ರಿಂದ ಮಾರನೇ ದಿನ ಬೆಳಗ್ಗೆ ಫೆ.27ರಂದು ಬೆಳಗ್ಗೆ 7ರವರೆಗೆ ನಡೆಯಲಿದೆ. ರಾತ್ರಿ ಪೂರ್ತಿ ಭಜನೆ, ನೃತ್ಯ ಕಾರ್ಯಕ್ರಮಗಳಿರುತ್ತವೆ. ಫೆ.27ರ ಬೆಳಗ್ಗೆ 8.30 ಗಂಟೆಗೆ ದೇವರ ರಾಜ ಬೀದಿ ಉತ್ಸವವಿರುತ್ತದೆ.

ವಿದ್ಯಾರ್ಥಿವೇತನಕ್ಕೆ ಆಗ್ರಹಿಸಿ ಎಐಡಿಎಸ್‌ಓ ಪ್ರತಿಭಟನೆ

ವಿದ್ಯಾರ್ಥಿವೇತನ ಭಿಕ್ಷೆಯಲ್ಲ, ಅದು ವಿದ್ಯಾರ್ಥಿಗಳ ಹಕ್ಕು



ವಿದ್ಯಾರ್ಥಿವೇತನ ಬಿಡುಗಡೆಗೆ ಒತ್ತಾಯಿಸಿ ಎಐಡಿಎಸ್‌ಓ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಫೆ.22(ಜಿಎ)–ವಿದ್ಯಾರ್ಥಿವೇತನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಎಐಡಿಎಸ್‌ಓ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು. ಕಳೆದ ಮೂರು ವರ್ಷಗಳಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಸರಿಯಾಗಿ ವಿದ್ಯಾರ್ಥಿವೇತನ ಲಭ್ಯವಾಗುತ್ತಿಲ್ಲ. ವಿದ್ಯಾರ್ಥಿಗಳು ಸರ್ಕಾರದಿಂದ ದೊರೆಯುವ ವಿದ್ಯಾರ್ಥಿವೇತನದ ಮೇಲೆ ಅವಲಂಬಿತರಾಗಿಯೇ ಪದವಿ ಹಾಗೂ ಉನ್ನತ ಶಿಕ್ಷಣ ವ್ಯಾಸಂಗ ಮಾಡಲು ತಯಾರಿ ನಡೆಸಿರುತ್ತಾರೆ. ಇಲ್ಲವಾದಲ್ಲಿ ಶಿಕ್ಷಣ ತೊರೆಯುತ್ತಾರೆ. ಶಿಕ್ಷಣದ ವ್ಯಾಪಾರೀಕರಣ ಈಗಾಗಲೇ ಬಡ ವಿದ್ಯಾರ್ಥಿಗಳ ಶಿಕ್ಷಣದ ಕನಸುಗಳನ್ನು ಸೀಮಿತಗೊಳಿಸುತ್ತಿವೆ. ಹೀಗಿರುವಾಗ ವಿದ್ಯಾರ್ಥಿವೇತನ ಕಡಿತಗೊಳಿಸುತ್ತಿರುವುದು ಕಡು ಶಿಕ್ಷಣ ವಿರೋಧಿ ಹಾಗೂ ವಿದ್ಯಾರ್ಥಿ ವಿರೋಧಿ ನಡೆಯಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕಳೆದ ಒಂದು ತಿಂಗಳಿಂದ ರಾಜ್ಯಾದ್ಯಂತ ವಿದ್ಯಾರ್ಥಿವೇತನ ಕುರಿತಾಗಿ ಸಮೀಕ್ಷೆ ನಡೆಸಿದಾಗ ತಿಳಿದು ಬಂದಿರುವ ಆಘಾತಕಾರಿ ವಿಷಯವೇನೆಂದರೆ ಪದವಿ, ಸ್ನಾತಕೋತ್ತರ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ದೊರೆತಿಲ್ಲ ಸದ್ಯದ ಪರಿಸ್ಥಿತಿಯಲ್ಲಿ 2022ರಲ್ಲಿ ಸುಮಾರು ಶೇ.40 ವಿದ್ಯಾರ್ಥಿಗಳಿಗೆ, 2023ರಲ್ಲಿ ಶೇ.65 ವಿದ್ಯಾರ್ಥಿಗಳಿಗೆ, 2024ರಲ್ಲಿ ಶೇಕಡ 95ರಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬಂದಿಲ್ಲದೆ ಇರುವುದು ಶೋಚನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಒಟ್ಟು 4,90,372 ವಿದ್ಯಾರ್ಥಿಗಳಿಗೆ, ಮೈಸೂರು ಜಿಲ್ಲೆಯ 37,482 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಂದಿಲ್ಲ. ಜನರ ತೆರಿಗೆಯನ್ನು ಶಿಕ್ಷಣಕ್ಕೆ ಆದ್ಯತೆ ನೀಡಿ ವಿನಿಯೋಗಿಸದೆ ವಂಚಿಸಿದೆ. ವಿದ್ಯಾರ್ಥಿವೇತನ ಸರ್ಕಾರಗಳು ಕೊಡುವ ಭಿಕ್ಷೆಯಲ್ಲ. ಬದಲಿಗೆ ವಿದ್ಯಾರ್ಥಿಗಳ ಹಕ್ಕು. ಸರ್ಕಾರದ ಈ ವಂಚನೆಯ ವಿರುದ್ಧ ಮಾ.1ರಂದು ಬೆಂಗಳೂರಿನಲ್ಲಿ ವಿದ್ಯಾರ್ಥಿವೇತನ ಉಳಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯೆ ಹೇಮಾ, ಜಿಲ್ಲಾಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಪದಾಧಿಕಾರಿಗಳಾದ ಚಂದನ, ಚಂದ್ರಿಕಾ, ದಿಶ, ಅಂಜಲಿ, ನಂದೀಶ್, ಅಭಿಷೇಕ್, ರಾಕೇಶ್ ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸಿಎಂ ಸಿದ್ದರಾಮಯ್ಯ ಖರೀದಿಸಿದ್ದ ಜಾಗ ಮುಡಾಕ್ಕೆ ಸೇರಿದ್ದಲ್ಲ

ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡರ ಸ್ಪಷ್ಟನೆ



ಮೈಸೂರು, ಫೆ.22(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖರೀದಿಸಿರುವ ಜಾಗಕ್ಕೂ ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಲೋಕಾಯುಕ್ತಕ್ಕೆ ದೂರು ನೀಡಿರುವ ಜಾಗಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಮುಡಾ ಮಾಜಿ ಅಧ್ಯಕ್ಷರಾದ ಸಿ.ಬಸವೇಗೌಡ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1997ರ ಆಸುಪಾಸಿನಲ್ಲಿ ಸಿದ್ದರಾಮಯ್ಯ ಅವರು ಹಿನಕಲ್‌ನ ಸಾಕಮ್ಮ ಎಂಬುವವರಿಂದ ಜಾಗ ಖರೀದಿಸಿದ್ದರು. ಆ ಜಾಗದಲ್ಲಿದ್ದ ಕಟ್ಟಡವನ್ನು ಕೆಡವಿದ ಬಳಿಕವಷ್ಟೇ ಮಾರಾಟ ಮಾಡಲಾಗಿತ್ತು. ಈ ಜಾಗದಲ್ಲಿ ತಮಗೆ ಮುಡಾ ನಿವೇಶನ ನೀಡಿದೆ ಎಂದು ಓರ್ವರು ನ್ಯಾಯಾಲಯದ ಮೆಟ್ಟಿಲು ಏರಿದ್ದರು ಎಂದರು.

ಆ ವೇಳೆ ನಾನೇ ಮುಡಾ ಅಧ್ಯಕ್ಷನಾಗಿದ್ದೆ. ಈ ಹಿನ್ನೆಲೆಯಲ್ಲಿ ಸರ್ವೆ ಮಾಡಿದಾಗ ಅದು ಮುಡಾ ಬಡಾವಣೆ ಪಕ್ಕದಲ್ಲಿದೆಯೇ ಹೊರತು ಮುಡಾಕ್ಕೂ ಈ ಜಾಗಕ್ಕೂ ಸಂಬಂಧವಿಲ್ಲ ಎಂಬುದು ಪತ್ತೆಯಾಯಿತು. ಬಳಿಕ ನ್ಯಾಯಾಲಯದ ಮೆಟ್ಟಿಲೇರಿದ್ದವರಿಗೆ ಒಂದು ವೇಳೆ ನಿಮಗೆ ತಪ್ಪಾಗಿ ಆ ಜಾಗದಲ್ಲಿ ನಿವೇಶನ ನೀಡಲಾಗಿದ್ದರೆ, ಬದಲಿ ನಿವೇಶನ ಪಡೆಯುವಂತೆ ತಿಳಿಸಲಾಗಿತ್ತು. ಇದು ವಾಸ್ತವವಾಗಿದೆ. ಆದರೆ ಈಗ ಬಿಜೆಪಿ ಮುಖಂಡ ಎನ್.ಆರ್.ರಮೇಶ್, ಮತ್ತೆ ಏಕೆ ಲೋಕಾಯುಕ್ತ ಮೊರೆ ಹೋಗಿದ್ದಾರೆಂಬುದು ತಿಳಿಯುತ್ತಿಲ್ಲ. ಈಗಾಗಲೇ ನ್ಯಾಯಾಲಯದಲ್ಲಿಯೇ ಅದು ಮುಡಾಕ್ಕೆ ಸೇರಿದ ಜಾಗವಲ್ಲ ಎಂಬುದು ಸ್ಪಷ್ಟವಾಗಿದೆ. ಅವರ ಆರೋಪ ಸತ್ಯಕ್ಕೆ ದೂರವಾದುದು ಎಂದು ಹೇಳಿದರು.

ಮನುಸ್ಮೃತಿ ವರ್ಸಸ್ ಭಾರತ ಸಂವಿಧಾನ ನಾಟಕ ಪ್ರದರ್ಶನ; ಸಂವಿಧಾನ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಫೆ.22(ಜಿಎ)–ದೇವರತ್ನ ಫೌಂಡೇಷನ್ ಸಹಯೋಗದೊಂದಿಗೆ ಫೆ.24ರಂದು ಸಂಜೆ 4 ಗಂಟೆಗೆ ನಗರದ ಕಲಾಮಂದಿರದ ಕಿರುರಂಗಮಂದಿರದಲ್ಲಿ ಚಾರ್ವಾಕ ಸಂಸ್ಥೆ ಸಂವಿಧಾನ ಉತ್ಸವ ಅಂಗವಾಗಿ 'ಮನುಸ್ಮೃತಿ ವರ್ಸಸ್ ಭಾರತ ಸಂವಿಧಾನ' ನಾಟಕ ಪ್ರದರ್ಶನ ಹಾಗೂ ಸಂವಿಧಾನ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಲೇಖಕ ಗಿರೀಶ್ ಮಾಚಳ್ಳಿ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು. ವಕೀಲರಾದ ಶಿವಪ್ರಸಾದ್ ಎಂ.ಸಿ. ಹುಂಡಿ ಅಧ್ಯಕ್ಷತೆ ವಹಿಸುವರು. ಸಾಹಿತಿ ಡಾ. ಬಂಜಗೆರೆ ಜಯಪ್ರಕಾಶ್ ಅವರು 'ಭಾರತ ಸಂವಿಧಾನ ಧರ್ಮ ವಿರೋಧಿಯೋ ಅಥವಾ ದುಷ್ಟ ನಿಯಮಗಳ ವಿರೋಧಿಯೋ' ವಿಷಯ ಕುರಿತು ಮಾತನಾಡಲಿದ್ದಾರೆ. ಪ್ರೊ. ಕಾಳೇಗೌಡ ನಾಗವಾರ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ರಂಗಕರ್ಮಿ ಹೆಚ್.ಜನಾರ್ಧನ್, ಹಿರಿಯ ಪತ್ರಕರ್ತ ಕೆ.ದೀಪಕ್ ಮೊದಲಾದವರಿಗೆ ವಿವಿಧ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಫೆ.25ರಂದು 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮಾಜಿ ಸಚಿವ ಎಚ್.ಆಂಜನೇಯ ಉದ್ಘಾಟಿಸುವರು. ಮಾಜಿ ಮೇಯರ್ ನಾರಾಯಣ ಅಧ್ಯಕ್ಷತೆ ವಹಿಸುವರು. ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಆರ್.ಮಹದೇವ, ಸ್ವಾಮಿ ಆನಂದ್, ಶಿವಪ್ರಸಾದ್ ಎಂ.ಸಿ.ಹುಂಡಿ ಆಗಮಿಸಲಿದ್ದಾರೆ.

ಈ ವೇಳೆ ಸಂವಿಧಾನ ಸೇವಾ ರತ್ನ ಪ್ರಶಸ್ತಿಯನ್ನು ಡಾ.ಶಿವರಾಮಕೃಷ್ಣ ಅವರಿಗೆ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಿಂಚನ ಚಿಕ್ಕೊಳಲೆ, ವಿಷ್ಣುವರ್ಧನ್ ಉಪಸ್ಥಿತರಿದ್ದರು.

ಶಾಲಾ ವಾರ್ಷಿಕೋತ್ಸವ...



ಮೈಸೂರು ತಾಲೂಕು ಕಡಕೊಳದ ಶ್ರೀ ಗುರು ವಿದ್ಯಾ ವಿಕಾಸ ಕೇಂದ್ರ ಶಾಲೆಯ 34ನೇ ವಾರ್ಷಿಕೋತ್ಸವ ಸಮಾರಂಭವನ್ನು ಕುದೇರು ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಸೋಮಶೇಖರ ಸ್ವಾಮೀಜಿ, ನಿವೃತ್ತ ಪ್ರಾಂಶುಪಾಲರಾದ ಸುನಂದ ಗುರಪ್ಪ ಭೂಪಾಲಿ, ಮಾಜಿ ತಾ.ಪಂ ಸದಸ್ಯ ಶ್ರೀಕಂಠ ತೊಂಡೇಗೌಡ, ಶಿವರಾತ್ರಿ ರಾಜೇಂದ್ರಸ್ವಾಮಿ, ಗೌಡಿಕೆ ಮಹೇಶ್, ಯಜಮಾನ ಸಿದ್ದರಾಮೇಗೌಡ, ಪಿ.ಮಹೇಶ್, ಮಹದೇವು, ಡೈರಿ ಅಧ್ಯಕ್ಷ ಬೀರೇಶ್, ಕಡಕೊಳ ಕುಮಾರಸ್ವಾಮಿ, ವೇದಾಂತ್, ಪ್ರಭುಸ್ವಾಮಿ, ಶಿವಕುಮಾರ್ ಮತ್ತಿತರರಿದ್ದರು.

'ಭಗೀರಥ' ಚಲನಚಿತ್ರ ಯಶಸ್ವಿ ಪ್ರದರ್ಶನ


ಜಯಪ್ರಕಾಶ್

ಮೈಸೂರು,ಫೆ.22(ಜಿಎ)–ರಾಜಕೀಯ ಮುಖಂಡ ಹಾಗೂ ಚಿತ್ರನಟ ಎಸ್.ಜಯಪ್ರಕಾಶ್ (ಜೆಪಿ) ನಟಿಸಿರುವ ಭಗೀರಥ ಚಲನಚಿತ್ರ ಯಶಸ್ವಿ ಪ್ರದರ್ಶನ ಕಂಡು 3ನೇ ವಾರಕ್ಕೆ ಮುನ್ನುಗ್ಗುತ್ತಿದ್ದು, ಪ್ರೇಕ್ಷಕರ ಬೆಂಬಲ ಉತ್ತಮವಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ ಮಾತನಾಡಿ, ಈ ಚಲನಚಿತ್ರ ಉತ್ತಮ ಹಾಡು, ರೋಮಾಂಚಕ ಹೊಡೆದಾಟದ ದೃಶ್ಯಗಳೊಂದಿಗೆ ಅದ್ಭುತವಾಗಿ ಮೂಡಿಬಂದಿದೆ. ಇದರಲ್ಲಿ ಜಯಪ್ರಕಾಶ್ ಅವರು ನಾಯಕ ನಟನಾಗಿ ಉತ್ತಮ ಅಭಿನಯ ಪ್ರದರ್ಶಿಸಿದ್ದಾರೆ. ಹೀಗಾಗಿ ಇದು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದ್ದು, ಜನತೆ ಚಿತ್ರಮಂದಿರಗಳಿಗೆ ಬಂದು ವೀಕ್ಷಿಸಬೇಕು ಎಂದು ಕೋರಿದರು. ಗೋಷ್ಠಿಯಲ್ಲಿ ತೇಜೇಶ್ ಲೋಕೇಶ್‌ಗೌಡ, ವರಕೋಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ನಾಗರಾಜ್ ಮತ್ತಿತರರಿದ್ದರು.

ನಿಜಶರಣ ಅಂಬಿಗರ ಚೌಡಯ್ಯರ ಚಿತ್ರಕಲಾ ಸ್ಪರ್ಧೆ

ಮೈಸೂರು, ಫೆ.22(ಎಂಕೆ)– ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ನಿಜ ಶರಣ ಅಂಬಿಗರ ಚೌಡಯ್ಯ ಜಯಂತಿ ಅಂಗವಾಗಿ ಚಿತ್ರಕಲಾ ಸ್ಪರ್ಧೆ ಆಯೋಜಿಸಿದೆ.

ಭಾಗವಹಿಸುವ ಇಚ್ಛೆಯುಳ್ಳ ಮಕ್ಕಳು ಮಕ್ಕಳು ಚಿತ್ರ ಬರೆದು ಬಣ್ಣ ಹಚ್ಚಿ ವಾಟ್ಸ್ ಆಪ್(ವಾಟ್ಸ್‌ಆಪ್ ನಂ.9448980010) ಫೆ.28ರೊಳಗೆ ಕಳುಹಿಸಬೇಕಿದೆ. ಮಾ.1 ರಂದು ನಡೆಯುವ ಜಯಂತಿ ಕಾರ್ಯ ಕ್ರಮದಲ್ಲಿ ವಿಜೇತ ಮಕ್ಕಳಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಲಾಗುವುದು

ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ಕೆಲ ಅರ್ಜಿ ತಿರಸ್ಕೃತ

ಮೈಸೂರು,ಫೆ.22–2023ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆಗಳಿಗೆ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ನೋಂದಣಿಯಾದ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಬೆಳೆ ಸಮೀಕ್ಷೆ ದತ್ತಾಂಶಗಳನ್ನು ಹೋಲಿಕೆ ಮಾಡಿ ತಾಳೆಯಾಗದಿದ್ದಕ್ಕೆ ಜಯಪುರ ಹೋಬಳಿಯ 142, ವರುಣ ಹೋಬಳಿಯ 45, ಇಲವಾಲ ಹೋಬಳಿಯ 80 ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ತಿರಸ್ಕೃತಗೊಂಡ ರೈತರ ಪಟ್ಟಿಯನ್ನು ಮೈಸೂರು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಆಯಾಯ ಹೋಬಳಿ ರೈತ ಸಂಪರ್ಕ ಕೇಂದ್ರಗಳು ಮತ್ತು ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಪ್ರದರ್ಶಿಸಲಾಗಿದೆ. ಈ ಬಗ್ಗೆ ಆಕ್ಷೇಪಣೆ ಸಲ್ಲಿಸಲು ರೈತರಿಗೆ ಅವಕಾಶ ನೀಡಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ ರೈತರು 2023ನೇ ಸಾಲಿನ ಪಹಣಿ (ಆರ್.ಟಿ.ಸಿ)ಯಲ್ಲಿ ವಿಮೆಗೆ ನೊಂದಾಯಿಸಿದ ಬೆಳೆ, ನಮೂದಾಗಿರುವ ದಾಖಲೆ ಮತ್ತು ವಿಮೆಗೆ ನೋಂದಾಯಿತ ಬೆಳೆಯ ಉತ್ಪನ್ನವನ್ನು, ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದಲ್ಲಿ, ಮಾರಾಟ ರಶೀದಿಯೊಂದಿಗೆ, ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ 15 ದಿನಗಳ ಒಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಿಧನ

ಮೊಹಮ್ಮದ್ ಅಸ್ಲಾಮ್



ಮೈಸೂರು, ಫೆ. 22– ಮೈಸೂರಿನ ಹನುಮಂತನಗರ ನಿವಾಸಿ ಹಾಗೂ ಮದೀನ ಟ್ರಾನ್ಸ್‌ಪೋರ್ಟ್ ಮಾಲೀಕರಾದ ಮೊಹಮ್ಮದ್ ಅಸ್ಲಾಮ್ (62) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮಂಡಿಮೊಹಲ್ಲಾದ ಮಸೀದಿ–ಇ–ಈದ್ಗಾದಲ್ಲಿ ನಮಾಜ್ –ಇ–ಜನಾಜ ನಡೆದ ಬಳಿಕ ಮೈಸೂರು–ಬೆಂಗಳೂರು ರಸ್ತೆ, ಟಿಪ್ಪು ಸರ್ಕಲ್ ಸಮೀಪದಲ್ಲಿರುವ ಮುಸ್ಲಿಂ ಸಮುದಾಯದ ಸ್ಮಶಾನದಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗರಾಜೇಗೌಡ



ಮೈಸೂರು: ವಿಕ್ರಾಂತ್ ಟೈರ್ಸ್ ನಿವೃತ್ತ ಉದ್ಯೋಗಿ ಹಾಗೂ ವಿಜಯನಗರ ನಾಲ್ಕನೇ ಹಂತದ ನಿವಾಸಿ ನಾಗರಾಜೇಗೌಡ(70) ಅವರು ಶುಕ್ರವಾರ ಮುಂಜಾನೆ ನಿಧನರಾದರು.

ಇವರು ಪತ್ನಿ ಮಂಜುಳಾ, ಪುತ್ರಿ ದೀಪಾ, ಅಳಿಯ ಪ್ರಸನ್ನ ಕುಮಾರ್, ಮೊಮ್ಮಗಳು ಪ್ರಿಯದರ್ಶಿನಿ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ವಿಜಯನಗರ ನಾಲ್ಕನೇ ಹಂತದ ಮುಕ್ತಿಧಾಮದಲ್ಲಿ ಅಂದೇ ಸಂಜೆ ನೆರವೇರಿತು.

ಇವರ ನಿಧನಕ್ಕೆ ವಿಕ್ರಾಂತ್ ಟೈರ್ಸ್ ಉದ್ಯೋಗಿಗಳ ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಸ್.ಪಿ.ಲಿಂಗೇಗೌಡ, ಕಾರ್ಯದರ್ಶಿ ಎನ್.ರಾಜಣ್ಣ, ಮುಖಂಡರಾದ ಶ್ರೀಕಾಂತ್, ಎ.ಟಿ.ಗೋವಿಂದರಾಜು, ಕೆ.ವಿ.ಬಸವಣ್ಣ ನಾಯ್ಡು, ಜಾರ್ಜ್, ರಾಮೇಗೌಡ, ಈಶ್ವರ್, ಅಣ್ಣೇಗೌಡ, ಶಾಂತಕುಮಾರ್, ಕಟ್ಟೇರಿ ರಾಮಚಂದ್ರ, ಮಾಧವಕೃಷ್ಣ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.02.2025 ಭಾನುವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೂಲ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಅಂತರರಾಷ್ಟ್ರೀಯ ಲಯನ್ಸ್:** ಲಯನ್ಸ್ ಪ್ರಾಂತೀಯ ಸಮ್ಮೇಳನ: ಪ್ರಾಂತ್ಯ –1, ಉದ್ಘಾಟನೆ: ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ: ಲಯನ್ಸ್ ಸಂಸ್ಥೆಯ ಪ್ರಾಂತೀಯ ಅಧ್ಯಕ್ಷ ವಿ.ಸಿ. ರವಿಕುಮಾರ್, ಅತಿಥಿಗಳು: ಲಯನ್ಸ್ ಸಂಸ್ಥೆಯ ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ ಡಾ.ಎನ್.ಕೃಷ್ಣೇಗೌಡ, ಬಸವರಾಜ್ ಶಂಕರ್ ಉಮ್ರಾಣಿ, ಸನ್ಮಾನ: ಮನ್‌ಮುಲ್ ನಿರ್ದೇಶಕ ಲಕ್ಷ್ಮೀನಾರಾಯಣ ಎನ್. ಗೌಡ, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣ, ಜೆ.ಪಿ.ನಗರ, ಬೆಳಗ್ಗೆ 9ಕ್ಕೆ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ದಿವ್ಯ ಉಪಸ್ಥಿತರು: ಶ್ರೀ ಅರ್ಜುನ ಅವಧೂತ ಸ್ವಾಮೀಜಿ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಖ್ಯ ಅತಿಥಿಗಳು: ಮೆಲ್ಲಹಳ್ಳಿ ಗ್ರಾಪಂ ಅಧ್ಯಕ್ಷೆ ನಾಗರತ್ನ ಚಂದ್ರು, ಬೆಳಗಾವಿ ವಿಟಿಯು ಉಪಕುಲಪತಿ ಡಾ.ಎಸ್.ವಿದ್ಯಾಶಂಕರ್, ಕಾವೇರಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಡಾ.ಬಿ.ಆರ್.ಚಂದ್ರಶೇಖರ್, ನರರೋಗ ತಜ್ಞ ಡಾ.ಸುಶ್ರುತ್‌ಗೌಡ, ಶ್ರೀಮತಿ ಮೈತ್ರಿ, ಸ್ಥಳ: ಶ್ರೀ ವೇಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ, ಬೆಳಗ್ಗೆ 9 ರಿಂದ.

■ **ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ:** 34ನೇ ವರ್ಷದ ವಾರ್ಷಿಕೋತ್ಸವ, ಪಲ್ಲಕ್ಕಿ ಉತ್ಸವ, ಬೆಳಗ್ಗೆ 6.30ಕ್ಕೆ ಅಮ್ಮನವರಿಗೆ ಕುಂಭಾಭಿಷೇಕ, 8.30ಕ್ಕೆ ಅಲಂಕಾರ ಪೂಜೆ, 10.30ಕ್ಕೆ ಪಲ್ಲಕ್ಕಿ ಉತ್ಸವ, ಮಧ್ಯಾಹ್ನ 12.15ಕ್ಕೆ ರಾಶಿ ಪೂಜೆ, ಬೆಳಗ್ಗೆ 11.20ರಿಂದ ಸಾಮೂಹಿಕ ವಿವಾಹ, ಸ್ಥಳ: ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಹೆಬ್ಬಾಳು.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಿಲ್ಲಾ ಕೈಗಾರಿಕಾ ಕೇಂದ್ರ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ :** ಮಹಿಳಾ ಉದ್ಯಮಿಗಳಿಂದ ತಯಾರಿಸಲಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 10ಕ್ಕೆ.

■ **ಕನ್ನಡ ಸಾಹಿತ್ಯ ಕಲಾಕೂಟ, ಜಯಂತಿ ಪ್ರಕಾಶನ :** ಎಂ.ಎಸ್. ರಾಚಪ್ಪ ಅವರ ಕೃತಿಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ನಟರಾಜ ಪ್ರತಿಷ್ಠಾನ ವಿಶೇಷ ಅಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉದ್ಘಾಟನೆ: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಶೇಖರ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಕೃತಿ ಕುರಿತು : ಪ್ರೊ.ಮೊರಬದ ಮಲ್ಲಿಕಾರ್ಜುನ, ಬಾಗಳಿ ಮಹೇಶ್, ಶ್ರೀಮತಿ ಎ. ಹೇಮಗಂಗಾ, ಮುಖ್ಯ ಅತಿಥಿಗಳು : ನಾಟಕ ರಚನೆಕಾರ ಟಿ.ಆರ್. ವೇಣುಗೋಪಾಲ್, ರುದ್ರಪ್ಪ ವೈ. ಸಾರಥಿ, ಕೆ.ಸಿ. ಓಂಕಾರಪ್ಪ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಎಂ.ಜಿ. ರಸ್ತೆ, ಬೆಳಗ್ಗೆ 10ಕ್ಕೆ.

■ **ಕಲಿಕೆ ಎಜುಕೇಷನ್ ಟ್ರಸ್ಟ್ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಪಸ್ಥಿತರು : ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಮಾಜಿ ಸಂಸದ ಪ್ರತಾಪ್ ಸಿಂಹ, ಸ್ಥಳ: ಕಲಿಕೆ ಎಜುಕೇಷನ್ ಟ್ರಸ್ಟ್ ಆವರಣ, ವಿಜಯನಗರ 4ನೇ ಹಂತ, ಬೆಳಗ್ಗೆ 10 ರಿಂದ.

■ **ಮೆಸ್ಟ್ ಪ್ರಿಸ್ಕೂಲ್ :** ಅಕ್ಷರಾಭ್ಯಾಸ, ಸರಸ್ವತಿಪೂಜೆ, ಆಶೀರ್ವಚನ : ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಮುತ್ತುರಾಯ ಸೇವಾ ಟ್ರಸ್ಟ್ ಅಧ್ಯಕ್ಷ ಬಿ. ಶ್ರೀನಿವಾಸ್, ಉದ್ಘಾಟನೆ : ಲಯನ್ ಕೆ. ದೇವೇಗೌಡ, ವಿಶೇಷ ಆಹ್ವಾನಿತರು : ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಡಾ. ಅವರೆಕಾಡು ವಿಜಯಕುಮಾರ್, ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಧನ್ಯಕುಮಾರ್, ಸ್ಥಳ: ಶಾಲೆ ಆವರಣ, ವಿಜಯನಗರ 4ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಸಮುದ್ಯತಾ ಶ್ರೋತೃ ಸಂಘ:** ವಾರ್ಷಿಕೋತ್ಸವ, ಅಧ್ಯಕ್ಷತೆ: ಮೈಸೂರು ಆಕಾಶವಾಣಿ ಉಪನಿರ್ದೇಶಕ ಎಸ್.ಎಸ್.ಉಮೇಶ್, ಉದ್ಘಾಟನೆ: ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸ್ಥಳ: ರೋಟರಿ ಸಭಾಂಗಣ, ಐಡಿಯಲ್ ಜಾವಾ ರೋಟರಿ ಶಾಲೆ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಗ್ರಾಮಾಂತರ ಬುದ್ಧಿಜೀವಿಗಳ ಬಳಗ, ಅಖಿಲ ಭಾರತೀಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್:** ರಾಷ್ಟ್ರಕವಿ ಕುವೆಂಪು ಸಾಹಿತ್ಯೋತ್ಸವ, ಉದ್ಘಾಟನೆ: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ್ ಜೋಷಿ, ಅಧ್ಯಕ್ಷತೆ: ಸಾಹಿತಿ ಡಾ.ಭೇರ್ಯ ರಾಮ್‌ಕುಮಾರ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಸೈನ್ಸ್ ಫೌಂಡೇಷನ್:** ವಿಶ್ವ ವಿಖ್ಯಾತ ವಿಜ್ಞಾನಿಗಳ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ: ಪ್ರಾಧ್ಯಾಪಕ ಡಾ.ಆರ್.ಎಸ್.ಉಮಾಕಾಂತ್, ಅಧ್ಯಕ್ಷತೆ : ಸೈನ್ಸ್ ಫೌಂಡೇಷನ್ ಅಧ್ಯಕ್ಷ ಸಿ.ಕೃಷ್ಣೇಗೌಡ, ಮುಖ್ಯ ಅತಿಥಿಗಳು : ಎಂ.ಜಿ.ಎನ್. ಪ್ರಸಾದ್, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಕಲಾ ಸುರುಚಿ ರಂಗಮನೆ:** ಸಾಹಿತ್ಯ ಚಾವಡಿ, ದಾಸ್ತೊಯೆವ್‌ಸ್ಕಿ ಅವರ ಅಪರಾಧ ಮತ್ತು ಶಿಕ್ಷೆ ಕಾದಂಬರಿ ಬಗ್ಗೆ ಲೇಖಕ ಓ.ಎಲ್.ನಾಗಭೂಷಣಸ್ವಾಮಿ, ಸ್ಥಳ: ಚಿತ್ರಭಾನು ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮೈಸೂರು ಜಿಲ್ಲಾ ಸಮಿತಿ, ಮಹಿಳಾ ಪ್ರಕಾರ, ಅಭಾಸಾಪ, ಮೈಸೂರು :** ಮೈಸೂರು ಜಿಲ್ಲಾ ಮಹಿಳಾ ಸಮಾವೇಶ, ಅಧ್ಯಕ್ಷತೆ : ರಾಜ್ಯ ಸಂಪರ್ಕ ಪ್ರಮುಖ್ ಡಾ. ವಿ. ರಂಗನಾಥ್, ಮುಖ್ಯ ಅತಿಥಿಗಳು : ಸಾಹಿತಿ ಡಾ.ವಿ. ಸೌಭಾಗ್ಯಲಕ್ಷ್ಮಿ, ಗಮಕ ಕಲಾವಿದೆ ಶ್ರೀಮತಿ ಧರಿತ್ರೀ ಆನಂದರಾವ್, ಲೇಖಕಿ ಶ್ರೀಮತಿ ಗಾಯತ್ರಿ ಸುಂದರೇಶ್, ಜಿಲ್ಲಾ ಸಮಿತಿ ಅಧ್ಯಕ್ಷ ಎಸ್. ಸುಬ್ರಹ್ಮಣ್ಯ, ಸ್ಥಳ: ಬಿ.ಎಸ್.ಎಸ್. ವಿದ್ಯೋದಯ ಶಾಲೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.45ಕ್ಕೆ.

■ **ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್:** ಡ್ಯಾನ್ಸ್ ಹಾಗೂ ಕರೋಕೆ ಕಾರ್ಯಕ್ರಮ, ಸಾಧಕರಿಗೆ ಕರ್ನಾಟಕ ಕೇಸರಿ ಪ್ರಶಸ್ತಿ ಪ್ರದಾನ ಸಮಾರಂಭ, ಉಚಿತ ಕಣ್ಣು ತಪಾಸಣೆ, ಉಚಿತ ಕನ್ನಡ ವಿತರಣೆ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು: ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಅಧ್ಯಕ್ಷತೆ: ಉದ್ಯಮಿ ಡಾ.ಸಂದೀಪ್ ಪಾಂಡೆ, ಸ್ಥಳ: ಪುರಭವನ, ಬೆಳಗ್ಗೆ 11ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಧೀರೇಂದ್ರ ನಾಗರಹಳ್ಳಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.05 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು-Indian Cancer Society, Karnataka Chapter, 9.10 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶೇಷ ಅಗತ್ಯವುಳ್ಳ ಮಕ್ಕಳ ದಂತ ರಕ್ಷಣೆ ಕುರಿತು ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಮಕ್ಕಳ ದಂತ ಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಹೆಚ್.ಪಿ.ಚಂಚಲಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯ ಶ್ರೀಶಾರದಾದೇವಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH-TRISH and Balty boy, ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮನದ ಮಾತು, 11.30 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ, **ಮಧ್ಯಾಹ್ನ:** 12.05 ವನಿತಾ ವಿಹಾರ–ನಾದಪ್ರಿಯ ಶಿವ–ಶಿವರಾತ್ರಿ ಸಂದರ್ಭದಲ್ಲಿ ಸಂಗೀತ ವೈವಿಧ್ಯ, ಪ್ರಸ್ತುತಿ : ಬೆಂಗಳೂರು ಯಲಹಂಕ ಉಪನಗರದ ಸ್ನೇಹಮಯಿ ಮಾತೃ ಮಂಡಳಿ ಸದಸ್ಯರು, 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ–ಎಂ.ಎ.ಶೋಭಾ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಹೊಸ ಯುಗದ ಆಡಳಿತಕ್ಕಾಗಿ ಏಕೀಕೃತ ಮೊಬೈಲ್ ಅಪ್ಲಿಕೇಶನ್ ಈ ಕುರಿತು ಮಾತನಾಡುತ್ತಾರೆ–ನಿವೃತ್ತ ಬ್ಯಾಂಕ್ ಅಧಿಕಾರಿ ಜಿತೇಂದ್ರರಾವ್ ಕುಲಕರ್ಣಿ, 1.20 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು-Indian Cancer Society, Karnataka Chapter, 1.25 ಭಾವಗೀತೆಗಳು–ಟಿ.ಎನ್.ಅಶ್ವಿನಿ, 2.40 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಪಂದ್ಯದ ನೇರ ವೀಕ್ಷಕ ವಿವರಣೆ, 8.00ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 8.30 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ದುಬೈ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಪಂದ್ಯದ ನೇರ ವೀಕ್ಷಕ ವಿವರಣೆ ಮುಂದುವರೆಯಲಿದೆ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಪಂಡಿತ್ ಸೌರಭ್‌ಕುಮಾರ್ ನಹರ್–ಗಾಯನ

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ವೀರಶೈವ ಲಿಂಗಾಯ ವಧು ವರರ ಸಮಾವೇಶ, ಸಾನ್ನಿಧ್ಯ: ಶ್ರೀ ಕುದೇರು ಮಠದ ಕಿರಿಯ ಶ್ರೀಗಳಾದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ, ಉದ್ಘಾಟನೆ: ದಯಾನಂದ ಪಾಟೀಲ್, ಅಧ್ಯಕ್ಷತೆ: ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಉಪಸ್ಥಿತರು: ವೀರೇಶ್ ವೀರಪ್ಪ, ಕೇಬಲ್ ಮಹೇಶ್, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಉತ್ತರಾದಿ ಮಠದ ರಸ್ತೆ, ಮ.3ರಿಂದ.

■ **ದಿ ಅನಾಥಾಲಯ :** ಸಾಹಿತ್ಯ ಸಂಘದ ವಾರ್ಷಿಕೋತ್ಸವ ಸಮಾರೋಪ ಸಮಾರಂಭ, ಅಧ್ಯಕ್ಷತೆ : ದಿ ಅನಾಥಾಲಯ ಅಧ್ಯಕ್ಷ ಸಿ.ವಿ.ಗೋಪಿನಾಥ್, ಮುಖ್ಯ ಅತಿಥಿಗಳು: ಸಹ ಪ್ರಾಧ್ಯಾಪಕ ಡಾ.ಹೇಮಚಂದ್ರ, ಸ್ಥಳ: ಅನ್ನಪೂರ್ಣ ನಿಲಯ, ದಿ ಅನಾಥಾಲಯ, ಸಂಜೆ 4ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 3ನೇ ವರ್ಷದ ಶ್ರೀ ಪುರಂದರ ತ್ಯಾಗರಾಜ ಆರಾಧನಾ ನೃತ್ಯ ಸಂಗೀತ ಮಹೋತ್ಸವ, ಉದ್ಘಾಟನೆ: ವಿದ್ವಾನ್ ವಿ.ನಂಜುಂಡಸ್ವಾಮಿ, ಡಾ. ರಂಗನಾಥ್, ವಿದ್ವಾನ್ ಕೆ.ಎಸ್.ಮೋಹನ್‌ಕುಮಾರ್, ವಿದ್ವಾನ್ ಡಾ.ಎಂ.ವಿ.ಶ್ರೀನಿವಾಸಮೂರ್ತಿ, ಮಧುರೈ ಆರ್.ಶಂಕರಪ್ರಸಾದ್ ಅವರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ, ಸ್ಥಳ: ಕಲೆಮನೆ ಸಭಾಂಗಣ, ಸಂಜೆ 4ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ:** ಗಾನ ಸಿರಿ–ವೇದಾಂತ ಲಹರಿ ಭಾಗ–12, ಶ್ರೀ ವಾದಿರಾಜ ಗುರುಸಾರ್ವಭೌಮ ವಿರಚಿತ ರುಗ್ಮಿಣೀಶ ವಿಜಯ ಸಪ್ತಾಹ, ವಿದ್ವಾನ್ ರಾಯಚೂರು ಶೇಷಗಿರಿದಾಸ್ ರಿಂದ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಸಂಜೆ 5ರಿಂದ ರಾತ್ರಿ 8.30ರವರೆಗೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು–ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ :** ರಾಮಚಂದ್ರ ಗುಪ್ತ ದತ್ತಿ ಹಾಗೂ ಮನ್ನಾರ್ ಕೃಷ್ಣಯ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಎಂ.ಕೆ. ಪೋತರಾಜು, ಸ್ಥಳ: ಆರ್ಯ ಈಡಿಗರ ಸಂಘ ವಿದ್ಯಾರ್ಥಿನಿಲಯ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.

■ **ರೋಟರಿ ಐವರಿ ಸಿಟಿ ಮೈಸೂರು :** ವಿ.ಎನ್. ಪ್ರಸಾದ್ ಮತ್ತು ತಂಡದಿಂದ ಪಿಬಿಎಸ್–ಎಸ್‌ಪಿಬಿ ಸಂಗೀತ ಸಂಜೆ, ಸ್ಥಳ: ಕಲಾಮಂದಿರ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಹಿರಿಯ ಕಲಾವಿದರಿಂದ ಕಾಣೆ ಆದವರು ನಾಟಕ ಪ್ರದರ್ಶನ, ನಿರ್ದೇಶನ : ಸೌರವ್ ಪೋದ್ದಾರ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ತ್ರಿಮೂರ್ತಿ ಶಿವಜಯಂತಿ ಮಹೋತ್ಸವದ ಪ್ರಯುಕ್ತ ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ, ಕೊಡವ ಸಾಹಿತಿ ಶ್ರೀಮತಿ ಮೊಣ್ಣಂಡ ಶೋಭಾ ಸುಬ್ಬಯ್ಯ ಅವರಿಂದ ನಾ ಕಂಡಂತೆ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಹುಣಸೂರು ರಸ್ತೆ, ಸಂಜೆ 6.45ರಿಂದ.

■ **ಅಷ್ಟಾಂಗಯೋಗ ವಿಜ್ಞಾನ ಮಂದಿರಂ :** ವಿದ್ವಾನ್ ಜಗದೀಶ ಶರ್ಮಾ ಅವರಿಂದ ಅರಿಷಡ್ವರ್ಗಗಳು ಕುರಿತು ಪ್ರವಚನ, ಸ್ಥಳ: ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ

■ **ಕ್ಲಿಯರ್ ಮೆಡಿ ರೇಡಿಯೆಂಟ್ ಆಸ್ಪತ್ರೆ :** ವಿಶ್ವಕ್ಯಾನ್ಸರ್ ದಿನದ ಅಂಗವಾಗಿ ಜಾಗೃತಿ ಕಾರ್ಯಕ್ರಮ, ಸ್ಥಳ: ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು, ಬೆಳಗ್ಗೆ 7ಕ್ಕೆ.

ಹುಯಿಲಾಳು, ಮೈಸೂರು ತಾ

■ **ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2, ಮಹಾರಾಣಿ ಮಹಿಳಾ ವಾಣಿಜ್ಯ–ನಿರ್ವಹಣಾ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ–25, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ: ಹುಯಿಲಾಳು ತಾಪಂ ಮಾಜಿ ಸದಸ್ಯ ಎಂ.ಮಹದೇವು, ಸಂಜೆ 5ಕ್ಕೆ ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಂಪನ್ಮೂಲ ವ್ಯಕ್ತಿ: ರಿಯಾಜ್ ಅಹಮದ್, ಅಧ್ಯಕ್ಷತೆ: ಪ್ರೊ.ರವಿಕುಮಾರ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಯಿಲಾಳು, ಮೈಸೂರು ತಾ.

ಮೈಸೂರು ಮಿತ್ರ

ಕೊಡಗಿನಲ್ಲಿ ಆನೆಗಳ ಅಭಯಾರಣ್ಯಕ್ಕೆ ಸರ್ಕಾರ ಸಿದ್ಧತೆ

ನಾಡಿನಲ್ಲಿ ಬೀಡುಬಿಟ್ಟಿರುವ 200 ಆನೆಗಳಿಗೆ ಸಾಫ್ಟ್ ಏರಿಯಾ ಫಿಕ್ಸ್



ಮಡಿಕೇರಿ, ಫೆ22– ಕೊಡಗಿನಲ್ಲಿ ಹತ್ತಾರು ವರ್ಷಗಳಿಂದ ಆನೆ–ಮಾನವ ಸಂಘರ್ಷ ಹೆಚ್ಚಾಗುತ್ತಲೇ ಇದೆ. ಕಳೆದ ಕೆಲ ವರ್ಷಗಳಲ್ಲಿ ಕಾಡಾನೆಗಳ ದಾಳಿಗೆ 33 ಜೀವಗಳು ಬಲಿಯಾಗಿವೆ. 53 ಜನ ಶಾಶ್ವತ ಅಂಗ ವೈಕಲ್ಯತೆ ಸೇರಿದಂತೆ ನಾನಾ ರೀತಿಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅರಣ್ಯ ಇಲಾಖೆಯ ಕ್ರಮಗಳ ಹೊರತಾಗಿಯೂ ಕಾಡಾನೆಗಳ ಉಪಟಳ ಹೆಚ್ಚಾಗುತ್ತಿದೆ. ಹಾಗಾಗಿ ರಾಜ್ಯ ಸರ್ಕಾರ 'ಗಂಧದ ಗುಡಿ' ಸಿನಿಮಾ ಮಾದರಿಯಲ್ಲೇ ಆನೆಗಳ ಅಭಯಾರಣ್ಯ ಮಾಡಲು ಸಿದ್ಧತೆ ಮಾಡಿಕೊಂಡಿದೆ.

ಇತ್ತ ಜನರಿಗೂ ತೊಂದರೆಯಾಗದೇ ಕಾಡಾನೆಗಳ ರಕ್ಷಣೆಯನ್ನೂ ಮಾಡುವ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಅದಕ್ಕಾಗಿ ಕೊಡಗಿನಲ್ಲಿ 2,000 ಹೆಕ್ಟೆರ್ ಪ್ರದೇಶ (ರಾಜ್ಯಾದ್ಯಂತ ಒಟ್ಟು 12,000 ಹೆಕ್ಟೆರ್ ಪ್ರದೇಶ)ವನ್ನು ಗುರುತಿಸಿ ನಾಡಿನಲ್ಲೇ ಬೀಡುಬಿಟ್ಟಿರುವ ಕಾಡಾನೆಗಳನ್ನು ಕಾಡಿಗೆ ಸ್ಥಳಾಂತರಿಸಲು ಮುಂದಾಗಿದೆ.

ಬೆಳೆ ನಷ್ಟ ಮತ್ತು ಜೀವಹಾನಿಗೆ ಕಾರಣವಾಗುತ್ತಿರುವ ಕಾಡಾನೆಗಳನ್ನು ಗುರುತಿಸಿ ಅಭಯಾರಣ್ಯಕ್ಕೆ ಬಿಡಲು ಮುಂದಾಗಿದೆ. ಮೊದಲಿಗೆ ಕೊಡಗಿನ ಗ್ರಾಮೀಣ ಭಾಗದಲ್ಲಿ ಬೀಡುಬಿಟ್ಟಿರುವ 200 ಆನೆಗಳಿಗೆ ಆಶ್ರಯ ಕಲ್ಪಿಸಲು ರಾಜ್ಯ ಸರ್ಕಾರ ಯೋಜಿಸಿದೆ.

ಕಳೆದ ಜನವರಿ ತಿಂಗಳಲ್ಲಿ ಮುಖ್ಯಮಂತ್ರಿಗಳು, ಅರಣ್ಯ ಸಚಿವರು, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಶಾಸಕ ಎ.ಎಸ್.ಪೊನ್ನಣ್ಣ ಉಪಸ್ಥಿತಿಯಲ್ಲಿ ನಡೆದ ವನ್ಯಜೀವಿ ಮಂಡಳಿ ಸಭೆಯಲ್ಲಿ ಉಪಟಳ ನೀಡುವ ಕಾಡಾನೆಗಳನ್ನು ಸ್ಥಳಾಂತರಿಸುವ ಬಗ್ಗೆ ಚರ್ಚೆಯಾಗಿತ್ತು. ಆಗ ಸೂಕ್ಷ್ಮ ಮತ್ತು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು ಬೇಕಿರುವ ಜಾಗವನ್ನು ಗುರುತಿಸಲು ಸರ್ಕಾರ ಸಮ್ಮತಿ ನೀಡಿತ್ತು. ಅದರಂತೆ ಈಗ ಜಾಗ ಗುರುತಿಸಲು ಸಿದ್ಧತೆ ನಡೆಯುತ್ತಿದೆ.

ಪುಂಡಾನೆಗಳನ್ನು ಅಭಯಾರಣ್ಯಕ್ಕೆ ಸ್ಥಳಾಂತರ ಮಾಡುವುದರಿಂದ ಆನೆಗಳು ಮರಳಿ ಗ್ರಾಮಕ್ಕೆ ಲಗ್ಗೆಯಿಡುವುದಿಲ್ಲ. ತಂತ್ರಜ್ಞಾನ ಬಳಸಿಕೊಂಡು ಸಾಫ್ಟ್ ಏರಿಯಾ ತೊರೆದು ಬಾರದಂತೆ ನಿಯಂತ್ರಿಸಲಾಗುತ್ತದೆ. ಈಗಾಗಲೇ ಜಿಲ್ಲೆಯ ಪೊನ್ನಂಪೇಟೆ, ವಿರಾಜಪೇಟೆ ತಾಲೂಕು ವ್ಯಾಪ್ತಿಗೆ ಒಳಪಡುವ ವಿರಾಜಪೇಟೆ ಅರಣ್ಯ ವಲಯ ವ್ಯಾಪ್ತಿಯಲ್ಲಿ 2014 ರಿಂದ 2024 ಕಾಡಾನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕಂದಕಗಳು ಮತ್ತು ರೈಲ್ವೆ ಬ್ಯಾರಿಕೇಡ್ ದುರಸ್ತಿ ಪಡಿಸುವ ಕೆಲಸಕ್ಕೆ ಸರ್ಕಾರ 21 ಕೋಟಿ ರೂ. ನೆರವು ಬಿಡುಗಡೆ ಮಾಡಿದೆ. ಜೊತೆಗೆ ವನ್ಯಜೀವಿಗಳಿಂದ ಸಂಕಷ್ಟಕ್ಕೆ ಒಳಗಾದವರಿಗೆ ತ್ವರಿತವಾಗಿ ಒಟ್ಟು 4.72 ಕೋಟಿ ರೂ.ಗಳಷ್ಟು ಪರಿಹಾರವನ್ನು ಬಿಡುಗಡೆ ಮಾಡಲಾಗಿದೆ. ಹೊಸದಾಗಿ ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಸುಮಾರು 22 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಶೀಘ್ರದಲ್ಲೇ ಹೊಸ ಬ್ಯಾರಿಕೇಡ್ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ.

ಪಿಂಚಣಿ ಹೆಚ್ಚಳಕ್ಕೆ ತ್ವರಿತ ಕ್ರಮ

ನವದೆಹಲಿ, ಫೆ. 22– ಕೈಗಾರಿಕೆ, ಸಾರ್ವಜನಿಕ, ಸಹಕಾರ ಮತ್ತು ಖಾಸಗಿ ವಲಯದ ಪಿಂಚಣಿದಾರರಿಗೆ ಕನಿಷ್ಠ ಮಾಸಿಕ ರೂ. 7,500ಕ್ಕೆ ಪಿಂಚಣಿ ಹೆಚ್ಚಿಸುವ ಬಗ್ಗೆ ಸರ್ಕಾರವು ತ್ವರಿತವಾಗಿ ಕ್ರಮಕೈಗೊಳ್ಳಲಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ, ಇಪಿಎಸ್–95 ರಾಷ್ಟ್ರೀಯ ಆಂದೋಲನ ಸಮಿತಿಗೆ (ಎನ್‌ಎಸಿ) ಭರವಸೆ ನೀಡಿದ್ದಾರೆ.

ಪಿಂಚಣಿ ಮೊತ್ತ ಹೆಚ್ಚಳ ಸಂಬಂಧ ಸಮಿತಿಯ ನಿಯೋಗವು ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಸರ್ಕಾರದ ಈ ಕ್ರಮದಿಂದ 78 ಲಕ್ಷ ಪಿಂಚಣಿದಾರರಿಗೆ ಅನುಕೂಲವಾಗಲಿದೆ ಎಂಬ ಬಗ್ಗೆ ಮನವರಿಕೆ ಮಾಡಿ ಕೊಡಲಾಗಿದೆ. ಬೇಡಿಕೆ ಈಡೇರಿಸುವುದಾಗಿ ಸಚಿವರು ಭರವಸೆ ನೀಡಿದ್ದಾರೆ ಎಂದು ಸಮಿತಿಯು ತಿಳಿಸಿದೆ.

ಹಲವು ವರ್ಷಗಳಿಂದ ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಹೋರಾಟ ನಡೆಸಲಾಗುತ್ತಿದೆ. ಕೇಂದ್ರ ಹಣಕಾಸು ಸಚಿವಾಲಯ ಮತ್ತು ಕಾರ್ಮಿಕ ಸಚಿವಾಲಯವು ಈಗ ಬೇಡಿಕೆ ಈಡೇರಿಸುವ ಬಗ್ಗೆ ಭರವಸೆ ನೀಡಿವೆ ಎಂದು ಸಮಿತಿಯ ಅಧ್ಯಕ್ಷ ಅಶೋಕ್ ರಾವುತ್ ತಿಳಿಸಿದ್ದಾರೆ.

ಮೂಲಸೌಕರ್ಯಕ್ಕಾಗಿ ಸಂಸದ ಯದುವೀರ್‌ಗೆ ನೇತಾಜಿನಗರ ನಿವಾಸಿಗಳಿಂದ ಮನವಿ ಸಲ್ಲಿಕೆ



ನೇತಾಜಿನಗರ ನಿವಾಸಿಗಳಿಂದ ಸಂಸದ ಯದುವೀರ್ ಅವರಿಗೆ ಮನವಿ ಸಲ್ಲಿಸುತ್ತಿರುವುದು.

ಮೈಸೂರು, ಫೆ.22(ಎಂಕೆ)– ಮೈಸೂರಿನ ನೇತಾಜಿನಗರದಲ್ಲಿ ರಸ್ತೆ, ಒಳಚರಂಡಿ ಅಭಿವೃದ್ಧಿ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸುವಂತೆ ನೇತಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಶನಿವಾರ ಮನವಿ ಸಲ್ಲಿಸಲಾಯಿತು.

ಕಳೆದ ಸುಮಾರು 30 ವರ್ಷಗಳ ಹಿಂದೆ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದಿಂದ ಅಭಿವೃದ್ಧಿಗೊಂಡ ನೇತಾಜಿನಗರ ಅಕ್ಷರಶಃ ದೂಳು, ಕೊಳಚೆ, ಕಟ್ಟಡ ತ್ಯಾಜ್ಯ, ಕಸದ ರಾಶಿಗಳಿಂದ ಆವೃತ್ತವಾಗಿದೆ. ಯಾವೊಂದು ರಸ್ತೆಗೂ ಡಾಂಬರೀಕರಣವಾಗಿಲ್ಲ. ಎಲ್ಲಾ ರಸ್ತೆಗಳು ಗುಂಡಿ ಬಿದ್ದಿದ್ದು, ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ. ಯುಜಿಡಿ ವ್ಯವಸ್ಥೆ ಅಧ್ವಾನವಾಗಿದ್ದು, ಕೂಡಲೇ ದುರಸ್ತಿ ಮಾಡಿಸಿಕೊಡಬೇಕು ಎಂದು ಕೋರಿದರು.

ಮನವಿ ಸ್ವೀಕರಿಸಿದ ಸಂಸದರು, ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ, ಕೂಡಲೇ ಸಂಬಂಧಪಟ್ಟ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ನೇತಾಜಿನಗರದಲ್ಲಿ ರಸ್ತೆ, ಒಳಚರಂಡಿ ಅಭಿವೃದ್ಧಿ ಹಾಗೂ ಸೂಕ್ತ ಮೂಲಸೌಕರ್ಯ ನೀಡುವಂತೆ ಸೂಚಿಸಿದರು.

ಜಿಲ್ಲಾಧಿಕಾರಿಗಳಿಗೆ ಸೂಚನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಸಲ್ಲಿಸಿದ ಮನವಿಗೆ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಅಧೀನ ಕಾರ್ಯದರ್ಶಿ ಎಂ.ಮಂಜುನಾಥ್, ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆದರೆ ಅಭಿವೃದ್ಧಿ ಯಾವಾಗಿನಿಂದ ಆರಂಭವಾಗುತ್ತೆ ಎಂಬುದು ಮಾತ್ರ ಗೊತ್ತಿಲ್ಲ ಎಂದು ನೇತಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಗಂಟಯ್ಯ(ಕೃಷ್ಣಪ್ಪ) ತಿಳಿಸಿದರು. ಈ ವೇಳೆ ಸಂಘದ ಲೋಲಾಕುಮಾರ್, ಉಮೇಶ್, ಗುರುಸ್ವಾಮಿ, ಶಿವಬಸಪ್ಪ, ನಾಗರಾಜು, ಬಿದ್ದಪ್ಪ ಮತ್ತಿತರರಿದ್ದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಆಗಿಯೇ ಆಗುತ್ತದೆ

ನಾನು ಆಕಾಂಕ್ಷಿ ಅಲ್ಲ: ಸಚಿವ ಸತೀಶ್ ಜಾರಕಿಹೊಳಿ



ಹುಬ್ಬಳ್ಳಿ, ಫೆ.22– ಕರ್ನಾಟಕದಲ್ಲಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಆಗುತ್ತೆ. ಈ ಬಗ್ಗೆ ಎಐಸಿಸಿ ಅಧ್ಯಕ್ಷ ಖರ್ಗೆ ಅವರೇ ಹೇಳಿದ್ದಾರೆ. ದೇಶದ ನಾನಾ ರಾಜ್ಯಗಳ ಪಿಸಿಸಿ ಅಧ್ಯಕ್ಷರ ಬದಲಾವಣೆ ಆಗಿದೆ. ಈಗ ತಕ್ಷಣ ಮಾಡಲು ಆಗದೆ ಇರಬಹುದು. ಆದರೆ ಆಗಿಯೇ ಆಗುತ್ತೆ ಅವರು ಯಾವಾಗ ಮಾಡುತ್ತಾರೆ ಎನ್ನುವುದನ್ನು ಕಾದು ನೋಡೋಣ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಸುದ್ದಿಗಾರರರೊಂದಿಗೆ ಮಾತನಾಡಿದ ಅವರು, ನಾನಂತೂ ಯಾವುದೇ ರೀತಿಯ ಆಕಾಂಕ್ಷಿ ಅಲ್ಲ. ನಾನು ಅಧ್ಯಕ್ಷ ಆಗಬೇಕು ಅಂತ ನನ್ನ ಹಿಂಬಾಲಕರು, ಪ್ರಮುಖರು ಇಂಗಿತ ವ್ಯಕ್ತಪಡಿಸಿದ್ದಾರೆ. ಇದು ಸಹಜ ಕೂಡ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಬಜೆಟ್ ನಂತರ ಸಿಎಂ ಬದಲಾವಣೆ, ಸಚಿವ ಸಂಪುಟ ಪುನರ್‌ರಚನೆ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಇದು ನನ್ನ ವ್ಯಾಪ್ತಿಗೆ ಬರಲ್ಲ ಅಂತ ನಾನು ಹೇಳಿದ್ದೇನೆ. ನಾನು ಮಂತ್ರಿ ಮಂಡಲದಲ್ಲಿ ಒಬ್ಬ ಮಂತ್ರಿ ಅಷ್ಟೇ. ಆ ಬಗ್ಗೆ ಚರ್ಚೆ ಮಾಡುವ ಅಧಿಕಾರ ನಮಗಿಲ್ಲ. ಏನೇ ಇದ್ದರೂ ಈ ಬಗ್ಗೆ ವರಿಷ್ಠರೇ ಚರ್ಚೆ ಮಾಡಬೇಕು. ಈಗಾಗಲೇ ಸಚಿವರ ಕಾರ್ಯವೈಖರಿ ಬಗ್ಗೆ ವರದಿ ತೆಗೆದುಕೊಂಡಿದ್ದಾರೆ. ಯಾವ ಸಚಿವರನ್ನು ತೆಗೆದುಕೊಳ್ಳಬೇಕು, ಕೈ ಬಿಡಬೇಕು ಎಂದು ಹಿರಿಯ ನಾಯಕರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು.

ಕೊಡಗು ಸಹಕಾರ ಸಂಘದ ನಿರ್ದೇಶಕರ ಆಯ್ಕೆ



ವಿಜೇತ ನಿರ್ದೇಶಕರನ್ನು ಚಿತ್ರದಲ್ಲಿ ಕಾಣಬಹುದು

ಮೈಸೂರು, ಫೆ.22–ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಕೊಡಗು ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಇಂದು (ಶನಿವಾರ) ಚುನಾವಣೆ ನಡೆಯಿತು.

ಒಟ್ಟು 13 ಸ್ಥಾನಗಳ ಪೈಕಿ ಮಹಿಳಾ ಮೀಸಲು 2 ಸ್ಥಾನಗಳಿಗೆ ಶ್ರೀಮತಿ ನಂಜಮ್ಮ ಮತ್ತು ಶ್ರೀಮತಿ ನಿರ್ಮಲಾ ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 11 ಸ್ಥಾನಗಳಿಗೆ 14 ಮಂದಿ ಸ್ಪರ್ಧಿಸಿದ್ದರು. ಅವರ ಪೈಕಿ ಕೆ.ಜಿ.ಸುಧೀರ್ ಮತ್ತು ಎ.ಎ.ಪೆಮ್ಮಯ್ಯ ಅವರು ತಲಾ 88 ಮತಗಳನ್ನು ಪಡೆದ ಕಾರಣ ಲಾಟರಿ ಎತ್ತಲಾಗಿ ಕೆ.ಜಿ.ಸುಧೀರ್ ಅವರಿಗೆ ಅದೃಷ್ಟ ಒಲಿದು ಅವರು ನಿರ್ದೇಶಕರಾಗಿ ಆಯ್ಕೆಯಾದರು.

ಉಳಿದಂತೆ ಎಂ.ಕೆ.ಪ್ರಕಾಶ್ (127 ಮತ), ಲವ್‌ಲಿ ಅಪ್ಪಯ್ಯ (119), ಪಿ.ಯು.ಗಿರೀಶ್ (118), ಎಂ.ಜಿ.ದೇವಯ್ಯ (108), ಬೈರೇಟಿರ ಕೆ.ಗಣಪತಿ (108), ಕೆ.ಪಿ.ಪೆಮ್ಮಯ್ಯ (105), ಪಿ.ಕೆ.ಬಿದ್ದಪ್ಪ (96), ಕೆ.ಕೆ.ಬೊಳ್ಳಮ್ಮ (95), ಕೆ.ಕಾವ್ಯ ಕುಟ್ಟಪ್ಪ (95), ಎಂ.ಪಿ.ಬೆಳ್ಳಿಯಪ್ಪ (94) ಅವರುಗಳು ಚುನಾಯಿತರಾದರು.

ಕಚ್ಚಾ ತೈಲ ಬೆಲೆ ಇಳಿಕೆ ನಿರೀಕ್ಷೆ



ವಿಜಯವಾಡ, ಫೆ.22– ಅಮೆರಿಕ ಸೇರಿ ವಿವಿಧ ರಾಷ್ಟ್ರಗಳಿಂದ ಅಂತರ ರಾಷ್ಟ್ರೀಯ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಪೂರೈಕೆಯಾಗುತ್ತಿದೆ. ಹಾಗಾಗಿ, ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಕಡಿಮೆಯಾಗುವ ನಿರೀಕ್ಷೆಯಿದೆ. ಇದು ಹಣದುಬ್ಬರ ಇಳಿಕೆಗೆ ನೆರವಾಗಲಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂಧನ ವಲಯಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಅಮೆರಿಕದ ನಡುವಿನ ಬಾಂಧವ್ಯ ಸದೃಢವಾಗಿದೆ ಎಂದರು. ಅರ್ಜೆಂಟೀನಾ ಸೇರಿದಂತೆ 40ಕ್ಕೂ ಹೆಚ್ಚು ರಾಷ್ಟ್ರಗಳಿಂದ ಭಾರತವು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಕೆಲವು ರಾಷ್ಟ್ರಗಳು ತೈಲ ಉತ್ಪಾದನೆ ಕಡಿತದ ಬಗ್ಗೆ ಕೈಗೊಂಡಿದ್ದ ನಿರ್ಧಾರವನ್ನು ಪರಿಷ್ಕರಿಸುವ ಸಾಧ್ಯತೆ ಇದೆ ಎಂದು ಹೇಳಿದರು.

ಡಾಲರ್‌ನಲ್ಲಿಯೇ ಕಚ್ಚಾ ತೈಲದ ವಹಿವಾಟು ನಡೆಯುತ್ತದೆ. ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಉತ್ಪಾದಿಸುವ ಬಗ್ಗೆ ಹೇಳಿದ್ದಾರೆ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ತಗ್ಗಿಸಲು ಅಗತ್ಯವಿರುವ ಕ್ರಮಕೈಗೊಳ್ಳುವುದಾಗಿಯೂ ಹೇಳಿದ್ದಾರೆ ಎಂದರು.

2022ರ ಫೆಬ್ರುವರಿಯಿಂದ ಇಲ್ಲಿಯವರೆಗೆ ವಿಶ್ವದ ಹಲವು ದೇಶಗಳಲ್ಲಿ ಪೆಟ್ರೋಲ್ ಬೆಲೆಯಲ್ಲಿ ಏರಿಕೆಯಾಗಿದೆ. ಪಾಕಿಸ್ತಾನದಲ್ಲಿ ಶೇ 48, ಬಾಂಗ್ಲಾದೇಶ ಶೇ 14.7, ಶ್ರೀಲಂಕಾ ಶೇ 37, ನೇಪಾಳ ಶೇ 16.2, ಅಮೆರಿಕ ಶೇ 14.2, ಇಟಲಿ ಶೇ 4.8, ಸ್ಪೇನ್ ಶೇ 4.2, ಜರ್ಮನಿ ಶೇ. 2 ಮತ್ತು ಫ್ರಾನ್ಸ್‌ನಲ್ಲಿ ಶೇ 4.7ರಷ್ಟು ಏರಿಕೆಯಾಗಿದೆ ಆದರೆ, ಭಾರತದಲ್ಲಿ ಶೇ 0.7ರಷ್ಟು ಇಳಿಕೆಯಾಗಿದೆ ಎಂದು ವಿವರಿಸಿದರು.

ರೈಲ್ವೆ ಕಾಮಗಾರಿಗೆ ಸೂಕ್ತ ರಕ್ಷಣಾ ವ್ಯವಸ್ಥೆ



ಮೈಸೂರು, ಫೆ.22(ಎಸ್‌ಪಿಎನ್)– ಮೈಸೂರು ಜಿಲ್ಲೆ ಕೆ.ಆರ್.ನಗರ–ಹಾಸನ ರೈಲ್ವೆ ಕ್ರಾಸಿಂಗ್ (ಎಲ್‌ಸಿ–31)ನಲ್ಲಿ ಫೆ.24ರಂದು ಬೆಳಗ್ಗೆ 8ರಿಂದ ಫೆ.25ರ ಸಂಜೆ 6 ಗಂಟೆಯವರೆಗೆ ತುರ್ತು ಕಾಮಗಾರಿ ಹಿನ್ನೆಲೆಯಲ್ಲಿ ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ಸಹಾಯಕ ಇಂಜಿನಿಯರ್ ಕಚೇರಿಯಿಂದ ಸೂಕ್ತ ರಕ್ಷಣೆ ನೀಡುವಂತೆ ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕರ ಕಾರ್ಯಾಲಯಕ್ಕೆ ಫೆ.21 ರಂದು ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಮೈಸೂರು ಉಪವಿಭಾಗದ ಡಿಎಸ್‌ಪಿ ಅವರು, ರೈಲ್ವೆ ಕಾಮಗಾರಿ ನಡೆಯುವ ವೇಳೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಪೊಲೀಸ್ ಠಾಣಾಧಿಕಾರಿಗಳಿಗೆ ಸೂಚಿಸಿದ್ದಾರೆ.

'ಮನೆ ಮನೆಗೆ ಗಂಗಾಜಲ' ಅಭಿಯಾನಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ



ಮೈಸೂರಿನ ಚಾಮುಂಡಿಪುರಂನಲ್ಲಿ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿರುವ 'ಮನೆ ಮನೆಗೆ ಗಂಗಾಜಲ' ಅಭಿಯಾನಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.

ಮೈಸೂರು, ಫೆ.22(ಎಸ್‌ಬಿಡಿ)– ಮಹಾಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಮೈಸೂರಿನ 55ನೇ ವಾರ್ಡ್ ಚಾಮುಂಡಿಪುರಂನಲ್ಲಿ ಹಮ್ಮಿಕೊಂಡಿರುವ 'ಮನೆ ಮನೆಗೆ ಗಂಗಾಜಲ' ಅಭಿಯಾನಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.

ಗಂಗಾ ಜಲದೊಂದಿಗೆ ಶಿವಸ್ತೋತ್ರಗಳ ಕರಪತ್ರವನ್ನು ಹಲವು ಮನೆಗಳಿಗೆ ವಿತರಿಸಿದ ಅವರು, ಸಾರ್ವಜನಿಕರಿಗೆ ಶಿವರಾತ್ರಿ ಶುಭಾಶಯ ಕೋರಿದರು. ಈ ವೇಳೆ ಪವಿತ್ರ ಗಂಗಾಜಲ ವಿತರಿಸುವ ಮೂಲಕ ದೇಶದ ಸಾಮರಸ್ಯ ಹಾಗೂ ಹಿಂದೂ ಧಾರ್ಮಿಕ ನಂಬಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಲಾಗುತ್ತಿದೆ ಎಂದು ಬಳಗದ ಕಾರ್ಯವನ್ನು ಬಣ್ಣಿಸಿದರು.

ಈ ವೇಳೆ ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್ ಮಾತನಾಡಿ, 144 ವರ್ಷಗಳ ಬಳಿಕ ಪುಣ್ಯ ಕ್ಷೇತ್ರ ಪ್ರಯಾಗ್‌ರಾಜ್‌ನಲ್ಲಿ ಮಹಾ ಕುಂಭಮೇಳ ನಡೆಯುತ್ತಿದೆ. ಗಂಗಾ, ಯಮುನಾ ಹಾಗೂ ಸರಸ್ವತಿಯ ನದಿಗಳ ತ್ರಿವೇಣಿ ಸಂಗಮದಲ್ಲಿ ಕೋಟ್ಯಾಂತರ ಭಕ್ತರು ಪುಣ್ಯಸ್ನಾನ ಮಾಡಿ, ಪುನೀತರಾಗುತ್ತಿದ್ದಾರೆ. ಆದರೆ ಕಾರಣಾಂತರಗಳಿಂದ ಎಲ್ಲರಿಗೂ ಮಹಾ ಕುಂಭಮೇಳದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮ ಬಳಗದ ವತಿಯಿಂದ ತ್ರಿವೇಣಿ ಸಂಗಮದ ಪವಿತ್ರ ಗಂಗಾಜಲ ಹಾಗೂ ಶಿವಸ್ತೋತ್ರದ ಕರಪತ್ರವನ್ನು ಮನೆ ಮನೆಗೆ ವಿತರಿಸಿ, ಶಿವರಾತ್ರಿ ಶುಭಾಶಯ ತಿಳಿಸಲಾಗುತ್ತಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಮುಖಂಡರಾದ ವಿದ್ಯಾ ಅರಸ್, ಮಂಜುಳಾ, ಕಾವೇರಿ, ಪಾರ್ವತಿ, ಲತಾ, ಕಾವ್ಯ, ಧರ್ಮೇಂದ್ರ, ರಮೇಶ್, ಬಸವರಾಜ್, ಪ್ರಭು, ಸುರೇಶ್, ಮುರಳಿ, ಗುರು, ಮಹೇಶ್ ಅರಸ್, ಮುದ್ದುಕೃಷ್ಣ, ಅಜಯ್ ಶಾಸ್ತ್ರಿ, ಕುಮಾರ್, ಕಿಶೋರ್, ವರುಣ್, ನಂದ ಕುಮಾರ್, ಚೇತನ್, ರಾಜೇಂದ್ರ, ಪುರುಷೋತ್ತಮ, ತೇಜಸ್, ಮಧುಸೂಧನ್, ವರುಣ್, ಭಾನುಕುಮಾರ್, ಕುಶಾಲ್, ಸಂತೋಷ್ ಮತ್ತಿತರರು ಭಾಗವಹಿಸಿದ್ದರು.

ಚಾಮುಂಡಿಬೆಟ್ಟಕ್ಕೆ ಕೊಳ್ಳಿ ಇಟ್ಟವರ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಚಾಮುಂಡಿಬೆಟ್ಟಕ್ಕೆ ಬೆಂಕಿಯಿಟ್ಟ ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ, ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.22(ಎಂಟಿವೈ)– ಚಾಮುಂಡಿಬೆಟ್ಟಕ್ಕೆ ಬೆಂಕಿಯಿಟ್ಟ ಕಿಡಿಗೇಡಿಗಳನ್ನು ಬಂಧಿಸಿ, ಕಠಿಣ ಶಿಕ್ಷೆ ನೀಡುವಂತೆ ಆಗ್ರಹಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಬೆಂಕಿಯಿಟ್ಟ ಕಿಡಿಗೇಡಿಗಳನ್ನು ಶೀಘ್ರ ಬಂಧಿಸಿ, ಶಿಕ್ಷೆ ನೀಡಬೇಕು. ಬೆಂಕಿ ಬಿದ್ದ ಸ್ಥಳದಲ್ಲಿ ಗಿಡ ನೆಡಲು ಕ್ರಮ ಕೈಗೊಳ್ಳಬೇಕು. ಚಾಮುಂಡಿಬೆಟ್ಟಕ್ಕೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು. ಪ್ರತಿ ದಿನ ಪೊಲೀಸ್ ಗಸ್ತು ತಿರುಗುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತೇಜೇಶ್ ಲೋಕೇಶ್ ಗೌಡ, ಕೃಷ್ಣಪ್ಪ, ಪ್ರಭುಶಂಕರ್, ಪ್ರಜೀಶ್, ಶಿವಲಿಂಗಯ್ಯ, ನೇಹಾ, ವರಕೋಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಬೋಗಾದಿ ಸಿದ್ದೇಗೌಡ, ಸುನೀಲ್ ಕುಮಾರ್, ಎಳನೀರು ರಾಮಣ್ಣ, ಬಸವರಾಜು, ಮಂಜುಳಾ, ನಾಗರಾಜು, ಕುಮಾರ್ ಗೌಡ, ರಘು ಅರಸ್, ಗೀತಾ ಗೌಡ, ದರ್ಶನ್ ಗೌಡ, ಪ್ರಭಾಕರ್, ಸುಬ್ಬೇಗೌಡ, ಅಕ್ಬರ್, ಸ್ವಾಮಿಗೌಡ, ಭಾಗ್ಯಮ್ಮ , ರವೀಶ್, ಪರಿಸರ ಚಂದ್ರು, ವಿಷ್ಣು ಪಾಲ್ಗೊಂಡಿದ್ದರು.

ಎನ್‌ಆರ್ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಗುದ್ದಲಿ ಪೂಜೆ

ಮೈಸೂರು, ಫೆ.22(ಎಸ್‌ಬಿಡಿ)– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡಿರುವ ಸುಮಾರು 8 ಕೋಟಿ ರೂ. ವಿವಿಧ ಕಾಮಗಾರಿಗಳಿಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿರುವ ನೂತನ ಕಟ್ಟಡ ನಿರ್ಮಾಣ ಹಾಗೂ ಹಳೇ ಕಟ್ಟಡ ನವೀಕರಣ, ಹನುಮಂತನಗರ ಬಡಾವಣೆಯಲ್ಲಿ ಕೋಟಿ ವೆಚ್ಚದಲ್ಲಿ ದೊಡ್ಡ ಮೋರಿ ಅಭಿವೃದ್ಧಿ ಕಾಮಗಾರಿ, ಸಂತ ಫಿಲೋಮಿನಾ ಚರ್ಚ್ ಬಳಿಯ ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಹನುಮಂತನಗರದಲ್ಲಿನ ದೊಡ್ಡ ಮೋರಿ ತಡೆಗೋಡೆ ಎತ್ತರ ಕಡಿಮೆ ಇರುವ ಕಾರಣದಿಂದ ಮಳೆ ಬಂದಾಗ ಮೋರಿಯ ಅಧಿಕ ಪ್ರಮಾಣದ ನೀರು ರಸ್ತೆಗೆ ಹರಿಯುತ್ತಿತ್ತು. ಇದರಿಂದ ಈ ಭಾಗದ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿತ್ತು. ಆದ್ದರಿಂದ ರಾಜ್ಯ ಹಣಕಾಸು ಆಯೋಗದ ಅನುದಾನದಿಂದ ಮೋರಿಯ ತಡೆಗೋಡೆ ಎತ್ತರಿಸಿ, ಸುರಕ್ಷತೆಗಾಗಿ ಗ್ರಿಲ್ ಅಳವಡಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಇದರಿಂದ ಮೋರಿ ನೀರು ರಸ್ತೆಗೆ ಹರಿಯುವುದು ತಪ್ಪುವುದರ ಜೊತೆಗೆ ಮೋರಿಗೆ ತ್ಯಾಜ್ಯ ಸುರಿಯುವುದನ್ನೂ ನಿಯಂತ್ರಿಸಬಹುದು ಎಂದು ಹೇಳಿದರು.

ಮೈಸೂರು ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಕ್ಷೇತ್ರ. ನಮ್ಮ ಕ್ಷೇತ್ರದಲ್ಲಿರುವ ಸಂತ ಫಿಲೋಮಿನಾ ಚರ್ಚ್‌ಗೆ ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಹಾಗಾಗಿ ಒಂದು ಕೋಟಿ ವೆಚ್ಚದಲ್ಲಿ ಚರ್ಚ್ ಮುಂಭಾಗದ ರಸ್ತೆಗಳ ಅಭಿವೃದ್ಧಿಗೂ ಚಾಲನೆ ನೀಡಲಾಗಿದೆ. ಹಾಗೆಯೇ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡಗಳ ನವೀಕರಣದ ಜೊತೆಗೆ ತರಗತಿಗೆ ಅಗತ್ಯವಾದ ಹೊಸ ಕಟ್ಟಡವನ್ನೂ ನಿರ್ಮಿಸಲಾಗುವುದು ಎಂದು ತಿಳಿಸಿದರು.



ಮೈಸೂರು ಹನುಮಂತನಗರದ ದೊಡ್ಡ ಮೋರಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಈ ವೇಳೆ ಅಜೀಜ್‌ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್, ಉಪಾಧ್ಯಕ್ಷ ಷಹೆನ್‌ಷಾ, ಮುಖಂಡರಾದ ಅಕ್ಮಲ್, ಮುಷೀರ್, ಇರ್ಫಾನ್ ಪಾಷ, ನಾಸೀರುದ್ದೀನ್ ಬಾಬು, ನಗರ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಸೈಯದ್ ಫಾರೂಖ್, ಪ್ರದೀಪ್ ಕುಮಾರ್, ಅನ್ವರ್ ಇರ್ಫಾನ್, ಖೈಸರ್ ಪಾಷ, ಹಾರೂನ್, ಅಪ್ಪು ದಾದಾ, ವಸೀಂ, ಉದ್ಯೋಗ ಮತ್ತು ತರಬೇತಿ ಇಲಾಖೆ ಅಧಿಕಾರಿಗಳಾದ ಲುಬ್ನಾ ನಿಖತ್, ಹರೀಶ್ವರಪ್ಪ, ರವಿಶಂಕರ್, ಪ್ರಾಂಶುಪಾಲ ಬೋಪಯ್ಯ ಮತ್ತಿತರರು ಉಪಸ್ಥಿತರಿದ್ದರು.

'ವಿಜಯೀ ಮಹಾರಾಜಾಧಿರಾಜ' ಕೃತಿ ಬಿಡುಗಡೆ

ಹಿಂದೂ ಧರ್ಮ ರಕ್ಷಣೆ ಮೈಸೂರು, ಮರಾಠ ಸಂಸ್ಥಾನದ ಉದ್ದೇಶವಾಗಿತ್ತು; ಯದುವೀರ್

ಮೈಸೂರು, ಫೆ.22(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಹಿರಿಯ ಲೇಖಕ ಕಾ.ಶ್ರೀ.ನಾಗರಾಜ್ ರಚಿತ 'ವಿಜಯೀ ಮಹಾರಾಜಾಧಿರಾಜ' ಕೃತಿಯನ್ನು ಶನಿವಾರ ಲೋಕಾರ್ಪಣೆಗೊಳಿಸಲಾಯಿತು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಶ್ರೀ ಜನಜಾಗರಣ ಟ್ರಸ್ಟ್ ಮೈಸೂರು ವತಿಯಿಂದ ಆಯೋಜಿಸಿದ್ದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೃತಿ ಲೋಕಾರ್ಪಣೆಗೊಳಿಸಿದರು. ಬಳಿಕ ಮಾತನಾಡಿದ ಅವರು, ರಾಜಕೀಯವಾಗಿ ಸಂಘರ್ಷವಿದ್ದರೂ ಹಿಂದೂ ಧರ್ಮ ರಕ್ಷಣೆಯಲ್ಲಿ ಮೈಸೂರು ಸಂಸ್ಥಾನ ಹಾಗೂ ಮರಾಠ ಸಾಮ್ರಾಜ್ಯದ ನಡೆ ಒಂದೇ ಆಗಿತ್ತು ಎಂದರು.

ಮರಾಠರ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಕರ್ನಾಟಕದ ಜೊತೆಗೆ ಯಾವಾಗಲೂ ಸಂಘರ್ಷ ನಡೆಯುತ್ತಿತ್ತು. ಶಾಂತಿಯ ಸಂಬಂಧ ಇರಲಿಲ್ಲ. ಚಿಕ್ಕದೇವರಾಜ ಒಡೆಯರ್ ಕಾಲದಲ್ಲೇ, ಶಿವಾಜಿಯವರು ಮರಾಠ ಸಾಮ್ರಾಜ್ಯದ ಆಳ್ವಿಕೆ ನಡೆಸುತ್ತಿದ್ದರು. ಚಿಕ್ಕದೇವರಾಜ ಒಡೆಯರ್ ತಮ್ಮದೇ ವರ್ಚಸ್ಸಿನಲ್ಲಿ ಮೈಸೂರು ಸಂಸ್ಥಾನ ವಿಸ್ತರಣೆ, ಅಭಿವೃದ್ಧಿಯಲ್ಲಿ ತೊಡಗಿದರೆ, ಶಿವಾಜಿಯವರು ಮರಾಠ ಸಾಮ್ರಾಜ್ಯ ವಿಸ್ತರಣೆ ಮತ್ತು ಅಭಿವೃದ್ಧಿ ಮಾಡುತ್ತಿದ್ದರು. ರಾಜಕೀಯವಾಗಿ ಸಂಘರ್ಷವಿದ್ದರೂ ಧಾರ್ಮಿಕವಾಗಿ ಇಬ್ಬರು ಮಹನೀಯರ ನಡೆ ಒಂದೇ ಆಗಿತ್ತು ಎಂಬ ಉಲ್ಲೇಖಗಳಿವೆ ಎಂದು ತಿಳಿಸಿದರು.



ಹಿರಿಯ ಲೇಖಕ ಕಾ.ಶ್ರೀ.ನಾಗರಾಜ್ ರಚಿತ 'ವಿಜಯೀ ಮಹಾರಾಜಾಧಿರಾಜ' ಕೃತಿಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶನಿವಾರ ಲೋಕಾರ್ಪಣೆಗೊಳಿಸಿದರು.

ಶಿವಾಜಿಯವರು ತಮ್ಮ ಬಾಲ್ಯದ ಕೆಲವು ವರ್ಷಗಳು ಬೆಂಗಳೂರಿನಲ್ಲಿದ್ದರು ಎಂಬ ಉಲ್ಲೇಖಗಳಿದ್ದು, ಹಿಂದೂ ಧರ್ಮ ಸ್ಥಾಪನೆ, ರಕ್ಷಣೆ ವಿಚಾರದಲ್ಲಿ ಚಿಕ್ಕದೇವರಾಜ ಒಡೆಯರ್ ಮತ್ತು ಶಿವಾಜಿಯವರನ್ನು ಪ್ರಶ್ನೆ ಮಾಡುವಂತಿಲ್ಲ. ಅವರ ತ್ಯಾಗವನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಿಂದೂ ಧರ್ಮದ ರಕ್ಷಣೆ, ಪಾಲನೆ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಯೋಚನೆ ಮಾಡಬೇಕು. ಶಿವಾಜಿ ಮಹಾರಾಜರ ಇತಿಹಾಸದ ಮಾಹಿತಿಯುಳ್ಳ 'ವಿಜಯೀ ಮಹಾರಾಜಾಧಿರಾಜ' ಎಲ್ಲರ ಕೈಗೆ ತಲುಪಲಿ ಎಂದು ಆಶಿಸಿದರು.

ಆರ್‌ಎಸ್‌ಎಸ್‌ನ ಹಿರಿಯ ಪ್ರಚಾರಕ ಸು.ರಾಮಣ್ಣ ಮಾತನಾಡಿ, ಶಿವಾಜಿ ಮಹಾಮಹಿಮರ ವ್ಯಕ್ತಿತ್ವದ ಜೊತೆಗೆ ಅವರ ನಿಧನದ ನಂತರವೂ ಮರಾಠ ಸಾಮ್ರಾಜ್ಯವನ್ನು ಉಳಿಸಿಕೊಂಡು ಬಂದವರ ಇತಿಹಾಸವನ್ನು ಈ ಕೃತಿ ಅನಾವರಣಗೊಳಿಸಿದೆ. ಅರವತ್ತಾದರೆ ಅರಳು–ಮರುಳು ಎಂಬುದು ವಾಡಿಕೆ ಮಾತಷ್ಟೇ. ಜೀವಮಾನ ಸಾಧನೆ ಮಾಡಿದವರ ಪಟ್ಟಿನಲ್ಲಿ ಹೆಚ್ಚಿನವರು ಅರವತ್ತರ ನಂತರವೇ ಮಾಡಿರುವುದು. ಹಾಗಾಗಿ ಅರವತ್ತು ವರ್ಷವೆಂಬ ಬಳಲಿಕೆಯ ದೌರ್ಬಲ್ಯಕ್ಕೆ ಒಳಗಾಗುವುದು ಬೇಡ. ಅರಳು–ಮರಳು ಎಂಬ ಕೃತಕ ಕಾಯಿಲೆಗೆ ಬಲಿಯಾಗದೆ ಮರಳಿ ಅರಳಿರುವ ಕಾ.ಶ್ರೀ.ನಾಗರಾಜ್ ಅವರಿಗೆ ಬರವಣಿಗೆಯೇ ವಿಷನ್ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಿರಿಯ ಲೇಖಕ ಕಾ.ಶ್ರೀ.ನಾಗರಾಜ್, ಅಂಕಣಕಾರ ರಂಗನಾಥ್ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಶಿಕ್ಷಕ : ಮೀನು ಇಲ್ಲದ ಬಲೆ, ಬೆಂಕಿ ಇಲ್ಲದ ಒಲೆ, ಖಾಲಿ ಇರುವ ನಿನ್ನ ತಲೆ ಇದ್ದರೆಷ್ಟು ಬಿಟ್ಟರೆಷ್ಟು? ಇದೇ ತರಹ ಒಂದು ಉದಾಹರಣೆ ಕೊಡು.

ಶಿಷ್ಯ : ಹೂವಿಲ್ಲದ ತೋಟ, ಸೌಂದರ್ಯವಿಲ್ಲದ ನೋಟ, ಅರ್ಥವಾಗದ ನಿಮ್ಮ ಪಾಠ ಕೇಳಿದರೆಷ್ಟು, ಬಿಟ್ಟರೆಷ್ಟು?

ಮೈಸೂರು ಮಿತ್ರ

ಭಾನುವಾರ, 23 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನೂರು ಮನಸ್ಸುಗಳ ನೋಯಿಸಿ, ಹಚ್ಚಿದರೇನು ದೇವರ ಮುಂದೆ ದೀಪ, ತಡೆಯುವುದೇನು ಅದು, ನೊಂದ ಮನಸ್ಸುಗಳು ನೀಡುವ ಶಾಪ...!!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ ಬಂತು

ನಿಮ್ಮ ಪತ್ರಗಳು

ನನೆಗುದಿಗೆ ಬಿದ್ದಿರುವ ಸ್ವಾಮಿ ವಿವೇಕಾನಂದ ವೃತ್ತದ ಕಾಮಗಾರಿ

ಮಾನ್ಯರೆ,

ಮೈಸೂರಿನ ವಿವೇಕಾನಂದನಗರದ ಬಳಿ ನಿರ್ಮಾಣವಾಗುತ್ತಿರುವ ಸ್ವಾಮಿ ವಿವೇಕಾನಂದ ವೃತ್ತದ ಕಾಮಗಾರಿಗೆ ಗ್ರಹಣ ಬಡಿದಿದ್ದು, ಕಳೆದ ಕೆಲ ತಿಂಗಳುಗಳಿಂದ ಕಾಮಗಾರಿ ಸಂಪೂರ್ಣ ಸ್ಥಗಿತಗೊಂಡಿದೆ. ಈ ಹಿಂದೆ ಇದ್ದ ವೃತ್ತವನ್ನು ಒಡೆದು ಹೊಸ ಸ್ವರೂಪದಲ್ಲಿ ವೃತ್ತ ನಿರ್ಮಿಸುವ ಕಾರ್ಯ ಪ್ರಾರಂಭದಲ್ಲಿ ಭರದಿಂದ ಸಾಗಿ ನಂತರ ನನೆಗುದಿಗೆ ಬಿದ್ದಿದ್ದು ಸದ್ಯಕ್ಕೆ ಪೂರ್ಣಗೊಳ್ಳುವ ಯಾವ ಲಕ್ಷಣಗಳು ಕಂಡುಬರುತ್ತಿಲ್ಲ.

ಈ ಹಿಂದೆ ಇದ್ದ ವೃತ್ತವೂ ಇಕ್ಕೆಲಗಳ ರಸ್ತೆ ವಿಸ್ತೀರ್ಣಕ್ಕೆ ಅನುಗುಣವಾಗಿ ನಿರ್ಮಾಣವಾಗಿತ್ತು. ಇದರಿಂದ ಸಾರಿಗೆ ಬಸ್‌ಗಳು ಸೇರಿದಂತೆ ಎಲ್ಲಾ ವಾಹನಗಳು ತಿರುವು ಪಡೆದುಕೊಂಡು ಸಂಚರಿಸಲು ಸುಲಲಿತವಾಗಿತ್ತು. ಆದರೆ ಈಗಿನ ವೃತ್ತವನ್ನು ಕೊಂಚ ವಿಸ್ತರಿಸಿ ನಿರ್ಮಿಸುತ್ತಿರುವ ಕಾರಣ ಬೃಹತ್ ವಾಹನಗಳು ಎಡ ತಿರುವು ಪಡೆಯಲು ಕೊಂಚ ತ್ರಾಸದಾಯಕವಾಗಲಿದೆ. ಕೇವಲ ಆರು ತಿಂಗಳ ಅವಧಿಯಲ್ಲಿ ಪೂರ್ಣವಾಗಬೇಕಾದ ವೃತ್ತದ ಕಾಮಗಾರಿ ಎರಡು ವರ್ಷ ಕಳೆದರೂ ಪೂರ್ಣವಾಗದೆ ಈ ಸ್ಥಳ ಪಾಳು ಪ್ರದೇಶದಂತೆ ಕಂಡುಬರುತ್ತಿದೆ.

ಇದಲ್ಲದೇ ವೃತ್ತದ ಸನಿಹವೇ ನಗರಪಾಲಿಕೆ ವತಿಯಿಂದ ನಿರ್ಮಾಣವಾಗಿರುವ ಬಸ್ ನಿಲ್ದಾಣ ಸಕಲ ರೀತಿಯಿಂದಲೂ ಸಜ್ಜುಗೊಂಡಿದ್ದು, ಯಾವುದೇ ಬಸ್‌ಗಳು ಇಲ್ಲಿಂದ ಕಾರ್ಯಾರಂಭ ಮಾಡುತ್ತಿರುವ ನಿದರ್ಶನಗಳಿಲ್ಲ. ಇದೇ ಬಸ್ ನಿಲ್ದಾಣದ ಮೇಲ್ಭಾಗದಲ್ಲಿ ಐದಾರು ಹೊಸ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗಿದ್ದು ಈ ತನಕ ಭರ್ತಿಯಾಗಿಲ್ಲ. ಸದರಿ ಮಳಿಗೆಗಳನ್ನು ವಾಣಿಜ್ಯ ಉದ್ದೇಶಕ್ಕೆ ನೀಡದೆ ಇದನ್ನು ಮೈಸೂರು – ಒನ್ ಆಗಿ ಪರಿವರ್ತಿಸಿ ಈ ಭಾಗದ ಸುತ್ತಮುತ್ತಲ ನಿವಾಸಿಗಳ ವಿದ್ಯುತ್, ನೀರು ಹಾಗೂ ಕಂದಾಯ ಪಾವತಿ ಸೇರಿದಂತೆ ಜನ–ಸಾಮಾನ್ಯರ ದಿನ ನಿತ್ಯದ ಅಗತ್ಯತೆಗೆ ಬಳಸಿಕೊಳ್ಳುವುದು ಸೂಕ್ತ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ದೆಹಲಿ ಗದ್ದುಗೆಗೂ ಮಹಿಳೆಯರಿಗೂ ಅವಿನಾಭಾವ ಸಂಬಂಧ

ಮಾನ್ಯರೆ,

ದೆಹಲಿ ವಿಧಾನಸಭೆ ಅಸ್ತಿತ್ವಕ್ಕೆ ಬಂದು 32 ವರ್ಷಗಳಾಗಿವೆ, ಈ 32 ವರ್ಷದಲ್ಲಿ 9 ವರ್ಷಗಳ ಎಎಪಿಯ ಕೇಜ್ರಿವಾಲ್ ಮುಖ್ಯಮಂತ್ರಿಯಾಗಿರುವುದನ್ನು ಬಿಟ್ಟರೆ ಉಳಿದೆಲ್ಲಾ ಅವಧಿಯಲ್ಲೂ 32 ವರ್ಷಗಳ ಇತಿಹಾಸದಲ್ಲಿ ಬಿಜೆಪಿಯ ಸುಷ್ಮಾ ಸ್ವರಾಜ್, ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಹಾಗೂ ಎಎಪಿಯ ಅತಿಶಿ. ಈಗ ಬಿಜೆಪಿಯ ರೇಖಾ ಗುಪ್ತಾ ಸೇರಿದಂತೆ ಮಹಿಳೆಯರೇ ಮುಖ್ಯಮಂತ್ರಿಗಳಾಗಿರುವುದು. ದೆಹಲಿ ಗದ್ದುಗೆಗೂ ಮಹಿಳೆಯರಿಗೂ ಒಂದು ರೀತಿಯಲ್ಲಿ ಅವಿನಾಭಾವ ಸಂಬಂಧವಿದೆ ಎನಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷಗಳಾದರೂ ಬಹುತೇಕ ರಾಜ್ಯಗಳಲ್ಲಿ ಇದುವರೆಗೂ ಒಬ್ಬ ಮಹಿಳೆ ಸಹ ಮುಖ್ಯಮಂತ್ರಿಯಾಗಿಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ ಮೈಸೂರು

ಕಾಂಗ್ರೆಸ್ ಹೈಕಮಾಂಡ್‌ಗೊಂದು ಪತ್ರ

ಮಾನ್ಯರೆ,

ಕಳೆದ ವಿಧಾನಸಭಾ ಚುನಾವಣೆಯ ಚುನಾಯಿತ ಸರ್ಕಾರವು ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದು ಇಬ್ಬರ ಪರಿಶ್ರಮವು ಕ್ರೋಢೀಕರಣಗೊಂಡಿದ್ದರಿಂದ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತು. ಇಬ್ಬರ ಪರಿಶ್ರಮಕ್ಕೆ ಇಬ್ಬರಿಗೂ ಅಧಿಕಾರ ಹಂಚಿಕೆ ಮಾಡಬೇಕಾದ್ದು ಹೈಕಮಾಂಡ್‌ನವರ ಆದ್ಯ ಕರ್ತವ್ಯವೂ ಆಗಿರುತ್ತದೆ. ಸಿದ್ದರಾಮಯ್ಯನವರು ಎರಡೂವರೆ ವರ್ಷದ ಅಧಿಕಾರವನ್ನು ಮುಗಿಸಿ ನಂತರ ಇನ್ನೂ ಎರಡೂವರೆ ವರ್ಷದ ಅಧಿಕಾರವನ್ನು ಡಿ.ಕೆ. ಶಿವಕುಮಾರ್ ಅವರಿಗೆ ಯಾವುದೇ ಮುಲಾಜಿಲ್ಲದೆ ಬಿಟ್ಟುಕೊಡಬೇಕಾಗಿರುವುದು ನ್ಯಾಯಸಮ್ಮತ ಮಾರ್ಗವಾಗಿರುತ್ತದೆ. ಈ ವಿಚಾರದ ಬಗ್ಗೆ ಕಾಂಗ್ರೆಸ್ ಪಕ್ಷದ ಕೈ ಕಮಾಂಡ್ ಪ್ರತಿನಿಧಿಗಳು ಹಂಸಕ್ಷೀರ ನ್ಯಾಯದಂತೆ ಡಿ.ಕೆ. ಶಿವಕುಮಾರ್ ಅವರಿಗೆ ಎರಡೂವರೆ ವರ್ಷದ ಮುಖ್ಯಮಂತ್ರಿ ಸ್ಥಾನವನ್ನು ನೀಡಬೇಕಾಗಿರುವುದು ನ್ಯಾಯೋಚಿತ ಮಾರ್ಗವೇ ಆಗಿದೆ. ಅಧಿಕಾರ ಹಂಚಿಕೆ ವಿಚಾರವಾಗಿ ಬಾಯಿಗೆ ಬಂದಂತೆ ಹೇಳಿಕೆ ನೀಡುತ್ತಿರುವ ಪ್ರತಿನಿಧಿಗಳು ಕಚ್ಚಾಡುತ್ತಿದ್ದು, ಮತದಾರರಲ್ಲಿ ಅಸಹ್ಯಕರ ಭಾವನೆ ಹುಟ್ಟುತ್ತಿದೆ. ಪಕ್ಷದ್ರೋಹ ಆತ್ಮದ್ರೋಹದ ಹೇಳಿಕೆಗಳನ್ನು ನೀಡುತ್ತಿರುವ ಪ್ರತಿನಿಧಿಗಳಿಂದ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ತಪ್ಪಿಸಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಪಕ್ಷದ ಕೈಕಮಾಂಡ್ ಎರಡೂವರೆ ವರ್ಷದ ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ. ಶಿವಕುಮಾರ್ ಅವರಿಗೆ ನೀಡಲೇಬೇಕಾಗಿರುತ್ತದೆ. ಕಾರಣ ಸತ್ಯಮೇವ ಜಯತೆಗೆ ಪ್ರತಿಯೊಬ್ಬರೂ ತಲೆ ಬಾಗಲೇಬೇಕಾಗಿರುತ್ತದೆ.

–ಎನ್.ಆರ್. ವಿಜಯಕುಮಾರ್, ಮಾನಸೀನಗರ, ಮೈಸೂರು.

ವಿದ್ಯಾರ್ಥಿಗಳಿಗೆ ಬಸ್ಸಿನ ಸೌಕರ್ಯ ಕಲ್ಪಿಸಿ

ಮಾನ್ಯರೇ,

ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಕೂಡ್ಲಾಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿರುವ ಬಾಗೂರು ಗ್ರಾಮಕ್ಕೆ ಬಸ್ಸಿನ ಸೌಲಭ್ಯವಿಲ್ಲದೆ ಅಲ್ಲಿನ ವಿದ್ಯಾರ್ಥಿಗಳು ಮತ್ತು ನಿವಾಸಿಗಳಿಗೆ ಬಹಳ ತೊಂದರೆಯಾಗುತ್ತಿದೆ.

ಅಲ್ಲಿನ ಶಾಲಾ ವಿದ್ಯಾರ್ಥಿಗಳು 5ನೇ ತರಗತಿ ಮುಗಿಸಿದ ನಂತರ 6ರಿಂದ 10ನೇ ತರಗತಿಯವರೆಗೆ ಕೂಡ್ಲಾಪುರಕ್ಕೆ ನಡೆದೇ ಬರಬೇಕು. ಕೂಡ್ಲಾಪುರಕ್ಕೆ ಬಂದು, ಬಾಗೂರು ರಸ್ತೆ ಹಾಯ್ದು ತರದಲೆ ಎಂಬ ಮುಂದಿನ ಗ್ರಾಮಕ್ಕೆ ಹೋಗುವ ಬಸ್ಸು ಬಾಗೂರಿಗೆ ಹೋಗುತ್ತಿಲ್ಲ. ಇದರಿಂದಾಗಿ ಅಲ್ಲಿನ ನಿವಾಸಿಗಳು ಮತ್ತು ವಿದ್ಯಾರ್ಥಿಗಳು ಕೂಡ್ಲಾಪುರಕ್ಕೆ ಬಂದು ಬಸ್ಸು ಹಿಡಿಯಬೇಕು. ಇದರಿಂದ ಅವರಿಗೆ ಒಮ್ಮೊಮ್ಮೆ ಸಮಯಕ್ಕೆ ಸರಿಯಾಗಿ ಬಸ್ಸು ಸಿಗದೇ ಪರದಾಡುವಂತಾಗಿದೆ. ಆ ಗ್ರಾಮಕ್ಕೆ ಕೇವಲ ಎರಡೇ ಬಸ್ಸು ಇರುವುದು 8.30 ಮತ್ತು 5.30ಕ್ಕೆ. ಆದರೆ ಕೆಲವೊಮ್ಮೆ 5.30ರ ಬಸ್ಸು ಬರುವುದೇ ಇಲ್ಲ. ಈ ಸಮಸ್ಯೆಯ ಪರಿಣಾಮ ಯಥೇಚ್ಛವಾಗಿ ವಿದ್ಯಾರ್ಥಿಗಳ ಮೇಲೆ ಬೀರುತ್ತಿದೆ. ಹಾಗಾಗಿ ಸಂಬಂಧಪಟ್ಟ ಇಲಾಖೆಯು ಆ ಗ್ರಾಮಕ್ಕೆ ಬಸ್ಸಿನ ಸೌಲಭ್ಯ ಒದಗಿಸುವುದು ಅತ್ಯವಶ್ಯಕವಾಗಿದೆ.

–ಪ್ರಿಯಾ, ಪತ್ರಿಕೋದ್ಯಮ ವಿದ್ಯಾರ್ಥಿನಿ



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



ನಾಡಿನಲ್ಲಿ ಚಳವಳಿಗಳು ಸಾಯುತ್ತಿವೆ

ಕನ್ನಡ ನಾಡಿನಲ್ಲಿ ಒಂದು ಕಾಲದಲ್ಲಿ ಪ್ರಖರವಾಗಿದ್ದ ಜನ ಚಳವಳಿಗಳು ಈಗ ಕಾಣೆಯಾಗುತ್ತಿವೆ. ಜನ ಚಳವಳಿಗಳು, ಜನಾದೇಶ ಪಡೆದ ಸರ್ಕಾರದ ನಡವಳಿಕೆಗಳು ಮತ್ತು ಜನ ವಿರೋಧಿ ಧೋರಣೆಗಳಿಗೆ ಕಡಿವಾಣ ಹಾಕುತ್ತಿದ್ದವು. ರೈತ ಚಳವಳಿಗಳು, ವಿದ್ಯಾರ್ಥಿ ಚಳುವಳಿಗಳು, ದಲಿತ ಚಳವಳಿಗಳು, ಕನ್ನಡಪರ ಭಾಷಾ ಚಳವಳಿಗಳು, ಸ್ತ್ರೀ ಸಮಾನತೆಯ ಹೋರಾಟಗಳು ಮುಂತಾಗಿ ಅವುಗಳ ಸಂಘಟನಾ ಶಕ್ತಿಯಿಂದ ಸರ್ಕಾರಗಳನ್ನು ಮಣಿಸುತ್ತಿದ್ದವು. ಹೇಗೆ ಕಾರ್ಯಸಾಧನೆ ಮಾಡುತ್ತಿದ್ದವು ಎಂಬಂತಹ ನೆನಪುಗಳು ಆ ಕಾಲದವರ ನೆನಪಿನ ಸುರುಳಿಯಲ್ಲಿ ಈಗಲೂ ಗುನುಗುತ್ತವೆ. ಭಾರತವೂ ಸೇರಿದ ಹಾಗೆ ಜಗತ್ತಿನ ಹಲವು ದೇಶಗಳು ಚಳುವಳಿ, ಹೋರಾಟದ ಮೂಲಕವೇ ತಮ್ಮ ದೇಶವನ್ನು ಗುಲಾಮಗಿರಿಯಿಂದ ಬಿಡುಗಡೆ ಮಾಡಿ ಸ್ವಾತಂತ್ರ್ಯವನ್ನು ದೊರಕಿಸಿಕೊಂಡವು ಎಂಬ ಚರಿತ್ರೆಗಳನ್ನು ನಾವು ಓದುತ್ತಲೇ ಮರೆಯುತ್ತಿದ್ದೇವೆ.



ಸಾಂದರ್ಭಿಕ ಚಿತ್ರ

ವರನಟ ಡಾ.ರಾಜಕುಮಾರ್ ಅವರ ನಾಯಕತ್ವದ ಗೋಕಾಕ್ ಚಳವಳಿ.

ಅಂತಹ ಜನ ಚಳುವಳಿಗಳನ್ನು ಕಾಲಾನುಕಾಲದಲ್ಲಿ ಅಧಿಕಾರಕ್ಕೆ ಬಂದಂತಹ ಸರ್ಕಾರಗಳು ತಮ್ಮ ಕುಯುಕ್ತಿಕ, ಜನತಾಂತ್ರಿಕ ವಿರೋಧಿ ನೀತಿಯಿಂದ ಹತ್ತಿಕ್ಕುತ್ತಲೇ ಬಂದು ಎಲ್ಲಾ ಚಳವಳಿಗಳು ಸಾವಿನಂಚಿನಲ್ಲಿವೆ. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದೂ ಮಹಾತ್ಮ ಗಾಂಧಿಯವರ ನಾಯಕತ್ವದ ಸ್ವಾತಂತ್ರ್ಯ ಚಳವಳಿಯಿಂದ. ಸ್ವಾತಂತ್ರ್ಯಾನಂತರದ ಭಾರತಕ್ಕೆ ಸಾರ್ವಕಾಲಿಕ ಸಂವಿಧಾನ ನೀಡಿದ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಭಾರತೀಯರೆಲ್ಲರಿಗೂ ಸಮಾನ ಹಕ್ಕು, ಅವಕಾಶಗಳು ಮತ್ತು ಮೀಸಲಾತಿಯನ್ನು ಕೊಟ್ಟಿದ್ದೂ ಭಾರತೀಯರೆಲ್ಲರ ಅನುಭವದಲ್ಲಿದೆ. ಯಾವುದೇ ಜನಾದೇಶ ಪಡೆದ ಸರ್ಕಾರಗಳ ವಿರುದ್ಧ ಚಳವಳಿ ಮಾಡುವ ಹಕ್ಕನ್ನು ಭಾರತೀಯರಿಗೆ ಸಂವಿಧಾನದಲ್ಲೇ ಕಲ್ಪಿಸುವ ಮೂಲಕ ಸಂವಿಧಾನ ಭಾರತೀಯರ ಆತ್ಮ ಎಂದು ಹೇಳಿದ್ದಾರೆ.

ವಿದ್ಯಾರ್ಥಿ ಚಳವಳಿಗಳು ಎಲ್ಲೆಡೆ ಕಾನೂನು ಪ್ರಕಾರವೇ ನಡೆಯುತ್ತಿದ್ದು, ಕಾಲೇಜು ವಿದ್ಯಾರ್ಥಿ ಸಂಘಗಳ ಚುನಾವಣೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಮತದಾನ, ಜನ ಪ್ರತಿನಿಧಿಗಳ ಆಯ್ಕೆ, ಆಡಳಿತ ಮುಂತಾಗಿ ಕಾಲೇಜು ಜೀವನದಿಂದಲೇ ಅರಿತುಕೊಳ್ಳುವ ಅವಕಾಶವಿತ್ತು. ಬಹಳ ಜನನಾಯಕರು ನಾಯಕತ್ವ ಪಡೆದಿದ್ದೇ ಕಾಲೇಜು ಚುನಾವಣೆಗಳಿಂದ. ದಿ॥ ಆರ್. ಗುಂಡೂರಾವ್, ಇಂದಿನ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಮಂತ್ರಿಗಳಾಗಿರುವ ಶ್ರೀ ರಾಜಣ್ಣ, ಶ್ರೀ ಟಿ.ಬಿ.ಜಯಚಂದ್ರ, ಶ್ರೀ ರಾಮಲಿಂಗಾರೆಡ್ಡಿ, ಶ್ರೀ ಹೆಚ್.ಎಂ. ರೇವಣ್ಣ, ಶ್ರೀ ಎಫ್.ಎಂ. ಖಾನ್, ದಿ॥ ಎಸ್.ಬಂಗಾರಪ್ಪ ಗುಲ್ಬರ್ಗದ ದಿ॥ ದೇವೇಂದ್ರಪ್ಪ ಘಾಳಪ್ಪ, ಮಂಡ್ಯದ ಶ್ರೀ ಆತ್ಮಾನಂದ, ಬಾಗಲಕೋಟೆಯ ಶ್ರೀ ಬಿ.ಬಿ.ಚಿಮ್ಮನಕಟ್ಟಿ ಹೀಗೆ ಹಲವಾರು ಮಂದಿ ರಾಜಕೀಯ ನಾಯಕರು ವಿದ್ಯಾರ್ಥಿ ಸಂಘಟನೆ ಗಳ ಮೂಲಕ ಮೇಲೆದ್ದು ಬಂದವರು. ನಾನು ಸಹ ಈ ಅಲೆಯಲ್ಲೇ ಬಂದವನು.

1970ರ Expo–70 ಎಂಬ ವಿದ್ಯಾರ್ಥಿ ಚಳವಳಿ, ಅಂದು ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರ ಅಧಿಕಾರಕ್ಕೆ ಅಂತ್ಯ ಹಾಡಿತು. ಹಾಗಾಗಿ ಕರ್ನಾಟಕದಲ್ಲಿ ವಿದ್ಯಾರ್ಥಿ ಚಳವಳಿ ಬಹಳ ಶಕ್ತಿಯುತವಾಗಿತ್ತು. ಅಂತಹ ಸಂಘಟನೆಯನ್ನು 1980ರ ದಶಕದಲ್ಲಿ ಅಧಿಕಾರದಲ್ಲಿದಂತಹ ಮುಖ್ಯಮಂತ್ರಿಯೊಬ್ಬರು ನಿಷೇಧಿಸಿದರು. ಅಲ್ಲಿಂದ ವಿದ್ಯಾರ್ಥಿ ಸಂಘಟನೆಗಳು ನಲುಗಿದವು. ಇದರೊಂದಿಗೆ ವಿದ್ಯಾರ್ಥಿಗಳಲ್ಲಿದ್ದ ರಾಜಕೀಯ ಪ್ರಜ್ಞೆಯು ಸತ್ತು ಹೋಗಿ, ಇಂದು ಯಾವುದೇ ವಿದ್ಯಾರ್ಥಿ ನಾನು ಯಾವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇನೆ ಎಂದು ಹೇಳುವ ಬುದ್ಧಿಮತ್ತೆಯನ್ನು ಕಳೆದುಕೊಂಡು, ಪರೀಕ್ಷೆಯಲ್ಲಿ 90–95–100% ಮಾರ್ಕ್ಸ್ ಬಗ್ಗೆ ಮಾತ್ರವೇ ತಲೆಕೆಡಿಸಿಕೊಳ್ಳುತ್ತಿದ್ದಾನೆ.

ಅಸ್ಸಾಂ ರಾಜ್ಯದಲ್ಲಿ ಅಲ್ಲಿನ ವಿದ್ಯಾರ್ಥಿಗಳು ಅಸ್ಸಾಂ ಗಣ ಪರಿಷತ್ ಸಂಘಟನೆ ಮೂಲಕ ಹೋರಾಡಿ, ಇದ್ದ ಸರ್ಕಾರವನ್ನು ಕಿತ್ತೊಗೆದರು. ನಂತರ ವಿದ್ಯಾರ್ಥಿ ನಾಯಕರು ವಿಧಾನ ಸಭೆ ಚುನಾವಣೆಯಲ್ಲಿ ಗೆದ್ದು ಸರಕಾರ ಮಾಡಿದರು. ಪ್ರಫುಲ್ಲ ಕುಮಾರ ಮಹಂತ ಎಂಬ ಯುವ ನಾಯಕ ಮುಖ್ಯಮಂತ್ರಿಯಾಗಿ ಹೊರ ಹೊಮ್ಮಿದ್ದರು.

ದೇಶದ ಸ್ವಾತಂತ್ರ್ಯದ ಹೋರಾಟದಲ್ಲೂ ಮಹಾತ್ಮ ಗಾಂಧಿಯವರ ಕರೆಗೆ ಓಗೊಟ್ಟು ಲಕ್ಷ ಲಕ್ಷ ವಿದ್ಯಾರ್ಥಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎದೆವೊಡ್ಡಿ ನಿಂತರು. ಇದಕ್ಕೆ ಮೈಸೂರು ನಗರದ ರಾಮಸ್ವಾಮಿ ಸರ್ಕಲ್ ಸಾಕ್ಷಿಯಾಗಿ ನಿಂತಿದೆ. ಬಂದೂಕಿಗೂ ಜಗ್ಗದೆ ರಾಮಸ್ವಾಮಿ ಭಾರತದ ರಾಷ್ಟ್ರಧ್ವಜ ಎತ್ತಿ ಹಿಡಿದಾಗ ಗುಂಡಿಗೆ ಬಲಿಯಾದ ಇಂತಹ ಎಷ್ಟೋ ಕೆಚ್ಚೆದೆಯ ಸಾಹಸಿಗರನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಪುಟಗಳಲ್ಲಿ ಕಾಣಬಹುದು.

ವಿದ್ಯಾರ್ಥಿಗಳು ಬಹು ದೊಡ್ಡ ಪಾತ್ರವನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಹಿಸಿದ್ದರು. ನಂತರ, ಬಹಳ ಜನ ವಿದ್ಯಾರ್ಥಿಗಳು ರಾಷ್ಟ್ರ, ರಾಜ್ಯ ನಾಯಕರಾಗಿ ಹೊರ ಹೊಮ್ಮುವುದರೊಂದಿಗೆ ಭವಿಷ್ಯದ ಸರಕಾರಗಳ ಆಡಳಿತದಲ್ಲಿ ಪಾಲುದಾರರಾದರು. ವಿದ್ಯಾರ್ಥಿಗಳ ಧೈರ್ಯ, ತ್ಯಾಗ, ಬಲಿದಾನಗಳು 1947ರಲ್ಲಿ ದೇಶ ದಾಸ್ಯಮುಕ್ತವಾಗಲು ಸಹಕಾರಿ ಆಗುವುದರೊಂದಿಗೆ ಭವಿಷ್ಯದಲ್ಲಿ ರಾಷ್ಟ್ರಕ್ಕೆ ಪ್ರೇರಣಾ ಶಕ್ತಿಯಾಗಿ ಉಳಿಯಿತು.

1974ರಲ್ಲಿ ಜಯಪ್ರಕಾಶ್ ನಾರಾಯಣ್‌ರವರ 'ಸಂಪೂರ್ಣ ಕ್ರಾಂತಿ' ಚಳವಳಿ ಭಾರತದಲ್ಲಿ ನಡೆದ ಮಹತ್ವದ ಸಮಾಜ ಪರಿವರ್ತನಾ ಚಳವಳಿ. ಈ ಚಳವಳಿ ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ನೈತಿಕ ಪರಿವರ್ತನೆಗಳಿಗೂ ಕಾರಣವಾಯಿತು. ಬಿಹಾರ್ ರಾಜ್ಯದಲ್ಲಿ ವಿದ್ಯಾರ್ಥಿಗಳಿಂದ ಪ್ರಾರಂಭವಾದ, ಜೆ.ಪಿ.ಅವರ ನೇತೃತ್ವದಲ್ಲಿ ನಡೆದ ಈ ಸಂಪೂರ್ಣ ಕ್ರಾಂತಿಯ ಪ್ರತಿಭಟನೆ ರಾಷ್ಟ್ರವ್ಯಾಪಿ ಹರಡಿತು ಮತ್ತು ಇಂದಿರಾ ಗಾಂಧಿಯವರ ನಾಯಕತ್ವದ ಇಡೀ ಕಾಂಗ್ರೆಸ್ ಸರಕಾರ ಮತ್ತು ಪಕ್ಷವನ್ನೇ ಅಲ್ಲಾಡಿಸಿತು.

> ಜನ ಚಳವಳಿಗಳ ಅಗತ್ಯತೆ ಹಿಂದೆಂದಿಗಿಂತಲೂ ಈಗ ಹೆಚ್ಚು ಇದೆ. ಎಲ್ಲಾ ಸಂಘಟನೆಗಳು ಬರಿಯ ಬಾಯಲ್ಲಿ ಬಾಬಾ ಸಾಹೇಬರ ಹೆಸರು ಹೇಳಿಕೊಂಡು ಅವರು ಕೊಟ್ಟಂತಹ ಹಕ್ಕುಗಳನ್ನು ಮರೆತು ಮೌನವಾಗಿರುವುದು ಜನತಂತ್ರಕ್ಕೆ ಮಾರಕವಲ್ಲವೇ?

ಕರ್ನಾಟಕದಲ್ಲಿಯೂ ಪ್ರಾರಂಭವಾದ ಈ ಚಳವಳಿಯಲ್ಲಿ ವಿದ್ಯಾರ್ಥಿ ನಾಯಕನಾಗಿದ್ದ ನಾನು, ಕನ್ನೇಗೌಡರಕೊಪ್ಪಲಿನ ಅಂದು ಲಾಯರ್ ಬಸವರಾಜ್, ದಿ॥ ಪ್ರೊ.ರಾಮದಾಸ್, ತೇಜಸ್ವಿನಿ ಕುವೆಂಪು, ಪ್ರೊ॥ ನಂಜುಂಡಸ್ವಾಮಿ, ದಿ॥ಅನಂತಮೂರ್ತಿಯವರು, ಪ॥ ಮಲ್ಲೇಶ್ ಇನ್ನು ಅನೇಕರು ಸೇರಿ ಜೆ.ಪಿ.ಯವರನ್ನು ಮೈಸೂರಿಗೂ ಕರೆತಂದಿದ್ದೆವು. ಪುರಭವನದಲ್ಲಿ ಆಗ ಬಹಳ ದೊಡ್ಡ ಸಭೆ ಜರುಗಿತ್ತು.

ಸ್ತ್ರೀ ಸ್ವಾತಂತ್ರ್ಯ ಚಳವಳಿ ಕರ್ನಾಟಕದಲ್ಲಿ ಮಹಿಳೆಯರ ಶೋಷಣೆಯ ವಿರುದ್ಧ ಮತ್ತು ಅವರ ಶಿಕ್ಷಣ, ಉದ್ಯೋಗ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸಿದೆ. ನಿಜಲಿಂಗಪ್ಪನವರ ಸರ್ಕಾರದಲ್ಲಿ ಸಮಾಜ ಕಲ್ಯಾಣ ಸಚಿವೆಯಾಗಿದ್ದ ಯಶೋಧರ ದಾಸಪ್ಪನವರು ಮದ್ಯಪಾನ ನಿಷೇಧ ಮಾಡದಿದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಸಿಡಿದೆದ್ದಾಗ, ನಿಜಲಿಂಗಪ್ಪನವರು ಕರ್ನಾಟಕದಲ್ಲಿ ಮದ್ಯಪಾನ ನಿಷೇಧ ಮಾಡಿದರು (1964–65ನೇ ಇಸವಿ).

ಯುರೋಪ್ ಖಂಡದಲ್ಲಿಯೂ ಮಹಿಳೆಯರ ನಿರಂತರ ಹೋರಾಟದ ಫಲವಾಗಿ 50 ವರ್ಷಗಳ ಹಿಂದಷ್ಟೇ ಮಹಿಳೆಯರಿಗೆ ರಾಜಕೀಯ ಅಧಿಕಾರ ದಕ್ಕಿತು. ಹಾಗೆ ನೋಡಿದರೆ ನಮ್ಮ ದೇಶ ಈ ವಿಷಯದಲ್ಲಿ ಬಹಳ ಮುಂದಿದೆ. ಕರ್ನಾಟಕದಲ್ಲಿ ಮೈಸೂರಿನ ಯದುವಂಶದ ಅರಸರು ವಿಶೇಷವಾಗಿ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದರು. ಅವರಿಂದಾಗಿಯೇ, ಮಹಾರಾಣಿ ಮಹಿಳಾ ಹೈಸ್ಕೂಲ್, ಮಹಾರಾಣಿ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮುಂತಾಗಿ ಜ್ಞಾನಗಂಗೋತ್ರಿಯೇ ನೆಲೆ ನಿಂತಿದೆ. ಅಂಬೇಡ್ಕರ್ ಅವರ ಸಿದ್ಧಾಂತಗಳ ಪ್ರಭಾವದಿಂದ ದಲಿತ ಮಹಿಳೆಯರು ತಮ್ಮ ಹಕ್ಕಿಗಾಗಿ ಹೋರಾಡಿದರು. ಸಾವಿತ್ರಿಬಾಯಿ ಫುಲೆ ಅವರ ಹೆಸರು ಮುಂಚೂಣಿಯಲ್ಲಿ, ಶಾಶ್ವತವಾಯಿತು.

ಕನ್ನಡ ಭಾಷಾ ಚಳವಳಿಯ ಮೂಲಕವೇ ನಾನೂ ಸೇರಿದಂತೆ ವಾಟಾಳ್ ನಾಗರಾಜ್, ನಾರಾಯಣ ಕುಮಾರ್ ಇನ್ನು ಹಲವರು ರಾಜಕೀಯಕ್ಕೆ ಬಂದವರು. ಭಾಷಾ ಚಳವಳಿ ಕನ್ನಡಿಗರಲ್ಲಿ ದೊಡ್ಡ ಅಭಿಮಾನವನ್ನೇ ಮೂಡಿಸಿತ್ತು ಈಗ ಅದೆಲ್ಲಾ ಹೋಗಿ ಕನ್ನಡಿಗರು, ರಾಜಧಾನಿ ಬೆಂಗಳೂರು ಸೇರಿದ ಹಾಗೆ ಹಲವಾರು ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರಾಗುತ್ತಿದ್ದೇವೆ. ಡಾ॥ರಾಜಕುಮಾರ್ ಅವರ ನಾಯಕತ್ವದಲ್ಲಿ ನಡೆದ ಗೋಕಾಕ್ ಚಳವಳಿ, ಆರ್.ಗುಂಡೂರಾಯರ ಸರಕಾರವನ್ನೇ ನಡುಗಿಸುವುದರೊಂದಿಗೆ ಮುಖ್ಯಮಂತ್ರಿ ಗುಂಡೂರಾಯರ ಹೀನಾಯ ಸೋಲಿಗೆ ನಾಂದಿಯಾಗಿದ್ದು ಈಗ ಚರಿತ್ರೆ.

ಪ್ರಸ್ತುತ ಸರ್ಕಾರಗಳು ಸಹ ಕನ್ನಡ–ಭಾಷೆ ಕನ್ನಡಿಗರ ಅನ್ನ–ಬದುಕನ್ನು ಕೊಲ್ಲುತ್ತಲೇ ಕೆಂಗಲ್ ಹನುಮಂತಯ್ಯನವರು ಕಟ್ಟಿದ ವಿಧಾನಸೌಧದೆದುರು ಕೋಟ್ಯಾಂತರ ರೂಪಾಯಿ ಸರ್ಕಾರಿ ಹಣ ಖರ್ಚು ಮಾಡಿ ಕನ್ನಡಮ್ಮನ ಪುತ್ಥಳಿಯನ್ನು ಸ್ಥಾಪಿಸಿದ್ದಾರೆ. ಇದರಿಂದ ಬತ್ತಿದ ಕನ್ನಡದ ಅಭಿಮಾನ, ಈ ಪುತ್ಥಳಿಯನ್ನು ನೋಡುತ್ತಲಾದರೂ ಉಕ್ಕಿ ಹರಿಯಲಿ. ಕನ್ನಡಿಗರ ಬದುಕನ್ನು ಕಟ್ಟಿಕೊಡಲು ರಾಜ್ಯ ಸರ್ಕಾರಗಳು ಕಟಿಬದ್ಧರಾಗಬೇಕು. ಇಲ್ಲವಾದರೆ ಎಲ್ಲವೂ ಬರೀ ಹೋಳು!

ಹಸಿರು ಟವಲ್‌ಗಳನ್ನು ಹೆಗಲ ಮೇಲೆ ಹಾಕಿದಂತಹ ರೈತರ ಚಳವಳಿ, ದಲಿತ ಚಳವಳಿಗಳನ್ನು ಅಲ್ಲಲ್ಲಿ ಕಾಣಬಹುದು. ಅವುಗಳೂ ಶಕ್ತಿ ಕಳೆದುಕೊಂಡು ಕೆಲವು ರಾಜಕಾರಣಿಗಳ, ರಾಜಕೀಯ ಪಕ್ಷಗಳ ಕೈಗೊಂಬೆಗಳಾಗಿವೆ. ಪ್ರೊಫೆಸರ್ ನಂಜುಂಡಸ್ವಾಮಿ ನಾಯಕತ್ವದ ರೈತ ಚಳವಳಿ, ರೈತ ವಿರೋಧಿ ಸರ್ಕಾರಗಳಿಗೆ ಚಳಿ ತರಿಸಿತ್ತು. ಗ್ರಾಮದೊಳಗೆ ಯಾವ ಸರ್ಕಾರಿ ಅಧಿಕಾರಿಗಳು ಅಥವಾ ಬ್ಯಾಂಕಿನಿಂದ ವಸೂಲಾತಿಗಾಗಿ ಬರುವ ಅಧಿಕಾರಿಗಳು ರೈತ ನಾಯಕರ ಅಪ್ಪಣೆ ಇಲ್ಲದೆ ಊರಿನ ಒಳಗೆ ಪ್ರವೇಶಿಸುವಂತಿರಲಿಲ್ಲ. ಊರಿನ ಹೆಬ್ಬಾಗಿಲಿನಲ್ಲಿಯೇ ಎಚ್ಚರಿಕೆಯ ಫಲಕಗಳನ್ನು ಹಾಕುತ್ತಿದ್ದರು. ಹೀಗೆ ಶಕ್ತಿಯುತವಾಗಿದ್ದ ಒಂದು ಚಳವಳಿ, ರೈತ ನಾಯಕರ ಅಧಿಕಾರ ಲಾಲಸೆಗೆ ಬಲಿಯಾಯಿತು. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗ್ಗಡೆಯವರು ತಮ್ಮ ಕುಯುಕ್ತಿಕ ನೀತಿಯೊಂದಿಗೆ ಇಡೀ ಚಳುವಳಿಯನ್ನೇ ಬಗ್ಗು ಬಡಿದರು.

ದಲಿತ ಚಳವಳಿಗೆ ಮುಹೂರ್ತವಿಟ್ಟಿದ್ದೇ ಕೃಷ್ಣರಾಜನಗರದಲ್ಲಿ. ಡಿಎಸ್‌ಎಸ್ ನಾಯಕ ಕೃಷ್ಣಪ್ಪನವರು ಪುರಸಭಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಆಗ ಪ್ರಾರಂಭ ಮಾಡಿದ ದಲಿತ ಚಳವಳಿಯನ್ನು ಕೃಷ್ಣಪ್ಪನವರು ಭದ್ರಾವತಿಗೆ ಕೊಂಡೊಯ್ದರು. ಮುಂದಕ್ಕೆ ಚಳವಳಿ ಬಹಳ ದೊಡ್ಡದಾಗಿ ಬೆಳೆಯಿತು. ದಲಿತರನ್ನು ಅಸ್ಪೃಶ್ಯತಾ ಭಾವದಿಂದ ನೋಡುತ್ತಿದ್ದ ಕಣ್ಣುಗಳ ದೃಷ್ಟಿ ಸ್ಪಷ್ಟವಾಯಿತು. ದಲಿತ ಯುವಕರ ಧೀರೋದ್ಧಾತ ಸಂಘಟಿತ ಪ್ರಯತ್ನ ಶ್ಲಾಘನೀಯವಾಯಿತು.

ಜನ ಚಳವಳಿಗಳ ಅಗತ್ಯತೆ ಹಿಂದೆಂದಿಗಿಂತಲೂ ಈಗ ಹೆಚ್ಚು ಇದೆ. ಎಲ್ಲಾ ಸಂಘಟನೆಗಳು ಬರಿಯ ಬಾಯಲ್ಲಿ ಬಾಬಾ ಸಾಹೇಬರ ಹೆಸರು ಹೇಳಿಕೊಂಡು ಅವರು ಕೊಟ್ಟಂತಹ ಹಕ್ಕುಗಳನ್ನು ಮರೆತು ಮೌನವಾಗಿರುವುದು ಜನತಂತ್ರಕ್ಕೆ ಮಾರಕವಲ್ಲವೇ? ಯಾವ ನಾಡಿನಲ್ಲಿ ಅಕ್ಷರ–ಆರೋಗ್ಯ ಗಟ್ಟಿಯಾಗಿರುತ್ತದೋ ಅಂತಹ ನಾಡು ಸರ್ವಾಂಗೀಣವಾಗಿ ಗಟ್ಟಿಯಾಗಿರುತ್ತದೆ ಎನ್ನುವ ಸರಳ ಸತ್ಯ ಎಲ್ಲರಿಗೂ ಗೊತ್ತಿರುವಂತಹದ್ದೆ.

ಹೊರದೇಶದಲ್ಲಿ ಹಿಂದೂ ಧರ್ಮದ ಕುರುಹುಗಳು?

(ಫೆಬ್ರವರಿ 16ರ ಸಂಚಿಕೆಯಿಂದ)


ಇವುಗಳನ್ನು ನೋಡುತ್ತಾ ವಿಶಾಲವಾದ ಹೊರಭಾಗದಿಂದ ಮೆಟ್ಟಿಲುಗಳನ್ನೇರಿ ಮೊದಲ ಮಹಡಿ ತಲುಪಬಹುದು. ಅಲ್ಲಿಯೂ ವಿಶಾಲ ಪ್ರಾಂಗಣಗಳು, ವಿಶಿಷ್ಟ ಶೈಲಿಯ ಕೆತ್ತನೆಯ ಕಂಬಗಳು ಮತ್ತು ಚಾವಡಿಯ ನಂತರ ಅದರ ಮೇಲಿನ ಅಂತಸ್ತು. ಹೀಗೆ ಐದು ಅಂತಸ್ತುಗಳನ್ನು ಮುಗಿಸಿದ ನಂತರವೇ ಮುಖ್ಯ ಗರ್ಭಗೃಹ. ಈಗ ಅಲ್ಲಿರುವುದು ಬುದ್ಧನ ದೊಡ್ಡ ಶಿಲ್ಪ. ಮೂಲ ವಿಷ್ಣುವಿನ ಮೂರ್ತಿಯನ್ನು ಕೆಳಗಿನ ಅಂತಸ್ತಿನಲ್ಲಿಯೇ ಇಡಲಾಗಿದೆ.

ಈ ನಗರವನ್ನು ತೊರೆದ ತರುವಾಯ ಏಳನೆಯ ಜಯವರ್ಮನು ರಾಜ್ಯವನ್ನು ಮರುಸ್ಥಾಪಿಸಿ ಅಂಕೋರ್‌ಥಾಮ್ ಮತ್ತು ಬಯಾನ್ ಎಂಬಲ್ಲಿಗೆ ಅದನ್ನು ವರ್ಗಾಯಿಸಿದ. ಅದು ಅಂಕೋರ್‌ವಾಟ್‌ಗಿಂತ ಸ್ವಲ್ಪ ಚಿಕ್ಕದಷ್ಟೇ. ಅಲ್ಲಿಯೂ ದೇವಾಲಯಗಳ ಸಮುಚ್ಚಯ, ಸಮುದ್ರ ಮಥನದ ಬೃಹತ್ ಶಿಲ್ಪದ್ವಾರ ಮುಂತಾದವುಗಳಿವೆ. ಇಲ್ಲಿ ಗುಡಿಯ ಪ್ರಾರಂಭದಲ್ಲಿಯೇ ರಾಜನ ಮುಖವನ್ನುಳ್ಳ ಗೋಪುರವು ನಿಮ್ಮನ್ನು ಸ್ವಾಗತಿಸುತ್ತದೆ. ಅಷ್ಟು ಬೃಹದಾಕಾರದ ಕಲ್ಲಿನಲ್ಲಿ ಮೂರು ಮುಖಗಳುಳ್ಳ ರಾಜನ ಪ್ರಶಾಂತ ಮುಖಮುದ್ರೆ, ಕೆಳಗೆ ಐರಾವತದ ಮೇಲೆ ಕುಳಿತ ಇಂದ್ರ ಮುಂತಾದ ಅಳಿದುಳಿದ ಶಿಲ್ಪವನ್ನು ಕಾಣಬಹುದು.

ಈ ಸಮುಚ್ಚಯದಲ್ಲಿ ಒಟ್ಟು 54 ಗೋಪುರದಲ್ಲಿರುವ ರಾಜನ ಮುಖವು ಅವನ 54 ಪ್ರಾಂತ್ಯಗಳನ್ನು ಪ್ರತಿನಿಧಿಸುತ್ತವೆಯಂತೆ. ಇದರ ಮುಖ ಮಂಟಪದಲ್ಲಿರುವ 12 ಕಂಬಗಳಲ್ಲಿ ಅತ್ಯಂತ ಸುಂದರ ಅಪ್ಸರೆಯರ ನೃತ್ಯ ಭಂಗಿಗಳು ಕಾಣಸಿಗುತ್ತವೆ. ಅವರ ನೃತ್ಯದ ವಿವಿಧ ಭಂಗಿಗಳು ಮತ್ತು ಅದರ ಲಾಸ್ಯ ಎಂಥವರನ್ನೂ ಆಕರ್ಷಿಸದೆ ಬಿಡದು. ಶಿಥಿಲವಾಗಿರುವ ದೇವಾಲಯಗಳ ಮೆಟ್ಟಿಲುಗಳಿಗೆ ಮರದ ಅಟ್ಟಣಿಗೆಗಳನ್ನು ಜೋಡಿಸಲಾಗಿದೆ. ಗುಡಿಗಳಲ್ಲಿ ಮುರಿದು ಬಿದ್ದ ಪಾಣಿಪೀಠಗಳು ಶಿವನ ನೆನಪಿನ ಜೊತೆಗೆ ಹಾಳು ಹಂಪೆಯನ್ನು ನೆನಪಿಸುತ್ತವೆ. ಮೇಲಂತಸ್ತಿನ ಈ ಅವಶೇಷಗಳ ದೊಡ್ಡದೊಡ್ಡ ಗೋಪುರಗಳೆಲ್ಲವೂ ರಾಜನ ಶಾಂತ ಮುಖವನ್ನು ಹೊತ್ತಿವೆ ಒಂದೊಂದು ಅಂತಸ್ತಿನಲ್ಲಿಯೂ ನಾಲ್ಕು ಮೂಲೆಗಳಲ್ಲಿ ಸಿಂಹದ ಅವಶೇಷಗಳು ಕಾಣುತ್ತವೆ. ಯಾವ ಗರ್ಭಗುಡಿಯಲ್ಲೂ ಮೂಲ ವಿಗ್ರಹವಿಲ್ಲ. ಕೆಲವೆಡೆ ಬುದ್ಧನ ಮೂರ್ತಿ ಮಾತ್ರ ಇವೆ. ಪ್ರತೀ ಅಂತಸ್ತಿನ ನಾಲ್ಕು ದಿಕ್ಕಿನಲ್ಲಿರುವ ಚಿಕ್ಕ ಗುಡಿಗಳಲ್ಲಿ ಇರುವ ಮುರಿದ ಪಾಣಿಪೀಠಗಳು ಇದು ಶೈವ ಗುಡಿ ಎಂಬುದನ್ನು ಖಚಿತಪಡಿಸುತ್ತವೆ. ದೇವಾಲಯದ ಹೊರಭಾಗದಲ್ಲಿ ಜಯವರ್ಮನ ಮಿಲಿಟರಿ ಶಕ್ತಿಯನ್ನು ವಿವರವಾಗಿ ಕೆತ್ತಲಾಗಿದೆ. ಆನೆ, ಕುದುರೆ, ಕಾಲ್ದಳ, ಗುಲಾಮರಲ್ಲದೆ ಜನಜೀವನದ ಅತ್ಯಂತ ಸುಂದರ ಭಿತ್ತಿಚಿತ್ರಗಳು ಮನದಾಳಕ್ಕೆ ಇಳಿಯುತ್ತವೆ.

ನಿಮ್ಮ ಪ್ರವಾಸದಲ್ಲಿ ದರ್ಶಿಸಬಹುದಾದ ಗುಡಿಗಳೆಂದರೆ ಬಂಟಿಸ್ರೈ, ಈಸ್ಟ್‌ಮೇಬನ್, ಟಪ್ರೋಂ ಮತ್ತು ಪ್ರಸಟ್‌ಕ್ರವನ್, ಬಂತೇಕಡೆ.

ಬಂಟಿಸ್ರೈ ಶಿವನ ಗುಡಿ. ಮೊದಲಿಗೆ ಮುರಿದ ತೋರಣದ ಮುಖ ಮಂಟಪವು ನಿಮ್ಮನ್ನು ವಿಶಾಲವಾಗಿ ಬಯಲಿಗೆ ತೆರೆದುಕೊಂಡ ಹಾದಿಯಲ್ಲಿ ಸುತ್ತಲೂ ಆವರಿಸಿರುವ ಆದಿಶೇಷನ ದರ್ಶನ ಮಾಡಿಸುತ್ತದೆ. ಎರಡೂ ಬದಿಯಲ್ಲಿ ಬಿದ್ದ ಅನೇಕ ಕೆತ್ತನೆಯ ಕಂಬಗಳು, ಗ್ರಂಥ ಭಂಡಾರದ ಅವಶೇಷಗಳು.




ವಿಷ್ಣುವಿನ ದೇವಸ್ಥಾನ.

> ಪ್ರಕೃತಿಯ ಶಕ್ತಿಯ ಎದುರು ಮಾನವ ನಿರ್ಮಿತಿಗಳು ಏನೂ ಮಾಡಲಾರವೆಂಬುದಕ್ಕೆ ಸಾಕ್ಷಿಯಂತಿದೆ ಈ ಸ್ಥಳ. ಊಹಿಸಲೂ ಸಾಧ್ಯವಾಗದಷ್ಟು ದೊಡ್ಡ, ಗಟ್ಟಿ ಮುಟ್ಟಾದ ಗುಡಿಯನ್ನು ಬೃಹತ್ ವೃಕ್ಷಗಳು ಕಬಳಿಸಿ ನಿಂತಿರುವುದು ಅಚ್ಚರಿಯ ದೃಶ್ಯ

ಒಳಗೆ ಸರಿದಂತೆ ಗುಡಿಗಳ ಮೇಲ್ಭಾಗದಲ್ಲಿ ಕಾಣುವ ಜಯಲಕ್ಷ್ಮಿ, ಕೈಲಾಸವನ್ನು ಹೊತ್ತ ರಾವಣ ಮುಂತಾದ ವಿವರವಾದ ಶಿಲ್ಪ. ಮುಖ್ಯಗುಡಿಯ ಮೇಲ್ಭಾಗದಲ್ಲಿ ಎಂಟು ಕೈಗಳ ನಾಟ್ಯ ಶಿವನ ಮೂರ್ತಿ, ಎದುರಿಗೆ ಮುರಿದು ಬಿದ್ದ ನಂದಿ, ಪಕ್ಕದ ಚಿಕ್ಕಗುಡಿಯ ಮೇಲೆ ಮಳೆ ಸುರಿಸುತ್ತಿರುವ ಇಂದ್ರ ಮುಂತಾದವುಗಳಿವೆ.

ಎತ್ತರದಲ್ಲಿರುವ ಈಸ್ಟ್‌ಮೇಬನ್ ಶಿವನ ಗುಡಿ ಮೇಲೇರುತ್ತಿದ್ದಂತೆ ನಾಲ್ಕು ಚಿಕ್ಕ ಗುಡಿಗಳು, ಮೂಲ ಗುಡಿ ಎಲ್ಲವೂ ಭಗ್ನಗೊಂಡಿವೆ. ಪ್ರೇರುಪ್ ಅನ್ನು ಸ್ಮಶಾನ ಶಿವ ಎನ್ನುತ್ತಾರೆ. ವಿಶಾಲ ಪ್ರದಕ್ಷಿಣಾಪಥ ಮತ್ತು ಸುಂದರಕೆತ್ತನೆಯ ಕಂಬಗಳನ್ನುಳ್ಳ ಹಲವು ಚಿಕ್ಕ ಗುಡಿಗಳನ್ನುಳ್ಳದ್ದು. ಸತ್ತ ನಂತರ ಚಿತಾಭಸ್ಮವನ್ನು ತಂದು ಇಲ್ಲಿಯೂ ಹಾಕುತ್ತಿದ್ದುದರಿಂದ ಈ ಹೆಸರು. ಯುನೆಸ್ಕೋದವರಿಂದ ಪುನರ್ನಿರ್ಮಾಣಕಾರ್ಯ ನಡೆಯುತ್ತಿರುವುದರಿಂದ ಮೂಲ ಗರ್ಭಗೃಹಕ್ಕೆ ಈಗ ಪ್ರವೇಶವಿಲ್ಲ.

ನಿಮ್ಮ ಮನದಲ್ಲಿ ಅಚ್ಚಳಿಯದೆ ಉಳಿಯುವ ಗುಡಿಗಳಲ್ಲಿ ಟಪ್ರೋಂ ಒಂದು. ಕಾಂಬೋಡಿಯಾ ಸರ್ಕಾರ ಮತ್ತು ಭಾರತೀಯ ಪುರಾತತ್ವ ಇಲಾಖೆಗಳು ಜಂಟಿಯಾಗಿ ಇದರ ಸಂರಕ್ಷಣಾ ಕಾರ್ಯವನ್ನು ನಿರ್ವಹಿಸುತ್ತಿವೆ. ಪ್ರಕೃತಿಯ ಶಕ್ತಿಯ ಎದುರು ಮಾನವ ನಿರ್ಮಿತಿಗಳು ಏನೂ ಮಾಡಲಾರವೆಂಬುದಕ್ಕೆ ಸಾಕ್ಷಿಯಂತಿದೆ ಈ ಸ್ಥಳ. ಊಹಿಸಲೂ ಸಾಧ್ಯವಾಗದಷ್ಟು ದೊಡ್ಡ, ಗಟ್ಟಿಮುಟ್ಟಾದ ಗುಡಿಯನ್ನು ಬೃಹತ್ ವೃಕ್ಷಗಳು ಕಬಳಿಸಿ ನಿಂತಿರುವುದು ಅಚ್ಚರಿಯ ದೃಶ್ಯ. ಗುಡಿಯ ಎಲ್ಲ ಭಾಗದಲ್ಲೂ ಹೇಗೆಂದರೆ ಹಾಗೆ ತನ್ನ ಬೃಹತ್ ಬೇರುಗಳನ್ನು ಚಾಚಿ, ಇಡೀ ದೇವಾಲಯವನ್ನು ಅಲ್ಲಾಡಿಸಿ, ಬೀಳಿಸಿರುವುದಕ್ಕೆ ಸಾಕ್ಷಿಯಾಗಿ ಕುಸಿದು ಬಿದ್ದಿರುವ ಸಾವಿರಾರು ಕಲ್ಲುಗಳ–ಕಂಬಗಳ ರಾಶಿ. ಅವುಗಳ ಮಧ್ಯೆ ಹೆಜ್ಜೆ ಇಡುತ್ತಾ ಹೋದಂತೆ ಬೇರುಗಳ ಮಧ್ಯೆ ಹಣಿಕಿ ಹಾಕುತ್ತಿರುವ ಅಪ್ಸರೆಯರು, ಅಲಂಕೃತ ತೋರಣಗಳು, ಅನಾಥರಾಗಿ ರೋದಿಸುತ್ತಿರುವ ದೇವದೇವತೆಗಳ ಸಮೂಹ ಕಂಡುಬರುತ್ತವೆ. ಬೀಳದೆ ನಿಂತ ಗೋಡೆಯ ಮೇಲಿನ ಕುಸುರಿ ಕೆಲಸ ತನ್ನ ಗತವೈಭವವನ್ನು ಸಾರುವಂತಿದೆ. ಗರ್ಭಗೃಹ ಎನಿಸಿಕೊಳ್ಳುವ ಸ್ಥಳದಲ್ಲಿ ಬೋಧಿಸತ್ವನ ಪೀಠ ಮಾತ್ರ ಇದೆ. ಬೆಂಗ್ (ಮಹಾಗನಿ), ಸ್ಪೋನ್, ಟ್ರಾಂಗ್ ಮುಂತಾದ ತೇಗದ ಜಾತಿಗೆ ಸೇರಿದ ಮರಗಳು ಎಸಗಿರುವ ಮಹಾಕಾರ್ಯ ಇವು. ಕತ್ತರಿಸಿದ, ಕೊರೆದ ಲಕ್ಷ ಲಕ್ಷ ಸಂಖ್ಯೆಯ ದೊಡ್ಡ ಕಲ್ಲುಗಳ ರಾಶಿಯೇ ಇಲ್ಲಿದೆ.



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಪ್ರಸಟ್‌ಕ್ರವನ್ ವಿಷ್ಣುವಿನ ಚಿಕ್ಕಗುಡಿ. ತೆರೆದ ಬಯಲಿನಲ್ಲಿರುವ ಇದನ್ನು ಮಹೇಂದ್ರವರ್ಮ ಎಂಬ ರಾಜನು ಕಟ್ಟಿಸಿದ್ದಾನೆ. ಇದರ ವಿಶೇಷತೆಯೆಂದರೆ ಮೂರ್ತಿಗಳನ್ನು ಕಲ್ಲಿನಿಂದ ಮಾಡದೆ, ಇಟ್ಟಿಗೆಯಂತಹ ಗೋಡೆಗಳ ಮೇಲೆಯೇ ಮೂಡಿಸಿರುವುದು. ಲಕ್ಷ್ಮಿ, ದುರ್ಗೆ, ವಿಷ್ಣುವಿನ ಗುಡಿಯ ಎದುರಿಗೇ ಮಹಾನವಮಿ ದಿಬ್ಬವನ್ನು ನೆನಪಿಸುವಂತಹ ಎತ್ತರದಕಟ್ಟೆ, ಈ ಎಲ್ಲ ಗುಡಿಗಳನ್ನು ನೋಡಲು ಸುಮಾರು ಐದಾರು ದಿನಗಳಾದರೂ ಬೇಕು. ದಿನವೊಂದಕ್ಕೆ ಸರಾಸರಿ ಹತ್ತು ಹನ್ನೆರಡು ಕಿಲೋಮೀಟರಿನಷ್ಟು ನಡೆಯಬೇಕಾಗುತ್ತದೆ. ಅದಕ್ಕೆ ಪೂರ್ವ ಸಿದ್ಧತೆ ಮಾಡಿಕೊಂಡಿದ್ದರೆ ಒಳಿತು. ಗುಡಿಗಳನ್ನು ನೋಡಿ ದಣಿದು ಹೊರಬರುವ ಪ್ರವಾಸಿಗರಿಗಾಗಿ ಉದ್ದನೆಯ ಬೊಂಬಿನ ಲೋಟಗಳಲ್ಲಿ ತಾಳೆ ಮರದ–ತಾಟಿನುಂಗಿನ ಮಧುರರಸದ ಪೇಯವನ್ನು ಮಾರುವ ಸ್ಥಳೀಯರಿರುತ್ತಾರೆ. ಭಾರತದಂತೆಯೇ ಎಲ್ಲ ಗುಡಿಗಳ ಹೊರಗೆ ಸ್ಮರಣಿಕೆಗಳನ್ನು ಮಾರುವ ವ್ಯಾಪಾರೀ ಹುಡುಗಿಯರ ದಂಡನ್ನು ನೀವು ಎದುರಿಸಬೇಕಾಗುತ್ತದೆ.

ಸೀಮ್‌ರೀಪಿನಲ್ಲಿ ಇಳಿದುಕೊಳ್ಳಲು ನಿಮ್ಮ ಜೇಬಿಗೆ ತಕ್ಕಂತಹ ಹೋಟೆಲುಗಳಿವೆ. ಭಾರತೀಯ ಊಟ–ತಿಂಡಿ ಸಿಗುವ ಹೋಟೆಲುಗಳೂ ಲಭ್ಯ. ಇಲ್ಲಿಯ ಕರೆನ್ಸಿಯಾದ ರಿಯಲ್‌ಗಿಂತ ವ್ಯಾಪಾರಿಗಳು ಡಾಲರಿನಲ್ಲಿಯೇ ವಹಿವಾಟು ನಡೆಸಲು ಬಯಸುತ್ತಾರೆ. ಅನೇಕ ರೀತಿಯ ಹಣ್ಣುಗಳು, ಸಾಂಬಾರ ಪದಾರ್ಥಗಳು ಮತ್ತು ಅರಿವೆ ಮತ್ತಿತರ ಸಾಮಾನು ಕೊಳ್ಳಲು ಪಬ್ ಸ್ಟ್ರೀಟ್ ಮುಂತಾದ ಮಾರುಕಟ್ಟೆಗಳು ಹೇರಳವಾಗಿವೆ. ದೇವಾಲಯ ಸಮುಚ್ಚಯಗಳನ್ನು ಸುತ್ತಿ ದಣಿದ ದೇಹಕ್ಕೆ ಆರೈಕೆ ಮಾಡಲು ಹಲವಾರು ಮಸಾಜ್ ಕೇಂದ್ರಗಳಿವೆ. ಸಂಜೆ ನಿಮ್ಮ ಮನರಂಜಿಸಲು ಅಪ್ಸರೆಯರ ನೃತ್ಯ ಕಾರ್ಯಕ್ರಮಗಳಿವೆ. ಇಲ್ಲಿ ಕಾಂಬೋಡಿಯಾದ ನೃತ್ಯ ಮತ್ತು ಊಟ ಸವಿಯಬಹುದು. ಇಲ್ಲಿಯ ಜನ ಎಲ್ಲ ರೀತಿಯ ಮಾಂಸಾಹಾರ ಇಷ್ಟಪಡುತ್ತಾರೆ. ಒಟ್ಟಾರೆ ಹಿಂದೂ ಸಂಸ್ಕೃತಿ ಎಲ್ಲಿವರೆಗೂ ಹಬ್ಬಿತ್ತೆಂಬುದನ್ನು ತಿಳಿವ ಕುತೂಹಲ ನಿಮ್ಮದಾಗಿದ್ದರೆ, ಕಾಲುಗಳು ಗಟ್ಟಿಯಾಗಿರುವಾಗಲೇ ಒಮ್ಮೆ ಅಂಕೋರ್‌ವಾಟಿಗೆ ಭೇಟಿ ಕೊಡಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಹಾಸನ ಮಿತ್ರ

ವಿವಿ ಉಳಿಸಲು ಆಗ್ರಹಿಸಿ ಎಬಿವಿಪಿ ಹೋರಾಟ



ಎಬಿವಿಪಿ ಹಾಸನ ಜಿಲ್ಲಾ ಪ್ರಮುಖ್ ಕಾಂತರಾಜು ಮಾತನಾಡಿದರು.

ಹಾಸನ: ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿ, ನಗರದ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಶಿಕ್ಷಕ ತಜ್ಞರ ದುಂಡುಮೇಜಿನ ಸಭೆ ನಡೆಸಿ ವಿವಿಗೆ ಕಾಯಕಲ್ಪ ನೀಡುವ ದೃಷ್ಟಿಯಿಂದ ಈ ಸಾಲಿನ ವಾರ್ಷಿಕ ಬಜೆಟ್‌ನಲ್ಲಿಯೇ ಅನುದಾನವನ್ನು ಮೀಸಲಿಡಬೇಕೆಂದು ಆಗ್ರಹಿಸಲು ನಿರ್ಧರಿಸಲಾಯಿತು.

ವಿವಿಗಳನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು ಎಂದು ಆಗ್ರಹಿಸಿ ರಾಜ್ಯಾದ್ಯಂತ ಹೋರಾಟಕ್ಕೆ ಮುಂದಾಗುವುದಾಗಿ ಎಬಿವಿಪಿ ಜಿಲ್ಲಾ ಪ್ರಮುಖ್ ಕಾಂತರಾಜು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದುಂಡು ಮೇಜಿನ ಸಭೆಯಲ್ಲಿ ರಾಜ್ಯದ ಮಾಜಿ ಉನ್ನತ ಶಿಕ್ಷಣ ಸಚಿವರು, ವಿಧಾನಪರಿಷತ್ ಸದಸ್ಯರು, ಶಿಕ್ಷಣ ತಜ್ಞರು, ವಿಶ್ರಾಂತ ಉಪಕುಲಪತಿಗಳು, ವಿವಿಧ ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಸದಸ್ಯರು, ಉಪನ್ಯಾಸಕರು ಸೇರಿದಂತೆ ವಿದ್ಯಾರ್ಥಿ ಮುಖಂಡರು ಭಾಗವಹಿಸಿದ್ದರು. ಈ ದುಂಡು ಮೇಜಿನ ಸಭೆಯಲ್ಲಿ ವಿವಿಗಳನ್ನು ಮುಚ್ಚಲು ಹೊರಟಿರುವ ರಾಜ್ಯ ಸರ್ಕಾರದ ನಡೆ ಅವೈಜ್ಞಾನಿಕ ಹಾಗೂ ಯಾವ ಶಿಕ್ಷಣ ತಜ್ಞರ ಶಿಫಾರಸ್ಸಿನ ಆಧಾರದ ಮೇಲೆ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದು ಆತಂಕ ವ್ಯಕ್ತಪಡಿಸಲಾಯಿತು ಎಂದರು.

ಗೋಷ್ಠಿಯಲ್ಲಿ ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಜ್ಞಾನ ಗೌಡ, ತಾಲೂಕು ಪ್ರಮುಖ್ ಮೋಹನ್, ಕಾರ್ಯಕರ್ತರಾದ ಶ್ರೇಯಾ, ಸ್ಮಿತಾ ಇತರರಿದ್ದರು.

ಫೆ.27ರಿಂದ ಉಚಿತ ಹೀಲಿಂಗ್ ಶಿಬಿರ

ಹಾಸನ: ನಗರದ ಸಾಲಗಾಮೆ ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿ ಮಂದಿರ, ಹಾಸನ ಪ್ರಾಣ ವಿದ್ಯಾ ಕೇಂದ್ರ, ಹೇಮಾವತಿ ನಗರ, ಹಾಸನ ಇವರ ಸಹಯೋಗದೊಂದಿಗೆ ಫೆ.27ರಿಂದ ಮಾ.3ರವರೆಗೆ ಯೋಗ ಪ್ರಾಣ ವಿದ್ಯಾ ಹೀಲಿಂಗ್ ಉಚಿತ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಶಿರಡಿ ಸಾಯಿ ಚಾರಿಟೆಬಲ್ ಟ್ರಸ್ಟ್ ಕಾರ್ಯದರ್ಶಿ ಸಾಯಿ ಪ್ರಸಾದ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 5 ದಿನಗಳು ಪ್ರತಿ ದಿನ ಬೆಳಗ್ಗೆ 8ರಿಂದ ಸಂಜೆ 7ರವರೆಗೆ ಉಚಿತ ಹೀಲಿಂಗ್ ಶಿಬಿರ ನಡೆಯಲಿದ್ದು, ಈ ಶಿಬಿರವು ಯಾವುದೇ ಸ್ಪರ್ಶರಹಿತ ಮತ್ತು ಔಷಧಿ ರಹಿತ ಪೂರಕ ಚಿಕಿತ್ಸಾ ವಿಧಾನವಾಗಿದ್ದು, ವಿವಿಧ ಕಾಯಿಲೆಗಳಿಗೆ ಹೀಲಿಂಗ್ ಮೂಲಕ ಚಿಕಿತ್ಸೆ ನೀಡಲಾಗುವುದು ಎಂದರು. ಸಾರ್ವಜನಿಕರು ಮತ್ತು ರೋಗಿಗಳು ಇದರ ಸದುಪಯೋಗಪಡಿಸಿಕೊಳ್ಳುವಂತೆ ಕೋರುತ್ತೇವೆ. ಪ್ರಮುಖವಾಗಿ ರಕ್ತದೊತ್ತಡ, ಮಧುಮೇಹ, ಗ್ಯಾಸ್ಟ್ರಿಕ್, ಅಸ್ತಮ, ಲಿವರ್ ಸಮಸ್ಯೆ, ಮಂಡಿನೋವಿನ ತೊಂದರೆ, ಥೈರಾಯ್ಡ್, ಕಿಡ್ನಿ ತೊಂದರೆ, ಆಮವಾತ ಕಣ್ಣಿನ ಸಮಸ್ಯೆ, ಚರ್ಮದ ರೋಗ, ಮಾನಸಿಕ ಒತ್ತಡ ಸೇರಿದಂತೆ ಹಲವಾರು ರೋಗಗಳಿಗೆ ಚಿಕಿತ್ಸೆ ಕೊಡಲಾಗುತ್ತದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಶ್ರೀ ಶಿರಡಿ ಸಾಯಿ ಚಾರಿಟಬಲ್ ಟ್ರಸ್ಟ್ ಟ್ರಸ್ಟಿ ನೀಲಕಂಠ, ಅಶ್ವಿನ್, ಭಾರತೀ ಇತರರು ಉಪಸ್ಥಿತರಿದ್ದರು.

ಜನರಲ್ ಸರ್ಜರಿ ಅಂತಿಮ ಪರೀಕ್ಷೆಯಲ್ಲಿ ಡಾ.ಕೃಷ್ಣಮೂರ್ತಿ ಪುತ್ರ ಸೂರ್ಯಗೆ 3ನೇ ಸ್ಥಾನ




ಹಾಸನ: ವಲಗೆರಹಳ್ಳಿ ಕೃಷ್ಣಮೂರ್ತಿ ಅವರ ಪುತ್ರ ಡಾ.ಸೂರ್ಯ 2024ರ ಎಂ.ಎಸ್ ಜನರಲ್ ಸರ್ಜರಿ ಅಂತಿಮ ಪರೀಕ್ಷೆಯಲ್ಲಿ ಇನ್‌ಸ್ಟಿಟ್ಯೂಟ್ ಗೋಲ್ಡ್ ಮೆಡಲ್ ಗೆಲ್ಲುವ ಗೌರವ ಪಡೆದಿದ್ದಾರೆ. ಅವರು ನವದೆಹಲಿಯ ವರ್ಧಮಾನ ಮಹಾವೀರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಫ್ದರ್ಜಂಗ್ ಆಸ್ಪತ್ರೆಯಲ್ಲಿ ಈ ಪದವಿ ಸಂಪಾದಿಸಿದ್ದಾರೆ. ಅವರು ಗುರು ಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯ, ನವದೆಹಲಿಯಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ 3ನೇ ಸ್ಥಾನ ಗಳಿಸಿದ್ದಾರೆ. ಡಾ.ಸೂರ್ಯ ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಾಜಿ ವೈದ್ಯಕೀಯ ಅಧೀಕ್ಷಕ ಡಾ.ವಿ.ಆರ್.ಕೃಷ್ಣಮೂರ್ತಿ ಹಾಗೂ ಅನುರಾಧ ಎಸ್.ಸಿ. ಅವರ ಪುತ್ರ.



ಸಿಎಂ ಆರೋಗ್ಯ ವಿಚಾರಣೆ... ಮುಡಾ ಮಾಜಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಮರಿಗೌಡರು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಅವರ ಆರೋಗ್ಯ ವಿಚಾರಿಸಿದರು.

ಚಂದ್ರಶೇಖರ್‌ಗೆ ಅಭಿನಂದನೆ...



ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ನೂತನ ಅಧ್ಯಕ್ಷ ಎಸ್.ಚಂದ್ರಶೇಖರ್ ಅವರನ್ನು ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಯು.ಎಸ್.ರಮೇಶ್, ಮಾಜಿ ಕಾರ್ಪೊರೇಟರ್ ಆರ್.ಸುನಂದ ಕುಮಾರ್, ರಾಜ್ಯ ಕಾಂಗ್ರೆಸ್‌ನ ಎಸ್‌ಸಿ ಘಟಕದ ಸದಸ್ಯ ಕುಮಾರಸ್ವಾಮಿ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಸ್ಪರ್ಧೆಯಿಂದ ನಮ್ಮ ತಂಡ ಹಿಂದೆ ಸರಿದಿಲ್ಲ



ಬೆಂಗಳೂರು,ಫೆ.22–ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಮ್ಮ ಬಣದಿಂದ ಅಭ್ಯರ್ಥಿ ಹಾಕುವ ನಿರ್ಧಾರದಿಂದ ನಾವು ಹಿಂದೆ ಸರಿದಿಲ್ಲ. ಚುನಾವಣೆ ನಡೆದರೆ ನಾವು ಅಭ್ಯರ್ಥಿ ಹಾಕುತ್ತೇವೆ. ರಾಜ್ಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಆಗೇ ಆಗುತ್ತದೆ ಎಂದು ಯತ್ನಾಳ್ ಟೀಂನ ಕುಮಾರ್ ಬಂಗಾರಪ್ಪ ಮತ್ತೆ ವಿಜಯೇಂದ್ರ ಅವರಿಗೆ ಸೆಡ್ಡು ಹೊಡೆದಿದ್ದಾರೆ.

ಚುನಾವಣೆ ಉಸ್ತುವಾರಿ ಶಿವರಾಜ್ ಸಿಂಗ್ ಚೌಹಾಣ್ ಬರುವ ದಿನ ಇನ್ನು ಅಂತಿಮ ಆಗಿಲ್ಲ. ಚುನಾವಣೆ ವೇಳಾಪಟ್ಟಿ ಸಿದ್ಧವಾಗಬೇಕು. ಕರ್ನಾಟಕದಲ್ಲಿ ನೂರಕ್ಕೆ ನೂರು ಬದಲಾವಣೆ ಆಗೇ ಆಗುತ್ತದೆ. ಚುನಾವಣೆ ನಡೆಯುವ ಸನ್ನಿವೇಶ ಬಂದರೆ ನಾಮಪತ್ರ ಸಲ್ಲಿಕೆ ಮಾಡುವ ಅವಶ್ಯಕತೆ ಬಂದರೆ ನಾವು ನಾಮಪತ್ರ ಸಲ್ಲಿಕೆ ಮಾಡುತ್ತೇವೆ ಎಂದು ಹೇಳಿದರು.

ಯತ್ನಾಳ್ ಬಣದಿಂದ ಸ್ಪರ್ಧೆ ಮಾಡಲ್ಲ ಎಂದು ಸುದ್ದಿ ಬಂದಿರುವುದು ನಮಗೆ ಗೊತ್ತಿಲ್ಲ. ನಮ್ಮ ನಿರ್ಧಾರ ದಿಂದ ನಾವು ಹಿಂದೆ ಸರಿದಿಲ್ಲ. ಚುನಾ ವಣೆ ಅಂತ ವರಿಷ್ಠರು ನಿರ್ಧಾರ ಮಾಡಿದರೆ ನಾವು ನಾಮಪತ್ರ ಹಾಕುತ್ತೇವೆ. ಯತ್ನಾಳ್ ನೋಟಿಸ್‌ಗೆ ಉತ್ತರ ಕೊಟ್ಟಿದ್ದಾರೆ. ನಾವು ಯತ್ನಾಳ್ ಜೊತೆ ಇದ್ದೇವೆ. ಹೈಕಮಾಂಡ್ ನೋಟಿಸ್‌ನಿಂದ ನಾವು ಯಾರೂ ವಿಚಲಿತರಾಗಿಲ್ಲ. ಚುನಾವಣೆ ಆಗುವವರೆಗೂ ನಮ್ಮ ವಾದ ಇದ್ದೇ ಇರುತ್ತದೆ ಎಂದರು.

ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ಮಸೂದೆಗೆ ರಾಜ್ಯಪಾಲರ ತೀವ್ರ ಆಕ್ಷೇಪ



ಥಾವರಚಂದ್ ಗೆಹ್ಲೋಟ್

ಬೆಂಗಳೂರು, ಫೆ.22– ರಾಜ್ಯಪಾಲರ ಅಧಿಕಾರ, ಹೊಣೆಗಾರಿಕೆ ಮತ್ತು ಕಾರ್ಯಗಳನ್ನು ಕಿತ್ತು ಮತ್ತೊಬ್ಬರ ಕೈಗೆ ಕೊಡುವ ಈ ತಿದ್ದುಪಡಿಯು ಅನಗತ್ಯ ಸಂಘರ್ಷ ಮತ್ತು ಒಡಕು ಸೃಷ್ಟಿಸುವ ಯತ್ನವಾಗಿದೆ... ಇದು ತಮ್ಮ ಅಧಿಕಾರವನ್ನು ಕಿತ್ತುಕೊಳ್ಳಲು ಮುಂದಾಗಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹರಿಹಾಯ್ದಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ನೇಮಕ ಸಂಬಂಧ ರಾಜ್ಯಪಾಲರಿಗೆ ಇರುವ ಅಧಿಕಾರವನ್ನು ರದ್ದುಪಡಿಸಿ, ಮುಖ್ಯಮಂತ್ರಿಗೆ ನೀಡುವ ಉದ್ದೇಶ ಹೊಂದಿರುವ 'ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ–2024' ಅನ್ನು ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಮರಳಿಸಿದ್ದಾರೆ. 'ಇದು ರಾಜ್ಯಪಾಲರ ಅಧಿಕಾರ ಮೊಟಕುಗೊಳಿಸುವ ಏಕೈಕ ಉದ್ದೇಶ ಹೊಂದಿದೆ' ಎಂದು ಕಟು ಪದಗಳಲ್ಲಿ ಅವರು ತಿವಿದಿದ್ದಾರೆ.

ರಾಜ್ಯ ಸರ್ಕಾರದ ನಡೆಯನ್ನು ದುಸ್ಸಾಹಸ ಮತ್ತು ಈ ತಿದ್ದುಪಡಿ ಮಸೂದೆಯು ಅಸಾಂವಿಧಾನಿಕ. ಕಾಯ್ದೆಗೆ ತರಲು ಉದ್ದೇಶಿಸಿದ ತಿದ್ದುಪಡಿಯು ದಾರಿ ತಪ್ಪಿಸುವಂತಿದೆ ಎಂದು ರಾಜ್ಯಪಾಲರು ಪ್ರತಿಪಾದಿಸಿದ್ದಾರೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಸಚಿವರು ಮತ್ತು ಇಲಾಖೆಗಳ ಅಧಿಕಾರಿಗಳು ಇಷ್ಟು ವರ್ಷ ಇತ್ತ ಗಮನ ನೀಡಿಯೇ ಇಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ಹುದ್ದೆ ದೀರ್ಘಕಾಲದಿಂದ ಖಾಲಿ ಇದೆ. ಸರ್ಕಾರ ಯಾವುದೇ ಕಾರಣ ಇಲ್ಲದೇ ನೇಮಕ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿದೆ. ಆದರೆ ಅದಕ್ಕೆಲ್ಲಾ ಕಾರಣ ಏನು ಎಂಬುದು ನಿಚ್ಚಳವಾಗಿದೆ ಎಂದು ಅವರು ಟೀಕಿಸಿದ್ದಾರೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಅಭಿವೃದ್ಧಿಯ ಮೇಲ್ವಿಚಾರಣೆಯನ್ನು ರಾಜ್ಯಪಾಲರು ನಡೆಸುತ್ತಾರೆ. ಈ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತಾರೆ. ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ಅವರ ಪಾತ್ರವನ್ನು ಇಡೀ ದೇಶದಲ್ಲೇ ಒಪ್ಪಿಕೊಳ್ಳಲಾಗಿದೆ. ಈ ಸಂಪ್ರದಾಯವು ಮುಂದುವರಿಯಬೇಕು ಎಂದು ಹೇಳಿದ್ದಾರೆ.

ಈ ಸಂಬಂಧ ನಾಲ್ಕು ಪುಟಗಳ ಸುದೀರ್ಘ ಪತ್ರವನ್ನು ಬರೆದಿರುವ ಅವರು, ಕುಲಾಧಿಪತಿಯೂ ಆಗಿರುವ ರಾಜ್ಯಪಾಲರ ಆದೇಶ ಮತ್ತು ಅಭಿಪ್ರಾಯಗಳೊಂದಿಗೆ ಸೂಕ್ತ ಕ್ರಮಕ್ಕಾಗಿ ಆಡಳಿತ ಇಲಾಖೆಗೆ ಕಡತವನ್ನು ಹಿಂದಿರುಗಿಸಲಾಗಿದೆ ಎಂದು ಪತ್ರದ ಕೊನೆಯಲ್ಲಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಉಲ್ಲೇಖಿಸಿದ್ದಾರೆ.

ರಾಜ್ಯದ ಆಡಳಿತ ಅಭಿವೃದ್ಧಿ ಕಾರ್ಯಗಳು ಮತ್ತು ಅನಂತ ಸಮಸ್ಯೆಗಳು ಮುಖ್ಯಮಂತ್ರಿಗೆ ಈಗಾಗಲೇ ಹೊರೆಯಾಗಿ ಕುಳಿತಿವೆ ಎಂದು ಪತ್ರದಲ್ಲಿ ಉಲ್ಲೇಖಿಸಿರುವ ರಾಜ್ಯಪಾಲರು, ತಿದ್ದುಪಡಿ ಮಸೂದೆ ಮುಖ್ಯಮಂತ್ರಿಯವರ ಹೊರೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಹೀಗಿರುವಾಗ ಮಸೂದೆಯ ಉದ್ದೇಶವನ್ನು ಈಡೇರಿಸಲು ಅವರಿಂದ ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆಯೂ ವಾಪಸ್


ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚನೆಗಾಗಿ ರಾಜ್ಯ ಸರ್ಕಾರ ರೂಪಿಸಿದ 'ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆ– 2024'ಕ್ಕೆ ಸ್ಪಷ್ಟನೆ ಕೇಳಿರುವ ರಾಜ್ಯಪಾಲರು ಅದನ್ನು ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ. ಮುಡಾಕ್ಕೆ ಸಂಬಂಧಿಸಿದಂತೆ ಏಕ ಸದಸ್ಯ ಆಯೋಗ ಇಡಿ ಮತ್ತು ಲೋಕಾಯುಕ್ತ ತನಿಖೆ ನಡೆಯುತ್ತಿದ್ದು ಹಲವು ಪ್ರಕರಣಗಳೂ ನ್ಯಾಯಾಲಯಗಳಲ್ಲಿವೆ. ಇಂತಹ ಸಂದರ್ಭದಲ್ಲಿ ಹೊಸ ಸ್ವರೂಪ ಕೊಡುವುದು ಸಮಂಜಸವೇ? ಎಲ್ಲಾ ತನಿಖೆಗಳು ಮುಕ್ತಾಯವಾದ ಬಳಿಕ ಕಾಯ್ದೆ ರೂಪಿಸುವುದು ಸೂಕ್ತ ಎಂದಿರುವ ಅವರು ಈ ಎಲ್ಲಾ ಅಂಶಗಳಿಗೆ ಸ್ಪಷ್ಟೀಕರಣದೊಂದಿಗೆ ಕಡತವನ್ನು ಮತ್ತೆ ಸಲ್ಲಿಸಿ ಎಂದು ನಿರ್ದೇಶನ ನೀಡಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆಯ ಜೊತೆಗೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ಕ್ಕೆ ತಿದ್ದುಪಡಿಯ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಈ ವಿಚಾರದಲ್ಲಿ ಸ್ಪಷ್ಟತೆ ತರಲು ಎರಡನ್ನೂ ಒಮ್ಮೆಗೆ ಮಾಡುವುದು ಸೂಕ್ತ. ಅಲ್ಲದೆ ಮೈಸೂರು ಪಾರಂಪರಿಕ ಮಹತ್ವ ಕಾಪಾಡಲು ಪ್ರಾಧಿಕಾರದಡಿ ಪಾರಂಪರಿಕ ಕಟ್ಟಡಗಳ ರಕ್ಷಣಾ ಸಮಿತಿಯನ್ನೂ ರಚಿಸಲಾಗುವುದು ಎಂದು ತಿಳಿಸಲಾಗಿದೆ. ಈ ಮಧ್ಯೆ ಚಾಮುಂಡೇಶ್ವರಿ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 'ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–2024' ಅನ್ನು ಮಾರ್ಚ್‌ನಲ್ಲಿ ರೂಪಿಸಲಾಗಿದೆ. ಮೈಸೂರು ನಗರದ ವ್ಯಾಪ್ತಿಯಲ್ಲಿಯೇ ಈ ಕ್ಷೇತ್ರ ಬರುವುದರಿಂದ ಈಗ ಪ್ರಸ್ತಾಪಿಸಿದ ಮಸೂದೆಯು ಅದರ ವ್ಯಾಪ್ತಿಗೇ ಬರುವುದಿಲ್ಲವೇ? ಎಂದು ರಾಜ್ಯಪಾಲ ಪ್ರಶ್ನಿಸಿದ್ದಾರೆ.

ರಾಜ್ಯಪಾಲರ ಪತ್ರಸಾರ

- ಬದಲಾವಣೆ ತರುವ ಪ್ರಾಮಾಣಿಕ ಉದ್ದೇಶಕ್ಕಿಂತಲೂ ಅಧಿಕಾರ ಕಿತ್ತುಕೊಳ್ಳುವ ಯತ್ನವಾಗಿದೆ
- ಸರ್ಕಾರವು ವಿಶೇಷ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದರೂ ಅವುಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಗಮನಹರಿಸದ ಕಾರಣ ಅವು ಅನಾಥ ಆಗಿವೆ
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಸ್ಥಾಪನೆ ಆದಂದಿನಿಂದ ಈವರೆಗೆ ಒಬ್ಬನೇ ಒಬ್ಬ ಕಾಯಂ ಉಪನ್ಯಾಸಕನನ್ನು ಹೊಂದಿಲ್ಲ ಏಕೆ?
- ಸಂವಿಧಾನದ ವಿಧಿ 254 ಸುಪ್ರೀಂಕೋರ್ಟ್‌ನ ತೀರ್ಪುಗಳು ಯುಜಿಸಿ ನಿಯಮಾವಳಿಗಳ ಪ್ರಕಾರ ವಿಶ್ವವಿದ್ಯಾಲಯಗಳ ವಿಷಯದಲ್ಲಿ ರಾಜ್ಯಪಾಲರದ್ದೇ ಪರಮಾಧಿಕಾರ
- ಕುಲಪತಿ ನೇಮಕವು ಕ್ರಮಬದ್ಧವಾಗದೆ ಅನರ್ಹರು ನೇಮಕವಾದರೆ ಕಾನೂನು ತೊಡಕು ಸೃಷ್ಟಿ ಆಗಬಹುದು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಅಭಿನಂದನೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನೂತನ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ ಅವರನ್ನು ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀಮತಿ ರಾಜೇಶ್ವರಿ, ಎಸ್.ಬಿ.ಎಂ ಮಂಜು, ನಿರ್ದೇಶಕರಾದ ಆರ್.ರವಿಕುಮಾರ್, ಹೆಚ್.ಹರೀಶ್‌ಕುಮಾರ್, ಸಿ.ಚಂದ್ರಶೇಖರ್, ಎಂ.ರಾಮಕೃಷ್ಣ, ಆರ್.ಸೋಮಣ್ಣ, ಎನ್.ಯೋಗನಂದ, ಜಿ.ನಿರಂಜನ್, ಕೆ.ಗಿರೀಶ್, ಶ್ರೀಮತಿ ಪ್ರಮೀಳ, ಬ್ಯಾಂಕ್ ಸಿಇಓ ಕೆ.ಹರ್ಷಿತ್‌ಗೌಡ ಅಭಿನಂದಿಸಿದರು.

ಉದಯಗಿರಿ ಪೊಲೀಸ್ ಠಾಣೆ ಬಳಿ ಗಲಾಟೆ ಪ್ರಕರಣ

ವಿಚಾರಣೆಗೆ ಹಾಜರಾಗಲು ಆರೋಪಿ ಸತೀಶ್‌ಗೆ ಮತ್ತೊಮ್ಮೆ ನೋಟಿಸ್ ಜಾರಿ

ಮೈಸೂರು, ಫೆ.22(ಬಿಎಲ್‌ಯು)– ಮೈಸೂರಿನ ಉದಯಗಿರಿಯಲ್ಲಿ ವಿವಾದಿತ ಪೋಸ್ಟ್ ಹಾಕಿದ್ದ ಆರೋಪಿ ಸತೀಶ್‌ಗೆ ಡಿಸಿಪಿ ಮುತ್ತುರಾಜ್ ಮತ್ತೊಮ್ಮೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.


ವಾಟ್ಸಾಪ್ ಸ್ಟೇಟಸ್‌ನಲ್ಲಿ ವಿವಾದಿತ ಪೋಸ್ಟ್ ಹಾಕಿದ್ದ ಕಾರಣ ಉದಯಗಿರಿ ಪೊಲೀಸ್ ಠಾಣೆ ಮುಂದೆ ಭಾರಿ ಜನ ನೆರೆದು ಠಾಣೆ ಮೇಲೆ ಕಲ್ಲು ತೂರಾಟ ನಡೆದಿತ್ತು. ಇದರಿಂದ ಏಳು ಪೊಲೀಸರು ಗಾಯಗೊಂಡರೆ, ಹಲವು ವಾಹನ ಜಖಂಗೊಂಡಿದ್ದವು. ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು ಈ ಹಿನ್ನೆಲೆಯಲ್ಲಿ ಆರೋಪಿ ಸತೀಶ್‌ನನ್ನು ಗಡಿಪಾರು ಮಾಡಲು ಪೊಲೀಸರು ಕಾನೂನು ಪ್ರಕ್ರಿಯೆ ಆರಂಭಿಸಿದ್ದಾರೆ.

ವಿಚಾರಣೆಗೆ ಹಾಜರಾಗುವಂತೆ ಸತೀಶ್‌ಗೆ ಡಿಸಿಪಿ ಮುತ್ತುರಾಜ್ ಅವರು ಮೊನ್ನೆ ನೋಟಿಸ್ ಜಾರಿ ಮಾಡಿದ್ದರು. ಆ ವೇಳೆ ವಿಚಾರಣೆಗೆ ಹಾಜರಾದ ಸತೀಶ್, ಪ್ರಕರಣ ಸಂಬಂಧ ಸ್ಪಷ್ಟನೆ ನೀಡಲು ಕಾಲಾವಕಾಶ ಕೋರಿದರು. ಜೊತೆಗೆ ಆಕ್ಷೇಪಣೆ ಕೂಡ ಸಲ್ಲಿಸಿದ್ದರು. ಈಗ ಫೆಬ್ರವರಿ 27ರಂದು ಹಾಜರಾಗುವಂತೆ ಡಿಸಿಪಿ ಮುತ್ತುರಾಜ್ ಅವರು ಸತೀಶ್‌ಗೆ ಸೂಚಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸತೀಶ್ ಪರ ವಕೀಲ ಭಾಸ್ಕರ್, ಮೊದಲ ಬಾರಿ ನೋಟಿಸ್ ಕೊಟ್ಟ ಹಿನ್ನೆಲೆಯಲ್ಲಿ ನನ್ನ ಕಕ್ಷಿದಾರರು, ಡಿಸಿಪಿ ಅವರ ಮುಂದೆ ಹಾಜರಾಗಿದ್ದರು. ಆ ವೇಳೆ ಯಾವ ಆಧಾರದ ಮೇಲೆ ಗಡಿಪಾರು ಮಾಡುತ್ತೀರಾ ಎಂದು ಪ್ರಶ್ನೆ ಮಾಡಿದ್ದೇವೆ. ಜೊತೆಗೆ ಆಕ್ಷೇಪಣೆ ಕೂಡ ಸಲ್ಲಿಸಿದ್ದೇವೆ ಎಂದರು. ಗಡಿಪಾರು ಮಾಡಲು ಹಲವು ನಿಯಮಗಳನ್ನು ಅನುಸರಿಸಬೇಕು. ಈ ಹಿನ್ನೆಲೆಯಲ್ಲಿ ನನ್ನ ಕಕ್ಷಿದಾರನಿಗೆ ಅಪರಾಧ ಹಿನ್ನೆಲೆ ಇದೆಯೇ, ಗಲಾಟೆ ಸಂಬಂಧ ನನ್ನ ಕಕ್ಷಿದಾರನನ್ನು ಪ್ರಾಥಮಿಕ ವಿಚಾರಣೆಗೆ ಒಳಪಡಿಸಿದ್ದೀರಾ, ಪ್ರಕರಣ ಸಂಬಂಧ ನಿಮ್ಮ ಬಳಿ ಯಾವ ಸಾಕ್ಷಿಗಳಿವೆ ಎಂಬ ಹಲವು ಪ್ರಶ್ನೆಗಳನ್ನು ಕೇಳಿದ್ದೇವೆ ಎಂದರು. ನಾವು ಕೇಳಿರುವ ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರ ನೀಡಿದ ನಂತರ ಗಡಿಪಾರು ಮಾಡುವ ಪೊಲೀಸರ ಕ್ರಮವನ್ನು ಜಿಲ್ಲಾ ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ ಎಂದು ಭಾಸ್ಕರ್ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಕೇಸ್

ನ್ಯಾಯಾಲಯಕ್ಕೆ ಸಲ್ಲಿಸಿದ ಲೋಕಾಯುಕ್ತ ತನಿಖೆ ಅಂತಿಮ ವರದಿ ಪ್ರತಿಗೆ ಸ್ನೇಹಮಯಿ ಕೃಷ್ಣ ಪಟ್ಟು



ಮೈಸೂರು, ಫೆ.22(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ನಿವೇಶನ ಹಂಚಿಕೆ ಪ್ರಕರಣದ ಬಗ್ಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಂತಿಮ ವರದಿಯ ಪ್ರತಿ ನೀಡದೆ ಲೋಕಾಯುಕ್ತರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ನ್ಯಾಯಾಲಯಕ್ಕೆ ಸಲ್ಲಿಸಿರುವ ಅಂತಿಮ ವರದಿಯನ್ನು ದೂರುದಾರರಿಗೆ ನೀಡಬೇಕೆಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಹೊರಡಿಸಿರುವ ಸುತ್ತೋಲೆ ಹೇಳುತ್ತದೆ. ಈ ಸುತ್ತೋಲೆಯನ್ನು ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರಿಗೆ ವಾಟ್ಸಾಪ್ ಮೂಲಕ ಕಳುಹಿಸಿ ಅಂತಿಮ ವರದಿಯ ಪ್ರತಿ ನೀಡುವಂತೆ ಮನವಿ ಮಾಡಿದ್ದೆ ಎಂದು ಹೇಳಿದ್ದಾರೆ.


ಅಂತಿಮ ವರದಿ ಪ್ರತಿ ನೀಡುವಂತೆ ನಮ್ಮ ವಕೀಲರು ಕೂಡ ಕೋರಿದ್ದರು. ಆದರೆ ಡಿಜಿಪಿ ಅವರ ಸುತ್ತೋಲೆ ಲೋಕಾಯುಕ್ತ ಪೊಲೀಸರಾದ ನಮಗೆ ಅನ್ವಯ ಆಗುವುದಿಲ್ಲ ಎಂದು ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ಸ್ಪಷ್ಟಪಡಿಸಿ ಸರ್ವಾಧಿಕಾರ ಧೋರಣೆ ತಳೆದಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಮಾರ್ಚ್ 6, 2018 ರಂದು ಹೊರಡಿಸಿರುವ ಸುತ್ತೋಲೆ ನಿಮಗೆ ಅನ್ವಯ ಆಗದಿರಬಹುದು. ಆದರೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 173 ಲೋಕಾಯುಕ್ತಕ್ಕೂ ಅನ್ವಯವಾಗುತ್ತದೆ. ಈ ಹಿನ್ನೆಲೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಂತಿಮ ವರದಿ ನೀಡುವಂತೆ ಮನವರಿಕೆ ಮಾಡಿಕೊಟ್ಟಿದ್ದೇನೆ ಎಂದು ಹೇಳಿದರು.

ಹಾಗಾದರೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಹೊರಡಿಸಿರುವ ಸುತ್ತೋಲೆ ನಮಗೆ ಅನ್ವಯ ಆಗುವುದಿಲ್ಲವೆಂದು ಹಿಂಬರಹ ನೀಡಿ ಎಂದು ಕೋರಿದರೂ ಲೋಕಾಯುಕ್ತ ಎಸ್ಪಿ ಉದೇಶ್ ಸ್ಪಂದಿಸುತ್ತಿಲ್ಲ ಎಂದರು. ನ್ಯಾಯಾಲಯಕ್ಕೆ ಸಲ್ಲಿಸಿರುವ ಅಂತಿಮ ವರದಿಯ ಪ್ರತಿ ನೀಡಿದರೆ ನಾನು ಮುಂದಿನ ಕಾನೂನು ಹೋರಾಟ ಮಾಡುತ್ತೇನೆ ಎಂಬ ಉದ್ದೇಶದಿಂದ ವರದಿ ಪ್ರತಿ ನೀಡಲು ನಿರಾಕರಿಸುತ್ತಿದ್ದಾರೆ ಎಂದು ಆರೋಪಿಸಿದರು.

ಉದೇಶ್ ಅವರು ಕಚೇರಿಯಲ್ಲಿ ಸಿಗುವುದಿಲ್ಲ, ಮೊಬೈಲ್ ಕರೆ ಸ್ವೀಕರಿಸುವುದಿಲ್ಲ. ಉದೇಶ್ ಅವರು ವರದಿ ಪ್ರತಿ ನೀಡದಿದ್ದರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಅಲ್ಲಿಂದಲೇ ವರದಿ ಪ್ರತಿ ಪಡೆಯುತ್ತೇನೆ ಎಂದು ಸ್ನೇಹಮಯಿ ಕೃಷ್ಣ ಎಚ್ಚರಿಸಿದ್ದಾರೆ.

ರಾಹುಲ್ ಜಾರಕಿಹೊಳಿಗೆ ಅಭಿನಂದನೆ...



ಕರ್ನಾಟಕ ಯುವ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಯುವ ನಾಯಕ ರಾಹುಲ್ ಜಾರಕಿಹೊಳಿ ಅವರನ್ನು ಬೆಂಗಳೂರಿನಲ್ಲಿ ಎಸ್.ಆರ್.ರವಿ ನೇತೃತದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಮುಖಂಡರಾದ ಮಹದೇವ್, ಪಡುವಾರಹಳ್ಳಿ ಕೃಷ್ಣ, ವಾರ್ಡ್ ನಂ.40ರ ಯುವ ಅಧ್ಯಕ್ಷ ಸುಹಾಸ್‌ಗೌಡ, ಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

ಅಸ್ತಿತ್ವದಲ್ಲೇ ಇರದ ಖಾತೆಯನ್ನು 21 ತಿಂಗಳು ಕಾಲ ಹೊಂದಿದ್ದ ಪಂಜಾಬ್ ಸಚಿವ



ಚಂಡೀಗಢ, ಫೆ.22– ಪಂಜಾಬ್ ಕ್ಯಾಬಿನೆಟ್ ಸಚಿವ ಕುಲದೀಪ್ ಸಿಂಗ್ ಧಲಿವಾಲ್ ಅವರು ಕಳೆದ 21 ತಿಂಗಳುಗಳಿಂದ ನಿರ್ವಹಿಸುತ್ತಿದ್ದ ಆಡಳಿತ ಸುಧಾರಣಾ ಇಲಾಖೆ ಅಸ್ತಿತ್ವದಲ್ಲೇ ಇಲ್ಲ ಎಂಬ ಮಾಹಿತಿ ಈಗ ಬಹಿರಂಗವಾಗಿದೆ. ಈವರೆಗೂ ಧಲಿವಾಲ್, ಎನ್‌ಆರ್‌ಐ ವ್ಯವಹಾರಗಳ ಖಾತೆ ಜೊತೆಗೆ ಆಡಳಿತ ಸುಧಾರಣಾ ಇಲಾಖೆಯನ್ನೂ ನೀಡಲಾಗಿತ್ತು. ಆದರೆ ಆಡಳಿತ ಸುಧಾರಣಾ ಇಲಾಖೆ ಅಸ್ತಿತ್ವದಲ್ಲಿಲ್ಲದ ಕಾರಣ ಅವರಿಗೆ ಎನ್‌ಆರ್‌ಐ ವ್ಯವಹಾರಗಳ ಖಾತೆ ಮಾತ್ರ ಉಳಿದಿದೆ ಎಂದು ಸರ್ಕಾರಿ ಅಧಿಸೂಚನೆಯಲ್ಲಿ ಈಗ ತಿಳಿಸಲಾಗಿದೆ. ಆಡಳಿತ ಸುಧಾರಣಾ ಇಲಾಖೆ ಸಚಿವರಿಗೆ ಯಾವುದೇ ಸಿಬ್ಬಂದಿಯನ್ನು ನೀಡಲಾಗಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ಸಭೆಯನ್ನು ನಡೆಸಲಾಗಿಲ್ಲ ಎಂದು ಮೂಲಗಳು ತಿಳಿಸಿವೆ. ವಿರೋಧ ಪಕ್ಷವಾದ ಬಿಜೆಪಿ ನಾಯಕರು ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಇದು ರಾಜ್ಯದಲ್ಲಿ ಭಗವಂತ್ ಮಾನ್ ಅವರ ಸರ್ಕಾರದ ಗಂಭೀರತೆಯನ್ನು ತೋರಿಸುತ್ತದೆ ಎಂದು ಟೀಕಿಸಿದ್ದಾರೆ.

ಡಾ.ರಾಜ್, ಡಾ.ಬಾಬೂಜಿ ಪ್ರತಿಮೆಗಳಿಗೆ ಚಾವಣಿ ನಿರ್ಮಿಸಲು ಆಗ್ರಹ

ಮೈಸೂರು,ಫೆ.22(ಜಿಎ)–ಮೈಸೂರಿನಲ್ಲಿರುವ ಡಾ.ರಾಜ್‌ಕುಮಾರ್ ಮತ್ತು ಡಾ.ಬಾಬು ಜಗಜೀವನರಾಂ ಪ್ರತಿಮೆಗಳಿಗೆ ಚಾವಣಿ ನಿರ್ಮಿಸುವಂತೆ ಡಾ.ಬಾಬು ಜಗಜೀವನರಾಂ ಹಾಗೂ ಡಾ.ರಾಜ್‌ಕುಮಾರ್ ಪುತ್ಥಳಿಗೆ ಮೇಲ್ಛಾವಣಿ ನಿರ್ಮಾಣ ಹೋರಾಟ ಸಮಿತಿ ಅಧ್ಯಕ್ಷ ರಾಜೇಶ್ ಆಗ್ರಹಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್, ಕುವೆಂಪು, ಬಸವಣ್ಣ, ಪರಮಹಂಸ, ಜಯಚಾಮರಾಜೇಂದ್ರ ಒಡೆಯರ್, ಕೃಷ್ಣರಾಜ ಒಡೆಯರ್ ಮೊದಲಾದವರ ಪ್ರತಿಮೆಗಳಿಗೆ ಮೇಲ್ಛಾವಣಿ ಇದೆ. ಆದರೆ ಜಗಜೀವನರಾಂ ಮತ್ತು ಡಾ.ರಾಜ್‌ಕುಮಾರ್ ಅವರ ಪ್ರತಿಮೆಗಳಿಗೆ ಇಲ್ಲ. ಹೀಗಾಗಿ ಈ ಪ್ರತಿಮೆಗಳು ಮಳೆ, ಗಾಳಿ, ಬಿಸಿಲಿನ ಕಾರಣ ಹಾನಿಗೀಡಾಗುವ ಸಂಭವ ಇದೆ. ಹೀಗಾಗಿ ಈ ಬಾರಿಯ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಈ ಪ್ರತಿಮೆಗಳಿಗೆ ಮೇಲ್ಛಾವಣಿ ನಿರ್ಮಾಣಕ್ಕೆ ಹಣ ಬಿಡುಗಡೆಗೊಳಿಸಬೇಕೆಂದು ಕೋರಿದರು.


ಪಿಎಚ್.ಡಿ ಪದವಿ



ಮೈಸೂರು: ಡಾ.ಹರಿನಾರಾಯಣ ಅವರ ಮಾರ್ಗದರ್ಶನದಲ್ಲಿ ಚಿಕ್ಕ ಬಾಲಚಂದ್ರನ್ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಚಾಮರಾಜ ಒಡೆಯರ್ ಕೊಡುಗೆ ಅಪಾರವಾದುದು

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್‌ರಿಂದ ಶ್ರೀಯುತರ ಪ್ರತಿಮೆಗೆ ಮಾಲಾರ್ಪಣೆ



ಮೈಸೂರು ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗವಿರುವ ಹತ್ತನೇ ಚಾಮರಾಜ ಒಡೆಯರ್ ಪ್ರತಿಮೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾಲಾರ್ಪಣೆ ಮಾಡಿದರು.

ಮೈಸೂರು, ಫೆ.22– ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಹತ್ತನೇ ಚಾಮರಾಜ ಒಡೆಯರ್ ಅವರ 156ನೇ ಜಯಂತಿ ಅಂಗವಾಗಿ ಕೃಷ್ಣರಾಜ ಯುವ ಬಳಗದ ವತಿಯಿಂದ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗವಿರುವ ಹತ್ತನೇ ಚಾಮರಾಜ ಒಡೆಯರ್ ಪ್ರತಿಮೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾಲಾರ್ಪಣೆ ಮಾಡಿದರು.

ಬಳಿಕ ಮಾತನಾಡಿದ ಅಯೂಬ್ ಖಾನ್, ಮೈಸೂರು ವಿಶ್ವವಿಖ್ಯಾತವಾಗಲು ಸಾಂಸ್ಕೃತಿಕ ಸಾಮಾಜಿಕ ಹಾಗೂ ವೈಜ್ಞಾನಿಕ ದೂರದೃಷ್ಟಿಯುಳ್ಳ ಮಹಾರಾಜರಾದ ಹತ್ತನೇ ಚಾಮರಾಜ ಒಡೆಯರ್ ಅವರ ಕೊಡುಗೆ ಅಪಾರವಾದುದು. ಮೈಸೂರಿಗರಿಗೆ ಒಂದೇ ಸೂರಿನಡಿಯಲ್ಲಿ ಸ್ವದೇಶಿ ಮತ್ತು ಅಂತರ ರಾಷ್ಟ್ರೀಯ ಪದಾರ್ಥಗಳ ಪರಿಚಯ ಮಾರಾಟ, ಕಲೆ, ಸಾಹಿತ್ಯ ಸಂಗೀತ, ರೈತಾಪಿ ಚಟುವಟಿಕೆ, ಕರಕುಶಲ ಉತ್ಪನ್ನ ಸ್ಥಳೀಯ ವ್ಯಾಪಾರಸ್ಥರನ್ನು ಪ್ರೋತ್ಸಾಹಿಸಲು ಮೈಸೂರು ದಸರಾ ವಸ್ತು ಪ್ರದರ್ಶನವನ್ನು 1880ರಲ್ಲಿ ಜೀವಣ್ಣರಾಯನ ಕಟ್ಟೆ ಮೈದಾನದಲ್ಲಿ ಮೊದಲು ಪ್ರಾರಂಭಿಸಿದರು.

ಬೆಂಗಳೂರು ಅರಮನೆ, ಮೈಸೂರು ಮೃಗಾಲಯ, ಮೈಸೂರು ಮಹಾರಾಜ ಕಾಲೇಜು, ಮೈಸೂರು ಸಂಸ್ಕೃತ ಪಾಠಶಾಲೆ, ಲ್ಯಾನ್ಸ್‌ಡೌನ್ ಬಜಾರ್, ಲಾಲ್ ಬಾಗ್ ಗಾಜಿನ ಅರಮನೆ ಸೇರಿದಂತೆ 1881ರಲ್ಲಿ ಮೈಸೂರು ಕೌನ್ಸಿಲ್ ಪ್ರಜಾ ಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿ ಆಧುನಿಕ ಪ್ರಜಾಪ್ರಭುತ್ವ ಶಾಸಕಾಂಗ ಸಂಸ್ಥೆಯಾಗಿ ಸ್ಥಾಪಿಸಿದರು. ಮಹಿಳೆಯರಿಗೆ ಸಮಾನ ಶಿಕ್ಷಣ ಜಾರಿಗೆ ತರುವಲ್ಲಿ ಶ್ರಮಿಸಿದರು. ದಿವಾನ್ ರಂಗಾಚಾರ್ಲು, ದಿವಾನ್ ಶೇಷಾದ್ರಿ ಅಯ್ಯರ್ ಅವರನ್ನು ನೇಮಿಸಿ ಹಲವಾರು ಅಭಿವೃದ್ಧಿ ಆಡಳಿತ ಕೆಲಸಕ್ಕೆ ಆಧುನಿಕ ಸ್ಪರ್ಶ ಕೊಟ್ಟವರು. ಹತ್ತನೇ ಚಾಮರಾಜ ಒಡೆಯರ್‌ರವರು ಸ್ವತಃ ಪಿಟೀಲು ವಾದಕರಾದ ಚಾಮ ರಾಜ ಒಡೆಯರ್ ಅವರು ಕಲೆ ಸಂಗೀತದ ಅಭಿರುಚಿಯನ್ನು ಮೈಸೂರಿಗರಿಗೆ ಪರಿಚಯಿಸಿ ವೀಣೆ ಸುಬ್ಬಣ್ಣರ ಗಾಯನ, ವೀಣೆ ಶಾಮಣ್ಣ, ಬಿಡಾರಂ ಕೃಷ್ಣಪ್ಪ, ವಾಸುದೇವಾಚಾರ್, ವೀಣಾ ಪದ್ಮನಾಭಯ್ಯ, ಮೈಸೂರು ಕರಿಗಿರಿರಾವ್‌ರನ್ನು ಸಾಂಸ್ಕೃತಿಕ ಲೋಕದ ಮುಖ್ಯವಾಹಿನಿಗೆ ಪರಿಚಯಿಸಿದರು.

ಪಾಲಿಕೆ ಮಾಜಿ ಸದಸ್ಯ ರಘುರಾಜೇ ಅರಸ್, ಕೃಷ್ಣರಾಜೇಂದ್ರ ಬ್ಯಾಂಕ್ ಅಧ್ಯಕ್ಷ ಬಸವರಾಜು ಬಸಪ್ಪ, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕಿ ರಾಜೇಶ್ವರಿ, ನಿರೂಪಕ ಅಜಯ್ ಶಾಸ್ತ್ರಿ, ಯುವ ಮುಖಂಡ ಜಿ.ರಾಘವೇಂದ್ರ, ಒಸಮಾ ಖಾನ್, ಸಮಾಜಸೇವಕ ಪ್ರಕಾಶ್ ಪ್ರಿಯದರ್ಶನ್, ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್, ವಕೀಲ ನಾಗಬಸವಣ್ಣ, ಕೆ.ಆರ್.ಕಾಂಗ್ರೆಸ್ ಯುವ ಅಧ್ಯಕ್ಷ ಹೊಯ್ಸಳ, ರೋಹಿತ್ ಸಿಂಗ್, ಶಶಾಂಕ್, ಅಭಿಶೇಕ್, ಶರತ್, ಪಾಂಡು ನಾರಾಯಣ ಇನ್ನಿತರರು ಇದ್ದರು.

ಫೈನಾನ್ಸ್‌ನಿಂದ ಕಿರುಕುಳ: ಕಚೇರಿಗೆ ಮುತ್ತಿಗೆ



ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಸೇನೆಯ ಕಾರ್ಯಕರ್ತರು ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆ, ಫೆ.22– ಪಟ್ಟಣದ ಚನ್ನರಾಯಪಟ್ಟಣ ರಸ್ತೆಯಲ್ಲಿರುವ ಮಹೇಂದ್ರ ಫೈನಾನ್ಸ್ ರೈತರಿಗೆ ಟ್ರಾಕ್ಟರ್ ಸಾಲ ನೀಡಿ, ಸಾಲ ಪೂರ್ಣ ಪಾವತಿ ಮಾಡಿದ್ದರೂ ಟ್ರಾಕ್ಟರ್‌ಗಳಿಗೆ ನೋಂದಣಿ ಮಾಡಿಸಿ ಕೊಡದೇ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಸೇನೆಯ ಕಾರ್ಯಕರ್ತರು ಸಂಸ್ಥೆಯ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ಮಹೇಂದ್ರ ಫೈನಾನ್ಸ್ ಸಂಸ್ಥೆಯು ರೈತರಿಗೆ ಟ್ರಾಕ್ಟರ್ ಖರೀದಿಗೆ ಸಾಲ ನೀಡುವ ಸಂಸ್ಥೆಯಾಗಿದೆ. ಕೆಲವು ರೈತರಿಗೆ ಟ್ರಾಕ್ಟರ್ ಸಾಲ ತೀರಿಸಿದ್ದರೂ ಸಹ ಟ್ರಾಕ್ಟರ್‌ಗಳಿಗೆ ಆರ್‌ಟಿಓ ಕಚೇರಿಯಲ್ಲಿ ನೋಂದಣಿ ಮಾಡಿಸಿ ನಂಬರ್ ಕೊಡಿಸದೇ ಜೊತೆಗೆ ಅಗತ್ಯ ದಾಖಲಾತಿಗಳನ್ನು ನೀಡದೆ ರೈತರನ್ನು ಕಳೆದ ಮೂರು ವರ್ಷಗಳಿಂದ ಅಲೆದಾಡಿಸುತ್ತಿದೆ. ಎನ್‌ಓಸಿ ಸಹ ಕೊಟ್ಟಿಲ್ಲ.

ಕಂತಿಗೆ ಅಧಿಕ ಬಡ್ಡಿ ವಿಧಿಸಲಾಗುತ್ತಿದೆ. ರೈತರ ಟ್ರಾಕ್ಟರ್‌ಗಳನ್ನು ಕಂತು ಕಟ್ಟಿಲ್ಲವೆಂದು ಕಳ್ಳರಂತೆ ಕದ್ದುಕೊಂಡು ಹೋಗುತ್ತಿದ್ದಾರೆ. ಈ ಬಗ್ಗೆ ಪ್ರಶ್ನೆ ಮಾಡಿದರೆ ಸಿಬ್ಬಂದಿಗಳು ಉಡಾಫೆಯಿಂದ ಉತ್ತರ ನೀಡುತ್ತಿದ್ದಾರೆ. ಇದರಿಂದ ಬೇಸತ್ತ ರೈತರು ಕರವೇ ಸ್ವಾಭಿಮಾನಿ ಸೇನೆಯ ಮಂಡ್ಯ ಜಿಲ್ಲಾಧ್ಯಕ್ಷ ಎ.ಸಿ. ಕಾಂತರಾಜು, ತಾಲೂಕು ಘಟಕದ ಅಧ್ಯಕ್ಷ ಸಮೀರ್, ಗೌರವಾಧ್ಯಕ್ಷ ಅಜ್ಜದ್‌ಪಾಷಾ, ಅವರಿಗೆ ದೂರು ನೀಡಿದರು.

ಈ ಹಿನ್ನೆಲೆಯಲ್ಲಿ ರೈತರೊಂದಿಗೆ ಪ್ರತಿಭಟನೆ ನಡೆಸಿ ಜಿಲ್ಲಾ ಅಧ್ಯಕ್ಷರಾದ ಕಾಂತರಾಜ್ ತಾಲೂಕು ಅಧ್ಯಕ್ಷರಾದ ಸಮೀರ್ ನೇತೃತ್ವದಲ್ಲಿ ಹಲವಾರು ರೈತರು ಫೈನಾನ್ಸ್ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇಲ್ಲಿನ ಸಿಬ್ಬಂದಿಯಿಂದ ಯಾವುದೇ ಮಾಹಿತಿ ಸಿಗದ ಹಿನ್ನೆಲೆ, ಮಹೇಂದ್ರ ಫೈನಾನ್ಸ್ ಕಚೇರಿ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ನಂತರ ಪಟ್ಟಣದ ಠಾಣೆಗೆ ಆಗಮಿಸಿ ಫೈನಾನ್ಸ್‌ನ ಸಿಬ್ಬಂದಿಗಳು ವಾರದೊಳಗೆ ಸಮಸ್ಯೆಯನ್ನು ಇತ್ಯರ್ಥಪಡಿಸಿ ರೈತರಿಗೆ ನೋಂದಣಿ ಮಾಡಿಸಿಕೊಡುವುದಾಗಿಯೂ ಮುಂದಿನ ದಿನಗಳಲ್ಲಿ ರೈತರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ತಪ್ಪೊಪ್ಪಿಕೊಂಡರು.

ಈ ವೇಳೆ ಮಾತನಾಡಿದ ಎ.ಸಿ.ಕಾಂತರಾಜು ತಾಲೂಕಿನಲ್ಲಿ ಇಂತಹ ಸಮಸ್ಯೆಗಳು ಮತ್ತೊಮ್ಮೆ ಮರುಕಳಿಸಿದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು

ಪ್ರತಿಭಟನೆಯಲ್ಲಿ ರೈತರು ಹಾಗೂ ಕರವೇ ಸ್ವಾಭಿಮಾನಿ ಸೇನೆಯ ಕಾರ್ಯಕರ್ತರು ಭಾಗವಹಿಸಿದ್ದರು.

ಗ್ರಾಮಾಂತರ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡಿ

ಮದ್ದೂರು: ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡಿದರೆ ಜೀವನದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಾರೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಾಲೂಕಿನ ಕೊಪ್ಪದಲ್ಲಿ ಶುಕ್ರವಾರ ಗ್ರಾಮಾಂತರ ಶಿಕ್ಷಣ ಟ್ರಸ್ಟ್‌ನ ಸರ್.ಎಂ.ವಿ. ಹಿರಿಯ ಪ್ರಾಥಮಿಕ ಶಾಲೆ ಕೊಪ್ಪ, ಚನ್ನೇಗೌಡ ಪ್ರೌಢಶಾಲೆ ಹುರಗಲವಾಡಿ ಗೇಟ್, ಕೊಪ್ಪ ಇವರ ವತಿಯಿಂದ ಆಯೋಜಿಸಿದ್ದ 2024–25 ನೇ ಸಾಲಿನ ಪಾಲಕರ ದಿನಾಚರಣೆ ಮತ್ತು ಶಾಲಾ ವಾರ್ಷಿಕೋತ್ಸವ ಹಾಗೂ ಸಿ.ತಮ್ಮಯ್ಯ ಅವರ 75 ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಲ್ಲಿ ಅಗಾಧವಾದ ಶಕ್ತಿಯಿದ್ದು, ಅವರಿಗೆ ಶಿಕ್ಷಕರು ಮತ್ತು ಪಾಲಕರು ಉತ್ತಮ ಮಾರ್ಗದರ್ಶನ ಮತ್ತು ತರಬೇತಿ ನೀಡಿದರೆ ಸುಂದರ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಗ್ರಾಮಾಂತರ ಶಿಕ್ಷಣ ಟ್ರಸ್ಟ್‌ನ ಸರ್.ಎಂ.ವಿ. ಹಿರಿಯ ಪ್ರಾಥಮಿಕ ಶಾಲೆ ಕೊಪ್ಪ, ಚನ್ನೇಗೌಡ ಪ್ರೌಢಶಾಲೆ ಹುರಗಲವಾಡಿ ಗೇಟ್,



ಶಾಲಾ ವಾರ್ಷಿಕೋತ್ಸವವನ್ನು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಕೊಪ್ಪ ಇವುಗಳು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಹಲವಾರು ವರ್ಷಗಳಿಂದ ಗುಣಾತ್ಮಕ ಶಿಕ್ಷಣ ನೀಡಿ ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತಿರುವುದು ಪ್ರಶಂಸನೀಯ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಂಗೇರಿ ವಿಶ್ವಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿಶ್ಚಲಾನಂದನಾಥಸ್ವಾಮೀಜಿ ಮಾತನಾಡಿ, ಪ್ರಪಂಚದಲ್ಲಿ ಶಿಕ್ಷಣಕ್ಕೆ ಇರುವ ಮಹತ್ವ ಬೇರೆ ಯಾವುದಕ್ಕೂ ಇಲ್ಲ. ಇದನ್ನರಿತು ಮಕ್ಕಳು ಕಠಿಣ ಪರಿಶ್ರಮಪಟ್ಟು ವ್ಯಾಸಂಗ ಮಾಡಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುವ ಜತೆಗೆ ಗುರು ಹಿರಿಯರನ್ನು ಗೌರವಿಸುವುದು, ಮಾನವೀಯ ಮೌಲ್ಯ ಹಾಗೂ ಸೇವಾ ಮನೋಭಾವವನ್ನು ಜೀವನದಲ್ಲಿ ರೂಢಿಸಿಕೊಂಡು ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು ಹಾಗೂ ಶಾಲಾ ವಿದ್ಯಾರ್ಥಿಗಳ ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ನೋಡುಗರ ಗಮನ ಸೆಳೆಯಿತು.

ಗ್ರಾಮಾಂತರ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಸಿ.ತಮ್ಮಯ್ಯ, ಕಾರ್ಯದರ್ಶಿ ರಾಮಕೃಷ್ಣ, ಖಜಾಂಚಿ ಕೆ.ಜಿ.ನಾರಾಯಣ, ನಿರ್ದೇಶಕರಾದ ಪುಟ್ಟಸ್ವಾಮಿ, ಮರೀಗೌಡ, ಮಲ್ಲಿಕಾರ್ಜುನ, ಚಿಕ್ಕಮ್ಮ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಜೋಗೀಗೌಡ, ಗ್ರಾಪಂ ಅಧ್ಯಕ್ಷ ರುದ್ರೇಶ್, ತಾಪಂ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ, ಮಾಜಿ ಉಪಾಧ್ಯಕ್ಷರಾದ ಬೆಕ್ಕಳಲೆ ರಘು, ರಾಮ ಚಂದ್ರು, ಪುರಸಭಾ ಮಾಜಿ ಅಧ್ಯಕ್ಷ ಎಂ.ಐ.ಪ್ರವೀಣ, ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್.ದಿವಾಕರ, ಗುತ್ತಿಗೆದಾರ ಸುರೇಶ್‌ಗೌಡ ಇತರರು ಇದ್ದರು.

ಫೆಬ್ರವರಿ 25ರಂದು ಮೊದಲ ತ್ರೈಮಾಸಿಕ ಸಭೆ

ಮಂಡ್ಯ, ಫೆ.22– ಗ್ರಾಮ ಪಂಚಾಯತ್ ಮಟ್ಟದಲ್ಲಿ ಫೆ.25 ರಂದು ಮಧ್ಯಾಹ್ನ 1.30 ಗಂಟೆಗೆ ಜಿ.ಮಲ್ಲಿಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಡಿ.ಬಿ ಸುಧಾರಾಣಿ ಅವರ ಅಧ್ಯಕ್ಷತೆಯಲ್ಲಿ ಮೊದಲ ತ್ರೈಮಾಸಿಕ (ಕೆ.ಪಿ.ಡಿ) ಸಭೆಯನ್ನು ಆಯೋಜಿಸಲಾಗಿದೆ.

ಆದ್ದರಿಂದ ಪ್ರತಿಯೊಂದು ಇಲಾಖೆಗೆ ಸಂಬಂಧಿಸಿದ 2024–25 ನೇ ಸಾಲಿನ ಏಪ್ರಿಲ್ ಮಾಹೆಯಿಂದ ಜನವರಿ 2025 ರ ಅಂತ್ಯದವರೆಗಿನ ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ಕಾರ್ಯಕ್ರಮ ಪ್ರಗತಿ ವರದಿಯನ್ನು ಸಿದ್ಧಪಡಿಸಿಕೊಂಡು ಫೆಬ್ರವರಿ 22 ರೊಳಗೆ ಗ್ರಾಮ ಪಂಚಾಯಿತಿ ಕಚೇರಿಗೆ ತಪ್ಪದೆ ಸಲ್ಲಿಸಿ 25 ರಂದು ಸಭೆಗೆ ಹಾಜರಾಗುವಂತೆ ಜಿ.ಮಲ್ಲಿಗೆರೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಲಹಳ್ಳಿ ಸರ್ಕಾರಿ ಶಾಲೆಯ ಜಾಗ ಅತಿಕ್ರಮಣ

ತಹಸೀಲ್ದಾರ್ ನೇತೃತ್ವದಲ್ಲಿ ಸ್ಥಳ ಪರಿಶೀಲನೆ



ಶ್ರೀರಂಗಪಟ್ಟಣ, ಫೆ.22– ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಸರ್ಕಾರಿ ಶಾಲೆಗೆ ಸೇರಿದ ಜಾಗ ಅತಿಕ್ರಮವಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ತಹಸೀಲ್ದಾರ್ ನೇತೃತ್ವದ ಅಧಿಕಾರಿಗಳ ತಂಡ ಗುರುವಾರ ಸ್ಥಳ ಪರಿಶೀಲನೆ ನಡೆಸಿತು.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿದ ಜಾಗ ಅತಿಕ್ರಮವಾಗಿದೆ ಎಂದು ಮಾನವ ಹಕ್ಕುಗಳ ಹೋರಾಟಗಾರ ಪ್ರಸನ್ನ ಮತ್ತು ಇತರರು ಮಂಡ್ಯ ಲೋಕಾಯುಕ್ತ ಅಧೀಕ್ಷಕರಿಗೆ ದೂರು ನೀಡಿದ್ದರು. ಸದರಿ ಸ್ಥಳದ ಅಳತೆ ಮಾಡಿಸಿ ವರದಿ ನೀಡುವಂತೆ ಲೋಕಾಯುಕ್ತ ಅಧೀಕ್ಷಕರು ನೀಡಿರುವ ಸೂಚನೆಯಂತೆ ತಹಸೀಲ್ದಾರ್ ಪರಶುರಾಮ ಸತ್ತಿಗೇರಿ, ತಾ.ಪಂ. ಇಒ ವೇಣು, ಬಿಇಓ ಆರ್.ಪಿ. ಮಹೇಶ್, ಕಂದಾಯ ನಿರೀಕ್ಷಕ ರೇವಣ್ಣ ಅವರನ್ನು ಒಳಗೊಂಡ ತಂಡ ಸ್ಥಳ ಪರಿಶೀಲನೆ ನಡೆಸಿತು.

ಜಾಗದ ಅಳತೆ ಮಾಡಿಸಿ ಹದ್ದು ಬಸ್ತು ಗುರುತಿಸಿ ಶೀಘ್ರ ವರದಿ ನೀಡುವಂತೆ ಸರ್ವೇಯರ್ ಮತ್ತು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ರವಿ ಅವರಿಗೆ ತಹಸೀಲ್ದಾರ್ ಸೂಚಿಸಿದರು. ಗ್ರಾಮದ ಸ.ನಂ.4 ಮತ್ತು 5ರ ನಡುವೆ ಇರುವ ವಿತರಣಾ ನಾಲೆಯ ರಸ್ತೆ ಜಾಗವನ್ನೂ ಅಳತೆ ಮಾಡಿಸಿ ಹದ್ದುಬಸ್ತು ಗುರುತಿಸಿಕೊಡಿ ಎಂದು ಗ್ರಾಮಸ್ಥರು ಈ ವೇಳೆ ಅಧಿಕಾರಿಗಳಿಗೆ ಮನವಿ ಮಾಡಿದರು. ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪಿ.ಎಸ್.ನಟರಾಜ್, ನಿವೃತ್ತ ಪಾಂಶುಪಾಲೆ ಶಾಂತಮ್ಮ, ಪ್ರಸನ್ನ, ಮುಖ್ಯ ಶಿಕ್ಷಕಿ ಪುಷ್ಪಲತಾ ಸೇರಿದಂತೆ ಗ್ರಾಮಸ್ಥರು ಇದ್ದರು.

ಯುವಕ ನಾಪತ್ತೆ



ಪಾಂಡವಪುರ, ಫೆ.22– ತಾಲೂಕಿನ ಹಿರೇಮರಳಿ ಗ್ರಾಮದ ನಿವಾಸಿ ರಾಮಕೃಷ್ಣ ಎಂಬುವರ ಪುತ್ರ ಎಚ್.ಆರ್.ಯಶ್ವಂತ್ (20) ಫೆ.16ರಿಂದ ನಾಪತ್ತೆಯಾಗಿದ್ದಾನೆ.

ತುಂಬುತೋಳಿನ ನೀಲಿ ಶರ್ಟ್, ಮೆರೂನ್ ಕಲರ್ ನೈಟ್ ಪ್ಯಾಂಟ್ ಧರಿಸಿರುವ ಈತನ ಸುಳಿವು ಸಿಕ್ಕಲ್ಲಿ ಪಾಂಡವಪುರ ಪೊಲೀಸ್ ಠಾಣೆ ಅಥವಾ ಮೊ.7204070333ಗೆ ಸಂಪರ್ಕಿಸುವಂತೆ ಕೋರಲಾಗಿದೆ. ಪಾಂಡವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್ಥಿಕ ನೆರವು...



ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿ ಗ್ರಾಮದಲ್ಲಿ ಅನಿಲ ಸೋರಿಕೆಯಿಂದ ಮನೆಗೆ ತೀವ್ರ ಹಾನಿ ಉಂಟಾಗಿ ಗೃಹ ಬಳಕೆ ವಸ್ತುಗಳು ನಾಶವಾಗಿದ್ದ ಹಿನ್ನೆಲೆಯಲ್ಲಿ ನಿರಾಶ್ರಿತರ ಕುಟುಂಬಕ್ಕೆ ಮನ್‌ಮುಲ್ ನಿರ್ದೇಶಕರಾದ ಡಾಲು ರವಿ ಆರ್ಥಿಕ ನೆರವು ನೀಡಿ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮೋಹನ್, ಹರೀಶ್, ಕುಮಾರಸ್ವಾಮಿ ಇತರರು ಇದ್ದರು.

ಮಂಡ್ಯ ವಿವಿ ವಿಲೀನಗೊಳಿಸಿದರೆ ಹೋರಾಟ

ಮಂಡ್ಯ, ಫೆ.22– ಮಂಡ್ಯ ವಿಶ್ವವಿದ್ಯಾಲಯವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ವಿಲೀನಗೊಳಿಸದೇ ಮಂಡ್ಯದಲ್ಲಿಯೇ ಮುಂದುವರೆಸಬೇಕು ಎಂದು ಮಂಡ್ಯ ವಿಶ್ವವಿದ್ಯಾಲಯ ಉಳಿಸಿ ಹೋರಾಟ ವೇದಿಕೆಯ ಬೇಕ್ರಿ ರಮೇಶ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ವಿವಿಯನ್ನು ಮೈಸೂರು ವಿವಿಗೆ ವಿಲೀನ ಮಾಡಲು ಯಾವುದೇ ಸಕಾರಾತ್ಮಕ ಕಾರಣ ಕೊಡದೇ ವಿಲೀನ ಮಾಡಲು ಸರ್ಕಾರ ಮುಂದಾಗಿದೆ ಎಂದು ಆರೋಪಿಸಿದರು.

ಸಮಿತಿ ವರದಿ, ಆರ್ಥಿಕ ಹೊರೆಯ ನೆಪವೊಡ್ಡಿ ವಿವಿಯ ವಿಲೀನಕ್ಕೆ ಮುಂದಾಗಿರುವುದು ಸರಿಯಲ್ಲ, ಮಂಡ್ಯ ವಿವಿಯು ಶೈಕ್ಷಣಿಕವಾಗಿ ಅತ್ಯಂತ ಪ್ರಬಲವಾಗಿದ್ದು, ಆಡಳಿತಾತ್ಮಕ ಲೋಪವಿದ್ದರೆ ಅದಕ್ಕೆ ಸರ್ಕಾರವೇ ನೇರ ಹೊಣೆ ಎಂದು ದೂರಿದರು.

ಮಂಡ್ಯ ಜಿಲ್ಲೆಗೆ ತನ್ನದೇ ಆದ ಹೆಸರಿದೆ. ಇಂತದ್ದರಲ್ಲಿ ವಿವಿಯನ್ನು ವಿಲೀನಗೊಳಿಸಲು ಮುಂದಾಗಿರುವುದು ಅಸಹನೀಯ, ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಶಾಸಕರುಗಳು ಈ ಬಗ್ಗೆ ಮಾತನಾಡದೇ ಸುಮ್ಮನಿರುವುದೇಕೆ ಎಂದು ಪ್ರಶ್ನಿಸಿದ ಅವರು, ಮೈಸೂರಿಗೆ ವಿಲೀನವಾದಲ್ಲಿ ಬಡ ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಾಗುವುದು ಖಚಿತ. ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಸಂಕಷ್ಟಕ್ಕೆ ಬೀಳಲಿದೆ ಎಂದು ಸಮಸ್ಯೆಯನ್ನು ಬಿಚ್ಚಿಟ್ಟರು.

ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರುಗಳು ಹಾಗೂ ಮಾಜಿ ಶಾಸಕರು ವಿವಿಯನ್ನು ಮಂಡ್ಯದಲ್ಲಿಯೇ ಉಳಿಸಿಕೊಂಡಲ್ಲಿ ಜಿಲ್ಲೆ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲಿದೆ. ಇಲ್ಲವಾದಲ್ಲಿ ಮಂಡ್ಯ ವಿವಿ ಮುಚ್ಚಿಸಿದ ಅಪಕೀರ್ತಿಗೆ ಜಿಲ್ಲೆಯ ಜನಪ್ರತಿನಿಧಿಗಳು ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಮೋಹನ್ ಚಿಕ್ಕಮಂಡ್ಯ, ಡಿ.ಅಶೋಕ್, ಮೋಹನ್, ಹೆಮ್ಮಿಗೆ ಚಂದ್ರಶೇಖರ್, ಅಚ್ಯುತ್ ಇತರರಿದ್ದರು.

ಕೆಪಿಸಿಸಿ ಅಧ್ಯಕ್ಷ, ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ



ಮದ್ದೂರು: ಕೆಪಿಸಿಸಿ ಅಧ್ಯಕ್ಷ ಹಾಗೂ ಮುಖ್ಯಮಂತ್ರಿ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ಶಾಸಕ ಕೆಎಂ. ಉದಯ್ ತಿಳಿಸಿದರು.

ತಾಲೂಕಿನ ನಿಡಘಟ್ಟದಲ್ಲಿ ಗುರುವಾರ ಡಾ.ಬಾಬುಜಗಜೀವನ್ ರಾಂ ಭವನ ನಿರ್ಮಾಣಕ್ಕೆ ಗುದ್ದಲಿಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿ ಮಾತನಾಡಿದರು.

ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಉತ್ತಮ ಆಡಳಿತವನ್ನು ನೀಡುತ್ತಿದ್ದಾರೆ ಹಾಗೆಯೇ ಡಿ.ಕೆ.ಶಿವಕುಮಾರ್‌ರವರು ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಕಳೆದ 3 ವರ್ಷಗಳಿಂದ ಪಕ್ಷದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ದಾಖಲೆಯೆಬಂತೆ ಪಕ್ಷವು ಡಿ.ಕೆ.ಶಿವಕುಮಾರ್‌ರವರ ನೇತೃತ್ವದಲ್ಲಿ 138 ಸ್ಥಾನಗಳನ್ನು ಪಡೆಯುವುದರ ಮೂಲಕ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಗಿದೆ ಎಂದರು.

ಹೀಗಿರುವಾಗ ಎರಡೂ ಸ್ಥಾನಗಳು ಅಬಾಧಿತವಾಗಿದ್ದು ಯಾರ ಬದಲಾವಣೆಯ ಪ್ರಶ್ನೆ ಉದ್ಭವಿಸಲ್ಲ, ಕೆಲವರು ಸುಮ್ಮನೆ ಈ ಬಗ್ಗೆ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ ಅಷ್ಟೇ ಎಂದ ಅವರು ಮುಂದೆ ಪಕ್ಷದ ವರಿಷ್ಠರು ಎಲ್ಲವನ್ನೂ ಸರಿಮಾಡಲಿದ್ದಾರೆ ಎಂದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ನೀರಾವರಿಗೆ ಹೆಚ್ಚು ಒತ್ತು ನೀಡುತ್ತಿದ್ದೇನೆ, ಮುಂದಿನ ದಿನಗಳಲ್ಲಿ ಸುಮಾರು 300 ಕೋಟಿ ರೂಗಳ ವೆಚ್ಚದಲ್ಲಿ ನಾಲೆಗಳ ಅಭಿವೃದ್ಧಿ ಕಾಮಗಾರಿಗಳಾಗಲಿದ್ದು ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಇಷ್ಟರಲ್ಲೇ ಕಾಮಗಾರಿ ಆರಂಭಗೊಳ್ಳಲಿದೆ ಎಂದರು.

ಮನ್‌ಮುಲ್ ನಿರ್ದೇಶಕ ಹರೀಶ್, ಗ್ರಾಪಂ ಅಧ್ಯಕ್ಷೆ ಕೆ.ಪಿ.ಉಮಾ, ಸದಸ್ಯ ಮಹೇಶ್, ಗ್ರಾಪಂ ಮಾಜಿ ಅಧ್ಯಕ್ಷ ನಿಡಘಟ್ಟ ಎನ್.ಎಂ. ಪ್ರಕಾಶ್, ಮುಖಂಡರಾದ ಕದಲೂರು ರವಿ, ಯತೀಶ್, ನಾರಾಯಣ, ಸ್ವಾಮಿ ಇದ್ದರು.

ವಿಸಿ ನಾಲೆಯಲ್ಲಿ ಅಪರಿಚಿತ ಗಂಡಸಿನ ಶವ ಪತ್ತೆ

ಭಾರತೀನಗರ, ಫೆ22– ಇಲ್ಲಿಗೆ ಸಮೀಪದ ಕಪರೇಕೊಪ್ಪಲು ಗ್ರಾಮದ ವಿಸಿ ನಾಲೆಯಲ್ಲಿ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ. ಸುಮಾರು 30 ರಿಂದ 35 ವರ್ಷ ವಯಸ್ಸಾಗಿದ್ದು ಈತನ ಮೃತದೇಹ ಕೆ.ಎಂ.ದೊಡ್ಡಿ ಪೊಲೀಸ್‌ಠಾಣಾ ವ್ಯಾಪ್ತಿಯ ವಿಸಿ ನಾಲೆಯ ನೀರಿನಲ್ಲಿ ತೇಲಿ ಬಂದಿದ್ದು ಕೇಸರಿ ಮತ್ತು ಕಪ್ಪು ಬಣ್ಣದ ಷರ್ಟ್ ಧರಿಸಿದ್ದಾನೆ. ಈತನ ಕೈಮೇಲೆ ಶಿವಪಾರ್ವತಿ ಅಚ್ಚೆವುಳ್ಳ ಟ್ಯಾಟು ಇದೆ. ವಾರಸುದಾರರು ಕೆ.ಎಂ.ದೊಡ್ಡಿ ಪೊಲೀಸ್‌ಠಾಣೆಯನ್ನು ಸಂಪರ್ಕಿಸಲು ಪೊಲೀಸರು ಕೋರಿದ್ದಾರೆ.

ಒಂದನೇ ಪುಟದಿಂದ

ವನ್ಯಜೀವಿಗಳ ಪ್ರಾಣಹಾನಿ ಇಲ್ಲ

ಎರಡು ಕಡೆ ಬೆಂಕಿ ಹಚ್ಚಿದ ಪರಿಣಾಮ ಈ ಅನಾಹುತ ಸಂಭವಿಸಿದೆ. ಈ ಸಂಬಂಧ ಈಗಾಗಲೇ ಎಫ್‌ಐಆರ್ ದಾಖಲಿಸಲಾಗಿದ್ದು, ಬೆಂಕಿ ಹಚ್ಚಿದ ಕಿಡಿಗೇಡಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಮೊಬೈಲ್ ಡಂಪಿಂಗ್ ಮೂಲಕ ಆ ಸಂದರ್ಭದಲ್ಲಿ ಸದರಿ ಪ್ರದೇಶದಲ್ಲಿ ಯಾರ‍್ಯಾರು ಸಂಚರಿಸಿದ್ದರು ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲಾ ಗುತ್ತಿದ್ದು, ಕಿಡಿಗೇಡಿಗಳನ್ನು ಶೀಘ್ರದಲ್ಲೇ ಪತ್ತೆ ಹಚ್ಚುವ ವಿಶ್ವಾಸವಿದೆ ಎಂದರು. ಮಧ್ಯಾಹ್ನ 12.30ಕ್ಕೆ ಸಕಾಲದಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆ ಅರಂಭಿಸ ಲಾಗಿತ್ತಾದರೂ, ಗಂಟೆಗೆ 40ರಿಂದ 45 ಕಿ.ಮೀ. ವೇಗದಲ್ಲಿ ಬೀಸುತ್ತಿದ್ದ ಗಾಳಿ ಹಾಗೂ 32ರಿಂದ 34 ಡಿಗ್ರಿ ಉಷ್ಣಾಂಶದಿಂದಾಗಿ ಬೆಂಕಿ ವೇಗವಾಗಿ ವ್ಯಾಪಿಸಿತು. ಬೆಂಕಿ ಬಿದ್ದ ಸ್ಥಳ ಕಣಿವೆ ಪ್ರದೇಶವಾಗಿರು ವುದರಿಂದ ಬೆಂಕಿಯ ಕೆನ್ನಾಲಿಗೆ ಬೇಗನೆ ವ್ಯಾಪಿಸಿದ್ದಲ್ಲದೇ, ಆ ಸ್ಥಳಕ್ಕೆ ತೆರಳಲು ರಸ್ತೆ ಇಲ್ಲದ ಕಾರಣ ಬೆಂಕಿ ನಂದಿಸಲು ಕಷ್ಟಸಾಧ್ಯವಾಯಿತು. ಸದರಿ ಸ್ಥಳದಲ್ಲಿ ಮಣ್ಣಿನ ಪ್ರದೇಶ ಕಡಿಮೆ ಇದ್ದು, ಬಂಡೆಗಳೇ ಹೆಚ್ಚಾಗಿರುವುದರಿಂದ ಕಳೆದ ನಾಲ್ಕೈದು ವರ್ಷದಿಂದ ಗಿಡ–ಮರಗ ಳಿಂದ ಉದುರಿದ್ದ ಒಣಗಿದ ಎಲೆಗಳು ಕೊಳೆಯದೇ ಸಂಗ್ರಹವಾಗಿದ್ದುದೂ ಕೂಡ ಬೆಂಕಿ ಶೀಘ್ರವಾಗಿ ಹರಡಲು ಕಾರಣ ವಾಯಿತು ಎಂದು ಅವರು ವಿವರಿಸಿದರು.

ಚಾಮುಂಡಿಬೆಟ್ಟದಲ್ಲಿ ಈ ಹಿಂದೆ ಚಿರತೆ, ಜಿಂಕೆ, ಕಡವೆ, ಅಳಿಲು ಇರುವುದು ಕಂಡು ಬಂದಿತ್ತು. ಇತ್ತೀಚೆಗೆ ಅಲ್ಲಿ 5 ಚಿರತೆಗಳು ಇರುವುದು ವರದಿಯಾಗಿತ್ತು. ಬೆಂಕಿ ಅನಾಹುತದ ನಂತರ ದೇವಿಕೆರೆ ಹಿಂಭಾಗ ಶನಿವಾರ ಮುಂಜಾನೆ 2 ದೊಡ್ಡ ಚಿರತೆಗಳೊಂದಿಗೆ ಎರಡು ಮರಿಗಳು ಕಾಣಿಸಿಕೊಂಡಿರುವುದು ಬೆಂಕಿ ಅನಾಹುತದಿಂದ ವನ್ಯಜೀವಿಗಳಿಗೆ ಹಾನಿಯಾಗಿಲ್ಲ ಎಂಬುದನ್ನು ದೃಢಪಡಿಸುತ್ತಿದೆ ಎಂದರು. ಚಾಮುಂಡಿಬೆಟ್ಟ ಮೀಸಲು ಅರಣ್ಯಕ್ಕೆ ಜನ–ಜಾನುವಾರುಗಳ ಅಕ್ರಮ ಪ್ರವೇಶ ತಡೆಯುವ ನಿಟ್ಟಿನಲ್ಲಿ ಈಗಾಗಲೇ ಕೆಲವೆಡೆ ಬೇಲಿ ನಿರ್ಮಿಸಲಾಗಿದೆ. ಶುಕ್ರವಾರ ಬೆಂಕಿ ಬಿದ್ದಿದ್ದ ಕೆಲ ಭಾಗಗಳಲ್ಲಿ ಬೇಲಿ ಇರಲಿಲ್ಲ ಎಂದು ತಿಳಿಸಿದ ಅವರು, ಮುಂದಿನ ದಿನಗಳಲ್ಲಿ ಆ ಭಾಗಗಳಲ್ಲೂ ಬೇಲಿ ನಿರ್ಮಿಸಲಾಗುವುದು ಎಂದರು.

ಚಾಮುಂಡಿಬೆಟ್ಟ ಪ್ರವೇಶಕ್ಕೆ ನಾಲ್ಕು ರಸ್ತೆಗಳಿದ್ದು, ಪ್ರತಿ ದಿನ 2 ರಿಂದ 6 ಸಾವಿರ ಭಕ್ತರು ಹಾಗೂ ಪ್ರವಾಸಿಗರು ಭೇಟಿ ನೀಡುತ್ತಾರೆ. ವಿಶೇಷ ದಿನಗಳಲ್ಲಿ ಇದರ ಸಂಖ್ಯೆ ಅಧಿಕವಾಗಿರುತ್ತದೆ ಎಂದು ತಿಳಿಸಿದ ಡಿಸಿಎಫ್, ಒಂದು ಸಣ್ಣ ಕಿಡಿಯೂ ಇಡೀ ಅರಣ್ಯವನ್ನೇ ನಾಶ ಮಾಡಲಿರುವುದರಿಂದ ಬೆಟ್ಟಕ್ಕೆ ಬರುವ ಭಕ್ತರು ಹಾಗೂ ಪ್ರವಾಸಿಗರು ಬೀಡಿ–ಸಿಗರೇಟ್ ಸೇದಿ ಎಸೆಯಬೇಡಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಆರ್‌ಎಫ್‌ಓ ಶ್ರೀನಿವಾಸ್ ಉಪಸ್ಥಿತರಿದ್ದರು.

ಜ್ವಾಲೆಯಿಂದ ಕೆಲ ಕಾಲ ಆತಂಕ

ಸಾಮಗ್ರಿಗಳನ್ನು ತಂದು ಇಲ್ಲಿ ಹಾಕಲಾಗಿತ್ತು. ಇಂದು ಮಧ್ಯಾಹ್ನ 3 ಗಂಟೆಯಲ್ಲಿ ಈ ಕಸದ ರಾಶಿಗೆ ಬೆಂಕಿ ಬಿದ್ದ ಪರಿಣಾಮ ದಟ್ಟ ಕಪ್ಪು ಹೊಗೆ ಆವರಿಸಿದೆ.

ಬೆಂಕಿಯ ತೀವ್ರತೆ ಹೆಚ್ಚಾಗುತ್ತಿದ್ದಂತೆ ಭಾರೀ ಪ್ರಮಾಣದ ದಟ್ಟ ಹೊಗೆ ಮೈಸೂರು–ನಂಜನಗೂಡು ರಸ್ತೆಗೆ ಆವರಿಸಿದ್ದರಿಂದ ವಾಹನ ಸವಾರರು ಭಯದಿಂದ ವಾಹನಗಳ ರಸ್ತೆ ಬದಿಯಲ್ಲಿ ನಿಲ್ಲಿಸಿಕೊಂಡು ನಿಂತರು. ಹೊಗೆ ರಸ್ತೆಯಲ್ಲಿ ಓಡಾಡುವವರನ್ನು ಗುರುತಿಸಲು ಸಾಧ್ಯವಾಗದಂತೆ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಶುಕ್ರವಾರವಷ್ಟೇ ಚಾಮುಂಡಿಬೆಟ್ಟಕ್ಕೆ ಬೆಂಕಿ ಬಿದ್ದು ಅಪಾರ ಪ್ರಮಾಣದ ಅರಣ್ಯ ಪ್ರದೇಶ ನಾಶವಾದ ಘಟನೆ ಮಾಸುವ ಮುನ್ನವೇ ವಸ್ತುಪ್ರದರ್ಶನ ಆವರಣದಲ್ಲಿ ಕಾಣಿಸಿಕೊಂಡ ಬೆಂಕಿ ಆತಂಕ ನಿರ್ಮಿಸಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ಕುಂಭಮೇಳದಲ್ಲಿ ಪುಣ್ಯಸ್ನಾನ



ಪ್ರಯಾಗ್‌ರಾಜ್ ಕುಂಭಮೇಳದಲ್ಲಿ ಅರಕಲಗೂಡು ಶಾಸಕ ಎ.ಮಂಜು ಅವರು ಪುಣ್ಯಸ್ನಾನ ಮಾಡಿ, ರಾಜ್ಯದ ಸಮೃದ್ಧಿ ಹಾಗೂ ಜನತೆಗೆ ಸುಖ–ಶಾಂತಿಗಾಗಿ ಕನ್ನಡ ಬಾವುಟ ಪ್ರದರ್ಶಿಸಿ ಪ್ರಾರ್ಥಿಸಿದರು.

ವಿದ್ಯುತ್ ಅಭಾವ ಸಂಭವ

ಎರಡನೇ ಬೆಳೆಗೆ ಅಡ್ಡಿ ಮಾಡದೆ ನೀರು ಪೂರೈಸಿ ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸಲಹೆ ಮಾಡಿದ್ದಾರೆ.

ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಎಲ್ಲಿಯೂ ವಿದ್ಯುತ್ ತೊಂದರೆ ಆಗದಂತೆ ಸಂಜೆ 6 ಗಂಟೆಯಿಂದ ಮುಂಜಾನೆ 6ರವರೆಗೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆಗೆ ಸೂಚಿಸಲಾಗಿದೆ.

ಅರಣ್ಯ ಪ್ರದೇಶದ ಗಡಿ ಭಾಗದ ಗ್ರಾಮಗಳಲ್ಲಿ ಕೃಷಿ ಪಂಪ್ ಸೆಟ್‌ಗಳಿಗೆ ಆರರಿಂದ ಏಳು ತಾಸು ವಿದ್ಯುತ್ ಅನ್ನು ಹಗಲಿನ ವೇಳೆ ನೀಡಿ ಎಂದು ಇಲಾಖೆ ಆದೇಶ ಮಾಡಿದೆ. ರೈತರು ರಾತ್ರಿ ವೇಳೆ ನೀರು ಹರಿಸಲು ಹೋದಾಗ, ಕೆಲವರು ಕಾಡು ಪ್ರಾಣಿಗಳಿಗೆ ಬಲಿಯಾದ ಹಿನ್ನೆಲೆಯಲ್ಲಿ ಸರ್ಕಾರ ಈ ಆದೇಶ ಮಾಡಿದೆ.

ಬೇಸಿಗೆ ಆರಂಭದಲ್ಲೇ 17,000 ಮೆಗಾ ವ್ಯಾಟ್ ವಿದ್ಯುತ್ ಬೇಡಿಕೆ ಇದೆ. ಆದರೆ, ನಮ್ಮಲ್ಲಿನ ಉತ್ಪಾದನೆ ಮತ್ತು ಹೊರರಾಜ್ಯಗಳಿಂದ ಖರೀದಿ ಮಾಡುತ್ತಿರುವುದು 16,600 ಮೆಗಾ ವ್ಯಾಟ್ ಮಾತ್ರ.

ಮುಂದಿನ ಮೂರು ತಿಂಗಳಲ್ಲಿ ಈ ಬೇಡಿಕೆ 19,000 ದಿಂದ 19,500 ಮೆಗಾ ವ್ಯಾಟ್‌ಗೆ ಮುಟ್ಟಬಹುದೆಂದು ಅಂದಾಜು ಮಾಡಲಾಗಿದೆ. ಈ ಕಾರಣಕ್ಕಾಗಿಯೇ ದುರಸ್ತಿಗೆ ಒಳಗಾಗಿರುವ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕಗಳಿಗೆ ತಿಂಗಳಾಂತ್ಯದೊಳಗೆ ಚಾಲನೆ ನೀಡುವಂತೆ ಸೂಚಿಸಿದೆ. ಜೊತೆ ಜೊತೆಯಲ್ಲೇ ತೀವ್ರ ಬೇಡಿಕೆ ಮತ್ತು ಸಂಕಷ್ಟ ಸಂದರ್ಭದಲ್ಲಿ ವಿದ್ಯುತ್ ಉತ್ಪಾದನಾ ಜಲಾಶಯಗಳಿಂದ ಹೆಚ್ಚು ಉತ್ಪಾದನೆ ಮಾಡುವಂತೆಯೂ ಆದೇಶಿಸಿದೆ. ಕಳೆದ ವರ್ಷ ಉತ್ತಮ ಮಳೆಯಾಗಿದ್ದರಿಂದ ವಿದ್ಯುತ್ ಉತ್ಪಾದನಾ ಜಲಾಶಯಗಳಲ್ಲಿ ಶೇಕಡ 70ರಷ್ಟು ನೀರಿನ ಸಂಗ್ರಹವಿದೆ. ಜಲಾಶಯಗಳಲ್ಲಿ ನೀರಿದ್ದರೂ ಸಂಪೂರ್ಣ ವಿದ್ಯುತ್ ಬೇಡಿಕೆ ಈಡೇರಿಸಲು ಸಾಧ್ಯವಿಲ್ಲ. ಬರುವ ದಿನಗಳಲ್ಲಿ ಕೊರತೆಯಾಗುವ 3,000 ಮೆಗಾವ್ಯಾಟ್ ಪೈಕಿ ಉತ್ತರ ಪ್ರದೇಶ ಮತ್ತು ಪಂಜಾಬ್‌ನಿಂದ ಸಾಲದ ರೂಪದಲ್ಲಿ ವಿದ್ಯುತ್ ಪಡೆಯಲು ಇಲಾಖೆ ಒಪ್ಪಂದ ಮಾಡಿಕೊಂಡಿದೆ.

ತದನಂತರ ಉಂಟಾಗುವ ಕೊರತೆಯನ್ನು ಖಾಸಗಿ ವಿದ್ಯುತ್ ಸಂಸ್ಥೆಗಳಿಂದ ಖರೀದಿ ಮಾಡಬೇಕಾಗುತ್ತದೆ. ಅದನ್ನು ಸರಿದೂಗಿಸಲು ಇಲಾಖೆಯಲ್ಲಿ ಹಣದ ಕೊರತೆಯಿದೆ. ಸರ್ಕಾರ ಮಧ್ಯೆ ಪ್ರವೇಶ ಮಾಡಿದ ನಂತರವೂ ಎದುರಾಗುವ ವಿದ್ಯುತ್ ಕೊರತೆ ನಿಭಾಯಿಸಲು, ಕಡಿತ ಮಾಡದೆ ಲೋಡ್‌ಶೆಡ್ಡಿಂಗ್‌ಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಭಾರತ–ಪಾಕ್ ಹೈ ವೋಲ್ಟೇಜ್ ಪಂದ್ಯ

ಕನ್ನಡಿಗ ಕೆ.ಎಲ್.ರಾಹುಲ್, ಮೊಹಮ್ಮದ್ ಶಮಿ, ಹರ್ಷಿತ್ ರಾಣಾ ಸೇರಿದಂತೆ ಎಲ್ಲಾ ಆಟಗಾರರು ಭರ್ಜರಿ ಫಾರ್ಮ್‌ನಲ್ಲಿದ್ದು, ಕಳೆದ ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿದಿದ್ದ ತಂಡವೇ ಪಾಕ್ ವಿರುದ್ಧ ಕಣಕ್ಕಿಳಿಯುವ ಸಾಧ್ಯತೆ ಇದೆ. ಪಾಕಿಸ್ತಾನದ ಪರ ಬಾಬರ್ ಅಜಂ, ನಾಯಕ ಮೊಹಮ್ಮದ್ ರಿಜ್ವಾನ್, ಸೌದ್ ಶಕೀಲ್ ಸೇರಿದಂತೆ ಇನ್ನಿತರರು ಉತ್ತಮ ಫಾರ್ಮ್‌ನಲ್ಲಿದ್ದು, ಭಾರತದ ವಿರುದ್ಧದ ಪಂದ್ಯ ಗೆಲ್ಲುವತ್ತ ಚಿತ್ತ ಹರಿಸಿದ್ದಾರೆ. ಒಟ್ಟಾರೆ ನಾಳಿನ ಪಂದ್ಯ ರಣ ರೋಚಕವಾಗಿರಲಿದ್ದು, ಕ್ರಿಕೆಟ್ ಅಭಿಮಾನಿಗಳು ಕಣ್ತುಂಬಿಕೊಳ್ಳಲು ಕಾತರದಿಂದಿದ್ದಾರೆ.

ಸೇಡು ತೀರಿಸಿಕೊಳ್ಳಲು ಭಾರತ ಸಜ್ಜು: ನಾಳಿನ ಪಂದ್ಯ ಗೆಲ್ಲುವ ಮೂಲಕ ಪಾಕ್ ವಿರುದ್ಧ ಭಾರತ ಹಳೇ ಸೇಡು ತೀರಿಸಿಕೊಳ್ಳಲು ಮುಂದಾಗಿದೆ. 2017ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯ ಲೀಗ್ ಹಂತದ 4ನೇ ಪಂದ್ಯದಲ್ಲಿ ಭಾರತ ಪಾಕ್ ವಿರುದ್ಧ 124 ರನ್‌ಗಳಿಂದ ಗೆಲುವು ಸಾಧಿಸಿತ್ತು. ಅಲ್ಲದೇ ಟೂರ್ನಿಯಲ್ಲಿ ಭಾರತ ಒಟ್ಟು 3 ಪಂದ್ಯಗಳಲ್ಲಿ ಗೆದ್ದು ಫೈನಲ್‌ಗೆ ಲಗ್ಗೆ ಹಾಕಿತ್ತು. ಮತ್ತೊಂದೆಡೆ ಪಾಕ್ ಕೂಡ ಫೈನಲ್‌ಗೆ ಪ್ರವೇಶಿಸಿತ್ತು. ಫೈನಲ್‌ನಲ್ಲಿ ಪಾಕ್ ಭಾರತವನ್ನು 180 ರನ್‌ಗಳಿಂದ ಸೋಲಿಸುವ ಮೂಲಕ ಚಾಂಪಿಯನ್ಸ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತ್ತು. ಇದೀಗ 8 ವರ್ಷದ ಬಳಿಕ ಮತ್ತೆ ಮುಖಾಮುಖಿಯಾಗುತ್ತಿದ್ದು, ಫೈನಲ್ ಪಂದ್ಯದ ಸೇಡು ತೀರಿಸಿಕೊಳ್ಳಲು ಭಾರತಕ್ಕೆ ಸುವರ್ಣಾವಕಾಶ ದೊರೆತಿದೆ.

ಇತಿಹಾಸ: ಭಾರತ–ಪಾಕಿಸ್ತಾನ ತಂಡಗಳು ಏಕದಿನ ಕ್ರಿಕೆಟ್‌ನಲ್ಲಿ ಇದುವರೆಗೂ 135 ಬಾರಿ ಮುಖಾಮುಖಿಯಾಗಿದ್ದು, ಈ ಪೈಕಿ ಪಾಕಿಸ್ತಾನ 73, ಭಾರತ 57 ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. ಆದರೆ 5 ಪಂದ್ಯಗಳಲ್ಲಿ ಯಾವುದೇ ಫಲಿತಾಂಶ ಬಂದಿಲ್ಲ. ಆದರೆ 2010 ರಿಂದೀಚೆಗೆ ಭಾರತ ಸಂಪೂರ್ಣ ಪ್ರಾಬಲ್ಯ ಸಾಧಿಸಿದೆ. ಈ ಅವಧಿಯಲ್ಲಿ ಎರಡೂ ತಂಡಗಳು 17 ಪಂದ್ಯಗಳಲ್ಲಿ ಮುಖಾಮುಖಿಯಾಗಿದ್ದು, ಭಾರತ 12ರಲ್ಲಿ ಜಯ ಸಾಧಿಸಿದ್ದರೆ, ಪಾಕ್ ಕೇವಲ 4 ರಲ್ಲಿ ಗೆದ್ದಿದೆ. ಒಂದು ಪಂದ್ಯ ರದ್ದಾಗಿದೆ.

ಚಾಂಪಿಯನ್ಸ್ ಟ್ರೋಫಿಯಲ್ಲಿ ಮುಖಾಮುಖಿ: ಈ ಮೆಗಾ ಪಂದ್ಯಾವಳಿಯಲ್ಲಿ ಉಭಯ ತಂಡಗಳು ಇಲ್ಲಿಯವರೆಗೆ 5 ಬಾರಿ ಮುಖಾಮುಖಿಯಾಗಿದ್ದು, ಪಾಕಿಸ್ತಾನ 3 ಪಂದ್ಯಗಳಲ್ಲಿ ಗೆದ್ದರೆ, ಭಾರತ 2 ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ.

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಅಭಿವೃದ್ಧಿ ಪರ್ವ

ಹಾಗೂ ರಾಜ್ಯದ ಎಲ್ಲಾ ಕಲೆ ಮತ್ತು ಸಂಸ್ಕೃತಿ ಗಳಿಗೆ ಆದ್ಯತೆ ನೀಡಿ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಅವಕಾಶ ಮಾಡಿಕೊಡಲಾಗುವುದು. ಇದರಿಂದ ದಸರಾ ಹೊರತುಪಡಿಸಿ, ಉಳಿದ 8 ತಿಂಗಳು ಪ್ರತಿ ತಿಂಗಳು 10 ರಿಂದ 15 ದಿನಗಳ ವಸ್ತುಪ್ರದರ್ಶನ ಆಯೋಜಿಸಿದರೆ ಪ್ರಾಧಿಕಾರಕ್ಕೆ ವಾರ್ಷಿಕ 1 ಕೋಟಿ ಆದಾಯ ಬರುತ್ತದೆ. ಇದಕ್ಕಾಗಿ 10 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಎ ಬ್ಲಾಕ್‌ಗೆ ಹಳೇಬೀಡು ಶೈಲಿಯ ಪ್ರವೇಶ ದ್ವಾರ ನಿರ್ಮಿಸಲಾಗುತ್ತದೆ. ಅಲ್ಲದೆ ಹಳೇಬೀಡು ದೇವಾಲಯದ ಶೈಲಿಯಲ್ಲಿ ಕೆಫೆಟೇರಿಯಾ (ಹೋಟೆಲ್) ನಿರ್ಮಿಸಲಾಗುತ್ತದೆ.

ಅಲ್ಲದೆ, ಉಳಿದ ಖಾಲಿ ಜಾಗದಲ್ಲಿ ಬಯಲು ಸಭಾಂಗಣ ನಿರ್ಮಿಸಿ ವಿವಿಧ ಕಾರ್ಯಕ್ರಮ ನಡೆಸು ವುದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಎಂದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಮೈಸೂರು ಮಾತ್ರವಲ್ಲದೆ ರಾಜ್ಯದ ವಿವಿಧೆಡೆ ವಸ್ತು ಪ್ರದರ್ಶನ ಆಯೋಜಿಸಲು ನಿರ್ಧರಿ ಸಲಾಗಿದೆ. ಮೊದಲ ಹಂತದಲ್ಲಿ ಬಳ್ಳಾರಿ, ಬೆಳಗಾವಿ, ದಾವಣ ಗೆರೆ, ಶಿವಮೊಗ್ಗದಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ವಸ್ತುಪ್ರದರ್ಶನ ಆಯೋಜಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

> **ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ವರ್ಷದ 365 ದಿನವೂ ವಸ್ತುಪ್ರದರ್ಶನ ನಡೆ ಸಲು ಉದ್ದೇಶಿಸಲಾಗಿದೆ. ಈಗ ಕೈಗೆತ್ತಿಕೊಂಡಿ ರುವ ಕಾಮಗಾರಿ ದಸರಾ ವೇಳೆಗೆ ಪೂರ್ಣಗೊಳ್ಳಲಿದೆ. ಮುಂದಿನ ವರ್ಷದ ಜನವರಿಯಿಂದ ಈ ಯೋಜನೆ ಜಾರಿಗೆ ಬರಲಿದೆ.**
> **-ಕೆ.ರುದ್ರೇಶ್,** ವಸ್ತುಪ್ರದರ್ಶನ ಸಿಇಒ

ಕಾರಂಜಿಗಳ ನವೀಕರಣ: ಪ್ರಾಧಿಕಾರದ ಸಂಗೀತ ಮತ್ತು ಬೆಳಕಿನ ಕಾರಂಜಿ ಪ್ರಮುಖ ಆಕರ್ಷಣೆಯಾಗಿದೆ. ಇವು 20 ವರ್ಷಗಳ ಹಳೆಯದಾಗಿದ್ದು, ಕಾರ್ಯನಿರ್ವಹಿಸಲು ಯೋಗ್ಯವಾದ ಸ್ಥಿತಿಯಲ್ಲಿಲ್ಲ. ಪ್ರತಿ ವರ್ಷ ದಸರಾ ವಸ್ತು ಪ್ರದರ್ಶನ ನಡೆಯುವ ಸಮಯದಲ್ಲಿ 35 ಲಕ್ಷ ರೂ ರಿಪೇರಿ ಕಾಮಗಾರಿಗೆ ವೆಚ್ಚವಾಗುತ್ತಿದೆ. ಹೀಗಾಗಿ ಈ ಕಾರಂಜಿಗಳನ್ನು ವರ್ಷಪೂರ್ತಿ ಚಾಲ್ತಿಗೊಳಿಸಿ ಸಾರ್ವಜನಿಕರು, ಪ್ರವಾಸಿಗರನ್ನು ಆಕರ್ಷಿಸಲು 10 ಕೋಟಿ ವೆಚ್ಚದಲ್ಲಿ ಸಂಗೀತ ಕಾರಂಜಿ ನಿರ್ಮಿಸಲಾಗುತ್ತಿದೆ. ಪ್ರತಿ ದಿನ ಸಂಜೆ ಪ್ರವಾಸಿಗರಿಗೆ ಸಂಗೀತ ಕಾರಂಜಿ ವೀಕ್ಷಿಸಲು ಅವಕಾಶ ನೀಡಲಾಗುವುದು. ಇದರಿಂದ ಪ್ರಾಧಿಕಾರಕ್ಕೆ ವಾರ್ಷಿಕವಾಗಿ ಅಂದಾಜು 1.5 ಕೋಟಿ ಆದಾಯವೂ ಬರಲಿದೆ. ಈ ಎರಡೂ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮಾರ್ಚ್ ಅಂತ್ಯದೊಳಗೆ ಮುಗಿಯಲಿದ್ದು, ಏಪ್ರಿಲ್‌ನಲ್ಲಿ ಕಾಮಗಾರಿ ಆರಂಭಿಸಿ ದಸರಾ ವೇಳೆಗೆ ಪೂರ್ಣಗೊಳಿಸಲಾಗುವುದು. ಅಲ್ಲದೆ ಜುರಾಸಿಕ್ ಪಾರ್ಕ್ ನಿರ್ಮಿಸುವ ಯೋಜನೆಯೂ ಇದೆ ಎಂದರು.

ತಪ್ಪು ಮಾಹಿತಿ: ಈ ಹಿಂದೆ ಮಾಜಿ ಸಂಸದ ಪ್ರತಾಪ ಸಿಂಹ ಸ್ವದೇಶಿ ದರ್ಶನ ಯೋಜನೆಯಲ್ಲಿ ವಸ್ತುಪ್ರದ ರ್ಶನಕ್ಕೆ ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ ಎಂದು ತಪ್ಪು ಮಾಹಿತಿ ನೀಡಿದ್ದರು. ಆದರೆ, ಇಲ್ಲಿಯವರೆಗೆ ನಯಾ ಪೈಸೆ ಅನುದಾನ ಬಂದಿಲ್ಲ. ಈ ಸಂಬಂಧ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ಕೆ.ರುದ್ರೇಶ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ನಗರ ಪಾಲಿಕೆ ಸದಸ್ಯ ಕೆ.ವಿ. ಮಲ್ಲೇಶ್, ಅರಸು ಇದ್ದರು.

ಕಲಾಸೌರಭ–2 ವಿಶೇಷ ಕಾರ್ಯಕ್ರಮ

ಮೈಸೂರು, ಫೆ.22(ಎಸ್‌ಪಿಎನ್)– ಮೈಸೂರು ಚಾಮರಾಜಪುರಂ ಕೃಷ್ಣರಾಜ ಬೂಲೆವಾರ್ಡ್ ರಸ್ತೆಯ ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀ ಚಾಮರಾಜೇಂದ್ರ ಸ್ಕೂಲ್ ಆಫ್ ಎಕ್ಸಲೆನ್ಸ್ ಸಹಯೋಗದೊಂದಿಗೆ ಕಲಾ ಸೌರಭ–2 ಕಾರ್ಯಕ್ರಮ ಶನಿವಾರ ಜರುಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕವಿ ಲಕ್ಷ್ಮೀ ಕಿಶೋರ್ ಅರಸ್ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಅಳವಡಿಕೆಯಿಂದ ಪ್ರಾಥಮಿಕ ಹಂತದಿಂದಲೇ ಅನುಷ್ಠಾನಗೊಂಡರೆ, ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣ ನೀಡಲು ಸಾಧ್ಯವಿದೆ. ದೇಶಿಯ ಕಲೆ, ಸಾಹಿತ್ಯ, ಚಿತ್ರಕಲೆ, ನೃತ್ಯ ಹಾಗೂ ಒಳಾಂಗಣ, ಹೊರಾಂಗಣ ಕ್ರೀಡೆಗಳ ಕಲಿಕೆ ಆದ್ಯತೆ ನೀಡಲಾಗಿದೆ. ಅಲ್ಲದೆ, ಮಕ್ಕಳು ಇಷ್ಟಪಡುವ ಭಾಷೆಗಳಲ್ಲಿ ಶಿಕ್ಷಣ ಕಲಿಕೆಗೆ ಆದ್ಯತೆ ನೀಡಿರುವುದು ಸಂತೋಷದ ಸಂಗತಿ ಎಂದರು.

ವಿದ್ಯಾರ್ಥಿಗಳು ಮೊಬೈಲ್ ಎಂಬ ಮಾಯಾಜಾಲದಿಂದ ಹೊರಬಂದು ಓದಿನ ಕಡೆಗೆ ಹೆಚ್ಚಿನ ಗಮನಹರಿಸುವಂತಾಗಬೇಕು. ಇದಕ್ಕೆ ಶಿಕ್ಷಕರು, ಪೋಷಕರು, ಸಮಾಜದ ಸಹಕಾರ ಬೇಕು. ಪ್ರತಿಯೊಂದು ಮಗುವೂ ವಿದ್ಯೆ, ಸಂಸ್ಕಾರ ಮತ್ತು ವಿನಯವನ್ನು ವಿದ್ಯಾರ್ಥಿದಿಸೆಯಿಂದಲೇ ಮೈಗೂಡಿಸಿಕೊಳ್ಳಬೇಕು ಮತ್ತು ತಂದೆ–ತಾಯಿ ಮತ್ತು ಗುರು ಹಿರಿಯರಿಗೆ ಗೌರವಿಸುವುದು ಇಂದಿನ ಶಿಕ್ಷಣದ ಪ್ರಮುಖ ಆದ್ಯತೆ ಆಗಿರಬೇಕು ಎಂದರು. ಕೆಎಸ್‌ಓಯು ನಿವೃತ್ತ ಕುಲಸಚಿವೆ ಡಾ.ಭಾರತಿ ಶ್ರೀಧರ್ ರಾಜ್ ಅರಸ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಓದಿನ ಜೊತೆಗೆ, ಕೌಶಲ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಸೇರಿದಂತೆ ಅಧ್ಯಯನಕ್ಕೆ ಪೂರಕವಾದ ಕಲಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇದಕ್ಕೆ ಶಿಕ್ಷಕರು ಪ್ರೋತ್ಸಾಹದಾಯಕವಾಗಿರಬೇಕು ಎಂದರು. ಎಸ್‌ಜೆಇಟಿ ಜಂಟಿ ಕಾರ್ಯದರ್ಶಿ ಸರ್ದಾರ್ ಶ್ರೀಕಂಠ ರಾಜೇ ಅರಸ್, ಟ್ರಸ್ಟಿ ಪದ್ಮಶ್ರೀ ಅರಸ್, ಶಾಲೆಯ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಪ್ರಾಂಶುಪಾಲ ಶ್ರೀವತ್ಸ ಸೇರಿದಂತೆ ಶಾಲೆಯ ಬೋಧಕರು, ಬೋಧಕೇತರರು ಮತ್ತು ವಿದ್ಯಾರ್ಥಿಗಳು ವಾರ್ಷಿಕೋತ್ಸವದಲ್ಲಿ ಉಪಸ್ಥಿತರಿದ್ದರು. ಈ ವೇಳೆ ಪ್ರತಿಭಾವಂತ ವಿದ್ಯಾರ್ಥಿಗಳು, ಶಿಕ್ಷಕರನ್ನು ಗೌರವಿಸಲಾಯಿತು.



ಕಲಾ ಸೌರಭ–2 ಕಾರ್ಯಕ್ರಮವನ್ನು ಶನಿವಾರ ಉದ್ಘಾಟಿಸಲಾಯಿತು.

ಮೈಸೂರು ಮಿತ್ರ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಡಾ.ಭಾನುಪ್ರಕಾಶ್ ಶರ್ಮ ಸ್ಪರ್ಧೆ

ವಿಪ್ರ ಸಮುದಾಯದವರು ಬೆಂಬಲಿಸಲು ಡಿ.ಟಿ.ಪ್ರಕಾಶ್ ಮನವಿ


ಭಾನುಪ್ರಕಾಶ್ ಶರ್ಮ

ಮೈಸೂರು, ಫೆ.22(ಜಿಎ)–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಆಧ್ಯಾತ್ಮಿಕ ಚಿಂತಕ ಡಾ.ಭಾನುಪ್ರಕಾಶ್ ಶರ್ಮ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದ್ದು, ವಿಪ್ರ ಸಮುದಾಯದವರು ಅವರನ್ನು ಬೆಂಬಲಿಸುವಂತೆ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಿ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಅವರು ಮತ್ತೊಮ್ಮೆ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ಇದುವರೆಗೂ ಬೆಂಗಳೂರಿನ ಭಾಗದವರೇ ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದು, ಹೀಗಾಗಿ ಈ ಭಾಗದವರೂ ಆಯ್ಕೆ ಆಗಬೇಕೆಂಬ ನಿಟ್ಟಿನಲ್ಲಿ ಈಗಾಗಲೇ ವಿವಿಧ ಸಂಘ ಸಂಸ್ಥೆಗಳಲ್ಲಿ, ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಡಾ.ಭಾನುಪ್ರಕಾಶ್ ಶರ್ಮ ಅವರನ್ನು ಕಣಕ್ಕಿಳಿಸಲಾಗುತ್ತಿದೆ. ಇವರ ಸ್ಪರ್ಧೆಗೆ ವಿವಿಧ ವಿಪ್ರ ಸಂಘ ಸಂಸ್ಥೆಗಳು ಸಹ ಬೆಂಬಲ ಸೂಚಿಸಿವೆ. ಜೊತೆಗೆ, ಇವರು ಶೀಘ್ರದಲ್ಲೇ ಅಶೋಕ ಹಾರನಹಳ್ಳಿ ಅವರನ್ನು ಸಹ ಭೇಟಿ ಮಾಡಿ ಬೆಂಬಲ ಕೋರಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಭಾನುಪ್ರಕಾಶ್ ಶರ್ಮ, ಕೆ.ರಘುರಾಮ ವಾಜಪೇಯಿ ಉಪಸ್ಥಿತರಿದ್ದರು.

ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಾಗಲು ಸರ್ಕಾರವೇ ಕಾರಣ

'ಲವ್ ಜಿಹಾದ್' ಪುಸ್ತಕ ಬಿಡುಗಡೆ ವೇಳೆ ಪ್ರಮೋದ್ ಮುತಾಲಿಕ್ ಆರೋಪ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಶ್ರೀರಾಮಸೇನೆ ಸಂಘಟನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್, ಲವ್ ಜಿಹಾದ್ ಪುಸ್ತಕ ಬಿಡುಗಡೆಗೊಳಿಸಿದರು.

ಮೈಸೂರು,ಫೆ.22(ಜಿಎ)–ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಾಗಲು ಸರ್ಕಾರವೇ ಕಾರಣವಾಗಿದೆ ಎಂದು ಶ್ರೀರಾಮಸೇನೆ ಸಂಘಟನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆಪಾದಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀರಾಮಸೇನೆ ಹೊರತಂದಿರುವ 'ಲವ್ ಜಿಹಾದ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮಾತ್ರವಲ್ಲದೆ ದೇಶದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ ದಂತಾಗಿದೆ. ಅವರ ಮೇಲೆ ದೌರ್ಜನ್ಯ ಹೆಚ್ಚಲು ಸರ್ಕಾರ, ಪೊಲೀಸ್ ಇಲಾಖೆ ಕಾರಣವಾಗಿವೆ. ದೆಹಲಿಯ ನಿರ್ಭಯ ಪ್ರಕರಣದ ತೀರ್ಪು ಬರಲು ಸುಮಾರು 12 ವರ್ಷ ಬೇಕಾಯಿತು. ಈ ರೀತಿ ನ್ಯಾಯ ವಿಲೇವಾರಿ ವಿಳಂಬವಾಗುವುದರಿಂದಾಗಿಯೂ ದೌರ್ಜನ್ಯಗಳಿಗೆ ನಿಯಂತ್ರಣ ಇಲ್ಲದಂತಾಗಿದೆ ಆದ್ದರಿಂದ ನ್ಯಾಯಾಲಯಗಳು ಸಂತ್ರಸ್ತರ ಬೆಂಬಲಕ್ಕೆ ನಿಲ್ಲಬೇಕೆಂದು ಕೋರಿದರು. ಈ ನಿಟ್ಟಿನಲ್ಲಿ ತಮ್ಮ ಸಂಘಟನೆಯು ಪೋಷಕರು, ಕಾಲೇಜು ವಿದ್ಯಾರ್ಥಿನಿಯರು, ಮಹಿಳೆಯರಲ್ಲಿ ಜಾಗೃತಿ, ಧೈರ್ಯ ಮೂಡಿಸಲೆಂದು ಈ ಪುಸ್ತಕದ ಲಕ್ಷ ಪ್ರತಿ ಮುದ್ರಿಸಿ ಎಲ್ಲೆಡೆ ವಿತರಿಸಲಿದೆ. ಜೊತೆಗೆ ತ್ರಿಶೂಲ ದೀಕ್ಷೆ ಸಹಾ ನೀಡಲಾಗಿದೆ. ಈ ರೀತಿಯ ನೂರು ಕಾರ್ಯಕ್ರಮ ನಡೆಸಲು ಉದ್ದೇಶಿಸಿದ್ದು, ಈಗಾಗಲೇ 18 ಕಡೆ ನಡೆದಿದೆ ಎಂದರು. ಗೋಷ್ಠಿಯಲ್ಲಿ ಭ್ರಮರಾಂಬ ಮಹೇಶ್ವರಿ, ಸುಂದರೇಶ್, ವೆಂಕಟನಾರಾಯಣರಾವ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಸರ್ಕಾರ ತಮ್ಮ ವಿರುದ್ಧದ ಕೇಸ್ ಹಿಂಪಡೆಯುವ ಭರವಸೆಯಲ್ಲಿ ಗಲಾಟೆ

ಮೈಸೂರು, ಫೆ.22(ಬಿಎಲ್‌ಯು)– ದೊಂಬಿ, ಕಲ್ಲು ತೂರಾಟ ಸೇರಿದಂತೆ ಯಾವುದೇ ರೀತಿಯ ಕಾನೂನುಬಾಹಿರ ಚಟುವಟಿಕೆ ನಡೆಸಿದರೂ ಕಾಂಗ್ರೆಸ್ ಸರ್ಕಾರ ತಮ್ಮ ವಿರುದ್ಧ ದಾಖಲಾಗಿರುವ ಕೇಸ್ ವಾಪಸು ಪಡೆಯುತ್ತದೆ ಎಂಬ ಲೆಕ್ಕಾಚಾರದಿಂದ ಮುಸ್ಲಿಂರು ರಾಜಾರೋಷವಾಗಿ ಗಲಾಟೆ ಮಾಡುತ್ತಿದ್ದಾರೆ ಎಂದು ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಆರೋಪಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಸ್ಲಿಂರು ಕಾನೂನು ವಿರೋಧಿ ಕೃತ್ಯ ಎಸಗಿದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಪೊಲೀಸರು ಧೈರ್ಯ ಮಾಡುವುದಿಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರದ ಬೆಂಬಲವಿರುವ ಕಾರಣ ಅವರು ಪೊಲೀಸರಿಗೆ ಹೆದರುವುದಿಲ್ಲ ಎಂದು ದೂರಿದರು.

ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಮಾಡಲು ಪ್ರಚೋದನೆ ನೀಡಿದ ಮೌಲ್ವಿಯನ್ನು ಗಡಿಪಾರು ಮಾಡುವ ಬದಲು, ಯಾವುದೇ ತಪ್ಪು ಮಾಡದ ಸತೀಶ್‌ನನ್ನು ಗಡಿಪಾರು

ಪ್ರಮೋದ್ ಮುತಾಲಿಕ್ ಆರೋಪ

ಮಾಡಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ ಎಂದು ಪ್ರಮೋದ್ ಮುತಾಲಿಕ್ ಆಪಾದಿಸಿದರು.

ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನದಲ್ಲಿ ಮೂರು ಮಂದಿ ಹೋಗುತ್ತಿದ್ದರೂ ಪೊಲೀಸರು ಅವರನ್ನು ಹಿಡಿಯುವುದಿಲ್ಲ. ಹಿಂದೂಗಳು ಲೈಸನ್ಸ್ ಪಡೆದು, ವಿಮೆ ಹಣ ಪಾವತಿಸಿ, ಹೆಲ್ಮೆಟ್ ಹಾಕಿದ್ದರೂ ಪೊಲೀಸರು ಹಿಡಿಯುತ್ತಾರೆ. ಇದರಿಂದ ಹಿಂದೂ ಧರ್ಮಿಯರಿಗೆ ಯಾವುದೇ ರಕ್ಷಣೆ ಇಲ್ಲ. ಇದಕ್ಕೆಲ್ಲಾ ಕಾಂಗ್ರೆಸ್ ಸರ್ಕಾರ ಕಾರಣ ಎಂದರು.

ಬೆಂಗಳೂರಿನ ಡಿಜೆ ಹಳ್ಳಿ, ಕೆಜಿ ಹಳ್ಳಿ, ಶಿವಮೊಗ್ಗ, ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದಂತೆ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ್ದಾರೆ. ಈ ಮೂಲಕ ಭಯದ ವಾತಾವರಣ ನಿರ್ಮಾಣ ಮಾಡಿ ಅಲ್ಲಿರುವ ಹಿಂದೂಗಳನ್ನು ಓಡಿಸಬೇಕೆಂಬ ಉದ್ದೇಶದಿಂದ ಇಂತಹ ಕೃತ್ಯ ಎಸಗುತ್ತಿದ್ದಾರೆ ಎಂದು ಪ್ರಮೋದ್ ಮುತಾಲಿಕ್ ಆರೋಪಿಸಿದರು.

ಮಾ.1ರಿಂದ 20ರವರೆಗೆ ದ್ವಿತೀಯ ಪಿಯು ಪರೀಕ್ಷೆ

ಸುಗಮ ರೀತಿ ಪರೀಕ್ಷೆಗೆ ಅಪರ ಜಿಲ್ಲಾಧಿಕಾರಿ ಸೂಚನೆ


ಡಾ.ಶಿವರಾಜು

ಮೈಸೂರು,ಫೆ.22– ಮಾ.1ರಿಂದ 20ರವರೆಗೆ ಜಿಲ್ಲೆಯಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಸುಸೂತ್ರ ಹಾಗೂ ವ್ಯವಸ್ಥಿತವಾಗಿ ಜರುಗಿಸುವಂತೆ ನೋಡಿಕೊಳ್ಳಲು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಡಿಸಿ ಕಚೇರಿಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ 50 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಮೈಸೂರು ನಗರದಲ್ಲಿ 27, ಗ್ರಾಮಾಂತರ ವ್ಯಾಪ್ತಿಯಲ್ಲಿ 23 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ ಎಂದರು.


ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ತಲುಪಿಸಲು ಮಾರ್ಗಾಧಿಕಾರಿಗಳ ನೇಮಕ ಮಾಡಲಾಗಿದ್ದು, ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡಲು ಚೆಸ್ಕಾಂನವರಿಗೆ ಕ್ರಮ ವಹಿಸಲು ತಿಳಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಸಲಾಗಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ ಸ್ವಚ್ಛತೆಯನ್ನು ಕಾಪಾಡಲು ಸಂಬಂಧಪಟ್ಟ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನವನ್ನು ನೀಡಿದರು.

ಮೈಸೂರಿನಲ್ಲಿ 27, ನಂಜನಗೂಡಿನಲ್ಲಿ 5, ಟಿ.ನರಸೀಪುರದಲ್ಲಿ 4, ಹುಣಸೂರಿನಲ್ಲಿ 4, ಕೆ.ಆರ್.ನಗರದಲ್ಲಿ 2, ಸಾಲಿಗ್ರಾಮದಲ್ಲಿ 3, ಎಚ್.ಡಿ.ಕೋಟೆಯಲ್ಲಿ 2 ಹಾಗೂ ಪಿರಿಯಾಪಟ್ಟಣದಲ್ಲಿ 4 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ ಎಂದರು. ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಅಭಿನಂದನೆ...


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನೂತನ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ರಾಜಕೀಯ ರವಿಕುಮಾರ್, ಎನ್.ಯೋಗಾನಂದ, ಆರ್.ಸೋಮಣ್ಣ, ಪ್ರಮೀಳಾ ಲೋಕೇಶ್ ಅವರು ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಹಿರಿಯರಾದ ಕೆ.ಉಮಾಶಂಕರ್, ಕುಂಬಾರಕೊಪ್ಪಲು ಕೆ.ವಿ.ಚೇತನ್‌ಕುಮಾರ್, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ವಿ.ಮಧು ಹೇಮಾ ಇನ್ನಿತರರಿದ್ದರು.

ಜೆ.ಯೋಗೀಶ್‌ಗೆ ಅಭಿನಂದನೆ...


ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾದ ಜೆ.ಯೋಗೀಶ್ ಅವರನ್ನು ಚಾಮರಾಜ ಕ್ಷೇತ್ರದ ಶಾಸಕರಾದ ಕೆ.ಹರೀಶ್‌ಗೌಡರ ಅಭಿಮಾನಿ ಬಳಗದ ವತಿಯಿಂದ ಕನ್ನೆಗೌಡನ ಕೊಪ್ಪಲು ಸ್ನೇಹಿತರು ಸನ್ಮಾನಿಸಿದರು. ಚಿತ್ರದಲ್ಲಿ ಕೆ.ವಿ.ಸತೀಶ್, ಮಹೇಶ್, ಪ್ರದೀಪ್‌ಕುಮಾರ್, ನಂಜುಂಡಸ್ವಾಮಿ (ದೀಪು), ಗಿರೀಶ್ ಹಾಗೂ ಸತೀಶ್ ಹಾಜರಿದ್ದರು

ನಾಳೆಯಿಂದ ಮಧುಮೇಹ ತಪಾಸಣಾ ಶಿಬಿರ

ಮೈಸೂರು, ಫೆ.22– ಮೈಸೂರಿನ ಸುಯೋಗ್ ಆಸ್ಪತ್ರೆ ವತಿಯಿಂದ ಫೆ.24ರಿಂದ ಮಾ.1ರವರೆಗೆ (ಸರ್ಕಾರಿ ರಜಾ ದಿನವನ್ನು ಹೊರತುಪಡಿಸಿ) ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಸಕ್ಕರೆ ಕಾಯಿಲೆ ತಜ್ಞ ಡಾ.ಟಿ.ಎಂ.ಅಭಿಷೇಕ್ ನೇತೃತ್ವದಲ್ಲಿ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಪದೇ ಪದೆ ಮೂತ್ರ ವಿಸರ್ಜನೆ, ಅತಿಯಾದ ಬಾಯಾರಿಕೆ, ಹಸಿವಾಗುವಿಕೆ, ಸುಸ್ತಾಗುವಿಕೆ, ರಕ್ತದೊತ್ತಡ, ತಲೆಸುತ್ತು, ಕಣ್ಣು ಮಂಜಾಗುವಿಕೆ, ದೇಹದ ತೂಕ ಏರಿಕೆ, ಇಳಿಯುವಿಕೆ ಮುಂತಾದ ಲಕ್ಷಣಗಳಿರುವವರಿಗೆ ತಪಾಸಣೆ ಹಾಗೂ ಉಚಿತ ಸಮಾಲೋಚನೆ ಇರುತ್ತದೆ. ಆಸಕ್ತರು 0821–2566966, 9986399862 ಸಂಪರ್ಕಿಸಿ, ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಅನ್ಯ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪ; ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್



ಮೈಸೂರು, ಫೆ.22(ಬಿಎಲ್‌ಯು)–ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪದಡಿ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಮೈಸೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯು ಉದಯಗಿರಿ ಪೊಲೀಸ್ ಠಾಣೆಗೆ ದೂರು ನೀಡಿದೆ. ಮುಸ್ಲಿಂ ಸಮುದಾಯದವರು ಈ ದೇಶದ ಪ್ರಜೆಗಳೇ ಅಲ್ಲ. ಮುಸ್ಲಿಂರು ಜನಸಂಖ್ಯೆ ಹೆಚ್ಚು ಮಾಡಿಕೊಳ್ಳುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆಪಾದಿಸಿದ್ದಾರೆ.

ಈ ಮೂಲಕ ಹಿಂದೂ ಹಾಗೂ ಮುಸ್ಲಿಂ ಸಮುದಾಯದ ನಡುವೆ ಕೋಮು ಘರ್ಷಣೆ ಉಂಟು ಮಾಡಲು ಪ್ರಚೋದನೆ ನೀಡಿದ್ದಾರೆ. ಮುಸ್ಲಿಂ ಸಮುದಾಯವನ್ನು ನಿಂದಿಸಿ ಅಶಾಂತಿ ಉಂಟು ಮಾಡುತ್ತಿರುವ ಪ್ರತಾಪ್ ಸಿಂಹ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸರಿಗೆ ದೂರು ಸಲ್ಲಿಸಿದ್ದರು. ಈ ಸಂಬಂಧ ಉದಯಗಿರಿ ಪೊಲೀಸರು ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ನಾಳೆ 22 ಸಾವಿರ ಕೋಟಿ ರೂ. ಪಿಎಂ ಕಿಸಾನ್ ಹಣ ಜಮೆ

ನವದೆಹಲಿ, ಫೆ.22– ಪಿಎಂ ಕಿಸಾನ್ ಯೋಜನೆಯ 19ನೇ ಕಂತಿನ ಹಣವು ಸೋಮವಾರ ಬಿಡುಗಡೆ ಆಗಲಿದೆ. 9.8 ಕೋಟಿ ರೈತರ ಖಾತೆಗಳಿಗೆ 22,000 ಕೋಟಿ ರೂ. ಜಮೆಯಾಗಲಿದೆ. ಬಿಹಾರದ ಭಾಗಲ್ಪುರದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪಿಎಂ ಕಿಸಾನ್ ಹಣವನ್ನು ಪ್ರಧಾನಿ ಮೋದಿ ಬಿಡುಗಡೆ ಮಾಡಲಿದ್ದಾರೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ತಿಳಿಸಿದರು.

ಪಿಎಂ ಕಿಸಾನ್ ಯೋಜನೆಯಡಿ ಪ್ರತಿಯೊಬ್ಬ ಫಲಾನುಭವಿಗೆ ಪ್ರತಿ 4 ತಿಂಗಳಿಗೊಮ್ಮೆ 2 ಸಾವಿರ ರೂ.ನಂತೆ ವಾರ್ಷಿಕ 6 ಸಾವಿರ ರೂ.ಗಳನ್ನು ನೀಡಲಾಗುತ್ತದೆ. 18ನೇ ಕಂತು ನೀಡುವಾಗ ಫಲಾನುಭವಿಗಳ ಸಂಖ್ಯೆ 9.6 ಕೋಟಿ ಇತ್ತು. ಈವರೆಗೆ ಈ ಯೋಜನೆಯಡಿ 3.46 ಲಕ್ಷ ಕೋಟಿ ರೂ. ವಿತರಿಸಲಾಗಿದೆ. 19ನೇ ಕಂತು ನೀಡಿದ ಬಳಿಕ ಈ ಮೊತ್ತ 3.68 ಲಕ್ಷ ಕೋಟಿ ರೂ. ಆಗಲಿದೆ ಎಂದರು.

2019ರ ಫೆಬ್ರವರಿಯಲ್ಲಿ ಪ್ರಾರಂಭಿಸಲಾದ ಪಿಎಂ ಕಿಸಾನ್ ಯೋಜನೆ ಜಗತ್ತಿನ ಅತಿ ದೊಡ್ಡ ನೇರ ಲಾಭ ವರ್ಗಾವಣೆ ಯೋಜನೆಯಾಗಿದೆ ಎಂದರು.

ಕಾಲೇಜುಗಳಲ್ಲಿ ಸಹಕಾರ ಐಚ್ಛಿಕ ವಿಷಯಕ್ಕಾಗಿ ಪರಿಚಯಿಸಲು ಆಗ್ರಹ

ಸಹಕಾರಿ ಕ್ಷೇತ್ರದ ಹುದ್ದೆಗಳಿಗೆ ಸಹಕಾರಿ ಡಿಪ್ಲೊಮಾ ಮಾಡಿದವರನ್ನೇ ಪರಿಗಣಿಸಲು ಒತ್ತಾಯ

ಮೈಸೂರು,ಫೆ.22(ಎಂಟಿವೈ)– ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಕಾರ ವಿಷಯವನ್ನು ಐಚ್ಛಿಕ ವಿಷಯವಾಗಿ ಪರಿಚಯಿಸುವುದರೊಂದಿಗೆ ಸಹಕಾರಿ ಕ್ಷೇತ್ರದ ನಾನಾ ಹುದ್ದೆಗಳಿಗೆ ಸಹಕಾರ ಡಿಪ್ಲೊಮಾ ಮಾಡಿರುವವರನ್ನೇ ಪರಿಗಣಿಸುವಂತೆ ಮೈಸೂರು ವಿಶ್ವವಿದ್ಯಾನಿಲಯ ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗದ ವಿದ್ಯಾರ್ಥಿಗಳು ಹಾಗೂ ಸಂಶೋಧಕರ ಸಂಘದ ಅಧ್ಯಕ್ಷ ಮಹೇಶ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಹಕಾರ ಕ್ಷೇತ್ರ ರಾಜಕಾರಣಿಗಳ ಹಿಡಿತದಲ್ಲಿದ್ದು, ಅಲ್ಲಿನ ಎಲ್ಲಾ ಹುದ್ದೆಗಳು ರಾಜಕಾರಣಿಗಳ ಹಿಂಬಾಲಕರ ಪಾಲಾಗುತ್ತಿವೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಸಹಕಾರಿ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಲು ಸಹಕಾರ ಡಿಪ್ಲೊಮಾ ಕೋರ್ಸ್ ಮಾಡಿದವರನ್ನೇ ವಿವಿಧ ಹುದ್ದೆಗಳಿಗೆ ನೇಮಿಸಬೇಕು. ಸಹಕಾರ ಕ್ಷೇತ್ರದ ನೇಮಕಕ್ಕೆ ಸಂಬಂಧಿಸಿದಂತೆ ಸಹಕಾರ ವಿಷಯದಲ್ಲೇ ಪದವಿ, ಸ್ನಾತಕೋತ್ತರ ಪದವಿ ಪಡೆದ ಯುವಜನರಿಗೆ ಶೇ.10ರಷ್ಟು ಉದ್ಯೋಗ ಮೀಸಲಿಡಬೇಕು. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಹಕಾರ ವಿಷಯ ಬೋಧನೆ ವಿಷಯವಾಗಿ ಪರಿಗಣಿಸಿ ತಮ್ಮದೇ ಕ್ಷೇತ್ರದಲ್ಲಿ ಉದ್ಯೋಗ ಸಿಗುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಸಹಕಾರ ವಿಷಯ ಅಧ್ಯಯನ ಮಾಡಿದ್ದರೂ ಇವರಿಗೆ ಉದ್ಯೋಗಾವಕಾಶ ಸಿಗುತ್ತಿಲ್ಲ. ಹೀಗಾಗಿ ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಕಾರ ವಿಷಯ ಬೋಧನಾ, ಐಚ್ಛಿಕ ವಿಷಯವಾಗಿ ಪರಿಚಯಿಸಬೇಕು. ಸಹಕಾರಿ ಸಂಘ, ಸಂಸ್ಥೆಗಳು, ಬ್ಯಾಂಕಿಂಗ್ ವಲಯದಲ್ಲಿ ಸಹಕಾರ ಡಿಪ್ಲೊಮಾ ಕೋರ್ಸ್ ಮಾತ್ರ ಪರಿಗಣಿಸದೇ ಸಹಕಾರ ವಿಷಯದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಪಿಎಚ್.ಡಿ ಪಡೆದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಬೇಕು. ಸರ್ಕಾರ ನಿರ್ಲಕ್ಷಿಸಿದಲ್ಲಿ ಉಗ್ರ ಹೋರಾಟ, ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು. ಗೋಷ್ಠಿಯಲ್ಲಿ ಸಂಶೋಧಕರಾದ ಡಾ.ಚಂದ್ರಶೇಖರ್, ಡಾ.ಶಿವಕುಮಾರ್, ಸುಭಾಷ್ ಇದ್ದರು.

ಅಂಬಿಗರ ಚೌಡಯ್ಯ ಜಯಂತಿ ಅಂಗವಾಗಿ ಚಿತ್ರಕಲಾ ಸ್ಪರ್ಧೆ



ಮೈಸೂರು,ಫೆ.22–ಮೈಸೂರಿನ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಅಂಗವಾಗಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳು 4ರಿಂದ 8ನೇ ತರಗತಿ ಓದುತ್ತಿರಬೇಕು. ಚಿತ್ರಗಳನ್ನು ಫೆ.28ರೊಳಗೆ ಕಳುಹಿಸಲು ಕೋರಲಾಗಿದೆ. ಚಿತ್ರಗಳನ್ನು ಕಳುಹಿಸಬೇಕಾದ ವಾಟ್ಸಾಪ್ ನಂ.9448980010. ಹೆಚ್ಚಿನ ಮಾಹಿತಿಗೆ ಮೊ. 9448980010 ಸಂಪರ್ಕಿಸಬಹುದು.

ಎಲ್ಲಾ ಪ್ರಾಕಾರದ ನೃತ್ಯಗಳು ಒಂದೇ ಸೂರಿನಡಿ ಪ್ರದರ್ಶನಕ್ಕೆ ವ್ಯವಸ್ಥೆ ಆಗಬೇಕು

ಜನಪದ ಗೀತೆ, ಭಜನಾ ಸ್ಪರ್ಧೆ ವಿಜೇತರಿಗೆ ಅಭಿನಂದನಾ ಸಮಾರಂಭದಲ್ಲಿ ಕನ್ನಡ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ ಅಭಿಮತ

ಮೈಸೂರು, ಫೆ.22(ಎಸ್‌ಪಿಎನ್)– ದೇಶಿಯ ಜಾನಪದ ಕಲೆ, ಸಾಹಿತ್ಯ ಮತ್ತು ವಿವಿಧ ಪ್ರಾಕಾರದ ನೃತ್ಯಗಳು ಒಂದೇ ಸೂರಿನಡಿ ಪ್ರದರ್ಶನವಾಗಬೇಕು. ಇದಕ್ಕೆ ಸಂಘ–ಸಂಸ್ಥೆಗಳು, ಸರ್ಕಾರದ ಜಾನಪದ ಅಕಾಡೆಮಿಗಳು ಶ್ರಮಿಸಬೇಕು ಎಂದು ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜು ಕನ್ನಡ ಪ್ರಾಧ್ಯಾಪಕ, ಹಿರಿಯ ವಿಮರ್ಶಕ ಪ್ರೊ.ಮೈಸೂರು ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಮಹಾರತ್ನ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ರಾಜ್ಯಮಟ್ಟದ ಸಮೂಹದ ಜನಪದ ಗೀತೆ ಮತ್ತು ಭಜನಾ ಸ್ಪರ್ಧೆಯಲ್ಲಿ ವಿಜೇತರಾದವರನ್ನು ಸನ್ಮಾನಿಸಿ ಮಾತನಾಡಿದರು.

ಹಳೆ ಮೈಸೂರು ಭಾಗ ಸೇರಿದಂತೆ ನಾಡಿನ ವಿವಿಧ ಪ್ರಾಕಾರಗಳ ಜಾನಪದ ಕಲೆಗಳು ವಿವಿಧ ವೇದಿಕೆಯಲ್ಲಿ ಪ್ರತ್ಯೇಕವಾಗಿ ಪ್ರದರ್ಶನಗೊಳ್ಳುತ್ತಿವೆ. ಇದನ್ನು ಗುರುತಿಸುವ ಕೆಲಸವಾಗಬೇಕು. ಸರ್ಕಾರದ ಅಕಾಡೆಮಿಗಳು, ಸಂಘ–ಸಂಸ್ಥೆಗಳು ಈ ಕೆಲಸದಲ್ಲಿ ತೊಡಗಿಕೊಂಡರೆ, ನಮ್ಮ ದೇಶಿಯ ಕಲೆಗಳ ಉಳಿಸಲು ಸಾಧ್ಯವಿದೆ. ಈ ಕೆಲಸದಲ್ಲಿ ಜಾನಪದ ಗಾಯಕ ಮಹಾಲಿಂಗ ಎಂ.ಲಕ್ಷ್ಮೀಪುರ ನೇತೃತ್ವದ ಮಹಾರತ್ನ ಟ್ರಸ್ಟ್‌ನ ಪದಾಧಿಕಾರಿಗಳು ಮುಂಚೂಣಿಯಲ್ಲಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಮಹಾರತ್ನ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಜಾನಪದ ಕ್ಷೇತ್ರದ ನಾಲ್ವರು ಸಾಧಕರಿಗೆ ಜಾನಪದ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.


ಯುವ ಸಮೂಹ ಜಾನಪದ ಕಲೆಗಳನ್ನು ಮೈಗೂಡಿಸಿಕೊಳ್ಳುವುದರಿಂದ ತಮ್ಮ ವ್ಯಕ್ತಿತ್ವದಲ್ಲಿ ಸುಧಾರಣೆ, ಸಾಮಾಜಿಕ ಸಮತೋಲನಕ್ಕೆ ಸಾಕ್ಷಿಯಾಗಲಿದೆ. ಹಾಗಾಗಿ ಜಾನಪದ ಕಲೆ ಸೇರಿದಂತೆ ಯಾವುದೇ ಕಲೆಗಳಲ್ಲಿ ಯುವ ಸಮೂಹ ತೊಡಗಿಸಿಕೊಂಡರೂ ಮುಂದಿನ ಜೀವನ ಕಟ್ಟಿಕೊಳ್ಳಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಜಾನಪದ ರತ್ನ ಪ್ರಶಸ್ತಿ ವಿತರಣೆ: ರಾಜ್ಯಮಟ್ಟದ ಜನಪದ ಗೀತೆ ಸ್ಪರ್ಧೆಯಲ್ಲಿ ವಿಜೇತರಾದ ಮೈಸೂರು ಗಹನ ಮತ್ತು ತಂಡ ಪ್ರಥಮ, ಗುಂಡ್ಲುಪೇಟೆಯ ಗುರುಮಲ್ಲೇಶ್ ಭಜನಾ ತಂಡ ದ್ವಿತೀಯ, ನಾದಾಮೃತ ಟ್ರಸ್ಟ್‌ನ ಕಲಾವಿದರು ತೃತೀಯ ಬಹುಮಾನ ಪಡೆದಿದ್ದಾರೆ. ಭಜನಾ ಸ್ಪರ್ಧೆಯಲ್ಲಿ ಗುರುಮಲ್ಲೇಶ್ ನೇತೃತ್ವದ ತಂಡಕ್ಕೆ ಪ್ರಥಮ, ಶರಣೆ ಗಂಗಾಂಬಿಕೆ ಮಹಿಳಾ ಭಜನಾ ಮಂಡಳಿಗೆ ದ್ವಿತೀಯ, ವಿಜಯ ವಿಠಲಗಾನ ವೃಂದಕ್ಕೆ ತೃತೀಯ ಹಾಗೂ ರಾಮಧಾನ ಭಜನಾ ಮಂಡಳಿಗೆ ಸಮಾಧಾನಕರ ಬಹುಮಾನ ನೀಡಿ, ಗೌರವಿಸಲಾಯಿತು.

ಈ ವೇಳೆ ಜಾನಪದ ವಿದ್ವಾಂಸ ಡಾ.ಮೈಸೂರು ಉಮೇಶ್, ಜಾನಪದ ಗಾಯಕ ಕೆ.ಕೆ.ದೇವಾನಂದ ವರಪ್ರಸಾದ್, ಕನ್ನಡ ಜನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಹೆಚ್.ಪ್ರಕಾಶ್, ಜಾನಪದ ಕಲಾವಿದ ಜಿ.ಆರ್.ಶ್ರೀವತ್ಸಗೆ ಜಾನಪದ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕ್ರೀಡಾಪಟುಗಳಾದ ಭಾರತಿ ವಿ.ಶಿರೂರ್, ವೆಂಕಟರಮಣ ಶಿರೂರ್, ಜುಪಿಟರ್ ಸ್ಕೂಟರ್‌ನಲ್ಲಿ ಹಾಸನದ ಹೊಳೆನರಸೀಪುರದಿಂದ ಅಯೋಧ್ಯೆ ಹಾಗೂ ದೆಹಲಿವರೆಗೆ ಏಕಾಂಗಿಯಾಗಿ ಚಾಲನೆ ಮಾಡಿದ ವಿಜಯಕುಮಾರಿ ಅವರನ್ನು ಸನ್ಮಾನಿಸಲಾಯಿತು. ರಂಗ ಕಲಾವಿದ ಪ್ರಕಾಶ್ ಶಣೈ, ಪುರುಷೋತ್ತಮ್ ಕಿರಗಸೂರು, ಸಂಗೀತ ಶಿಕ್ಷಕಿ ರಶ್ಮಿ ಚಿಕ್ಕಮಗಳೂರು, ಎಂ.ನಾಗರತ್ನ, ರೂಪ, ಪ್ರಶಾಂತ್ ತಾತಾಚಾರ್, ನೀಲಾವತಿ ಬೋರೇಗೌಡ ಇತರರಿದ್ದರು.

ದೇಶ - ವಿದೇಶ

ಚೀನಾದಲ್ಲಿ ಬಾವಲಿ ಮೂಲಕ ಮನುಷ್ಯರಿಗೆ ತಗುಲುವ ವೈರಾಣು ಪತ್ತೆ



ಬೀಜಿಂಗ್: ಕೋವಿಡ್ ಬಳಿಕ ಮತ್ತೊಂದು ಮಹಾಮಾರಿ ಆತಂಕ ಶುರುವಾಗಿದ್ದು, ಕೋವಿಡ್ ವೈರಸ್ ಪತ್ತೆಯಾಗಿದ್ದ ಅದೇ ಚೀನಾದಲ್ಲಿ ಇದೀಗ ಬಾವಲಿ ಮೂಲಕ ಮನುಷ್ಯರಿಗೆ ಹರಡುವ HKU5-CoV-2 ವೈರಾಣು ಪತ್ತೆಯಾಗಿದೆ.

ಈ ಬಗ್ಗೆ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದ್ದು, HKU5-CoV-2 ಹೊಸ ವೈರಸ್ ಅನ್ನು 'ಬ್ಯಾಟ್ ವುಮನ್' ಎಂದು ಕರೆಯಲ್ಪಡುವ ಪ್ರಸಿದ್ಧ ವಿಜ್ಞಾನಿ ಶಿ ಝೆಂಗ್ಲಿ ನೇತೃತ್ವದ ವೈರಾಲಜಿಸ್ಟ್‌ಗಳ ತಂಡವು ಕಂಡುಹಿಡಿದಿದೆ.

ಈ ಹೊಸ ವೈರಸ್ SARS CoV-2ಗೆ ಹೋಲುತ್ತದೆ ಎಂದು ಚೀನಾದ ಸಂಶೋಧಕರು ಕಂಡುಕೊಂಡಿದ್ದು, ಇದು ಕೂಡ ಕೋವಿಡ್ ಸಾಂಕ್ರಾಮಿಕ ರೋಗಕ್ಕೆ ಕಾರಣವಾದ ವೈರಸ್ ಎನ್ನಲಾಗಿದೆ. ಇದು ಕೋವಿಡ್ ಮಾಡಿದಂತೆಯೇ ACE2 ಎಂಬ ಮಾನವ ಜೀವಕೋಶಗಳಿಗೆ ನುಸುಳಬಹುದು ಎಂದು ವರದಿಯಲ್ಲಿ ಉಲ್ಲೇಖಿಸಿದೆ. ಹೊಸ ವೈರಸ್ ಪತ್ತೆ ಬೆನ್ನಲ್ಲೇ ಇದೀಗ ಈ ಹಿಂದೆ ವುಹಾನ್ ಇನ್‌ಸ್ಟಿಟ್ಯೂಟ್‌ನಲ್ಲಿ COVID-19 ಪ್ರಯೋಗಾಲಯದ ಸೋರಿಕೆಯಲ್ಲಿ ಇದ್ದ ವೈರಸ್ ಇದೇನಾ ಎಂಬ ಪ್ರಶ್ನೆ ಕೂಡ ಉದ್ಭವವಾಗಿದೆ. ಅಂತೆಯೇ ಈ ವೈರಸ್ ಇದೀಗ ಸೋರಿಕೆ ಸಿದ್ಧಾಂತದ ಕೇಂದ್ರಬಿಂದುವಾಗಿದೆ.

ಎಫ್‌ಡಿಐ ಉಲ್ಲಂಘನೆ: ಬಿಬಿಸಿ ಇಂಡಿಯಾಗೆ 3.44 ಕೋಟಿ ರೂ. ದಂಡ ವಿಧಿಸಿದ ಇಡಿ



ನವದೆಹಲಿ: ವಿದೇಶಿ ನೇರ ಹೂಡಿಕೆ (FDI) ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯ ಬಿಬಿಸಿ ವರ್ಲ್ಡ್ ಸರ್ವಿಸ್ ಇಂಡಿಯಾಗೆ 3.44 ಕೋಟಿ ರೂ.ಗೂ ಅಧಿಕ ದಂಡ ವಿಧಿಸಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಅಡಿಯಲ್ಲಿ ತೀರ್ಪು ನೀಡಿದ ನಂತರ ಬ್ರಿಟಿಷ್ ಪ್ರಸಾರಕ ಸಂಸ್ಥೆ ಬಿಬಿಸಿ ವಿರುದ್ಧ ಆದೇಶ ಹೊರಡಿಸಿದ್ದರಿಂದ ಫೆಡರಲ್ ತನಿಖಾ ಸಂಸ್ಥೆಯು ತನ್ನ ಮೂವರು ನಿರ್ದೇಶಕರಿಗೆ ತಲಾ 1.14 ಕೋಟಿ ರೂಪಾಯಿಗೂ ಅಧಿಕ ದಂಡ ವಿಧಿಸಿದೆ. ಆಗಸ್ಟ್ 4, 2023 ರಂದು ಬಿಬಿಸಿ ಡಬ್ಲ್ಯೂಎಸ್ ಇಂಡಿಯಾ, ಅದರ ಮೂವರು ನಿರ್ದೇಶಕರು ಮತ್ತು ಹಣಕಾಸು ಮುಖ್ಯಸ್ಥರಿಗೆ ಈ ಕಾನೂನಿನಡಿಯಲ್ಲಿ ವಿವಿಧ ಉಲ್ಲಂಘನೆಗಳಿಗಾಗಿ ಶೋ–ಕಾಸ್ ನೋಟಿಸ್ ನೀಡಿದ ನಂತರ ತೀರ್ಪು ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಯಿತು. ಆದಾಯ ತೆರಿಗೆ ಇಲಾಖೆಯು ಫೆಬ್ರವರಿ 2023 ರಲ್ಲಿ ದೆಹಲಿಯಲ್ಲಿರುವ ಬಿಬಿಸಿ ಇಂಡಿಯಾ ಸುದ್ದಿ ಸಂಸ್ಥೆಯ ಕಚೇರಿಯಲ್ಲಿ ಸಮೀಕ್ಷೆ ಕಾರ್ಯಾಚರಣೆಯನ್ನು ನಡೆಸಿದ ಕೆಲವು ತಿಂಗಳ ನಂತರ ಜಾರಿ ನಿರ್ದೇಶನಾಲಯ ಬಿಬಿಸಿ ವಿರುದ್ಧ ಫೆಮಾ ತನಿಖೆಯನ್ನು ಪ್ರಾರಂಭಿಸಿತ್ತು.

ಪ್ಯಾಸೆಂಜರ್ ರೈಲು ಡಿಕ್ಕಿ: ಆರು ಕಾಡಾನೆ ಸಾವು



ಕೊಲಂಬೊ: ವನ್ಯಜೀವಿ ಅಭಯಾರಣ್ಯದ ಬಳಿ ಹಳಿ ದಾಟುತ್ತಿದ್ದ ಕಾಡಾನೆಗಳ ಹಿಂಡಿಗೆ ಪ್ಯಾಸೆಂಜರ್ ರೈಲೊಂದು ಡಿಕ್ಕಿ ಹೊಡೆದ ಪರಿಣಾಮ ಆರು ಕಾಡಾನೆಗಳು ಸಾವನ್ನಪ್ಪಿರುವ ಘಟನೆ ಶ್ರೀಲಂಕಾದಲ್ಲಿ ಸಂಭವಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ರಾಜಧಾನಿ ಕೊಲಂಬೊದಿಂದ ಸುಮಾರು 200 ಕಿಲೋಮೀಟರ್ ದೂರದಲ್ಲಿರುವ ಮಿನ್ನೇರಿಯಾ ಬಳಿ ಇರುವ ವನ್ಯಜೀವಿ ಅಭಯಾರಣ್ಯದಿಂದ ಹೊರಬಂದ ಆನೆಗಳ ಹಿಂಡಿಗೆ ರೈಲು ಡಿಕ್ಕಿ ಹೊಡೆದಿದೆ. ಈ ದುರ್ಘಟನೆಯಲ್ಲಿ ನಾಲ್ಕು ಆನೆ ಮರಿಗಳು ಸೇರಿದಂತೆ ಒಟ್ಟು ಆರು ಆನೆಗಳು ಸ್ಥಳದಲ್ಲೇ ಮೃತಪಟ್ಟಿವೆ ಎಂದು ಹೇಳಲಾಗಿದೆ. ಅಧಿಕಾರಿಗಳ ಮಾಹಿತಿ ಪ್ರಕಾರ ಈ ಪ್ರದೇಶವು ಉದ್ಯಾನವನ ಮತ್ತು ವನ್ಯಜೀವಿಗಳಿಗೆ ಹೆಸರುವಾಸಿಯಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಾಡು ಪ್ರಾಣಿಗಳು ಈ ಪ್ರದೇಶದಲ್ಲಿ ಅಡ್ಡಾಡುತ್ತಿರುತ್ತವೆ ಎಂದು ಹೇಳಲಾಗಿದೆ. ಆನೆಗಳ ಹಿಂಡಿಗೆ ಡಿಕ್ಕಿ ಹೊಡೆದ ಬಳಿಕ ರೈಲಿನ ಇಂಜಿನ್ ಹಳಿ ತಪ್ಪಿದ್ದು ಆದರೆ ಘಟನೆಯಲ್ಲಿ ಯಾವುದೇ ಪ್ರಯಾಣಿಕರು ಗಾಯಗೊಂಡಿಲ್ಲ ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಸ್ಸಾಂ ಪೊಲೀಸರಿಂದ ಮೇಘಾಲಯ ಕುಲಪತಿ ಮಹಬೂಬುಲ್ ಹಕ್ ಬಂಧನ



ಗುವಾಹಟಿ: ಮೇಘಾಲಯದ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಮಹ್ಬೂಬುಲ್ ಹಕ್ ಅವರನ್ನು ಅಸ್ಸಾಂ ಪೊಲೀಸರು ಗುವಾಹಟಿಯಲ್ಲಿರುವ ಅವರ ನಿವಾಸದಲ್ಲಿ ಬಂಧಿಸಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಮೆಹಬೂಬುಲ್ ಹಕ್ ಅವರನ್ನು ಗುರಿಯಾಗಿಸಿ ಹಲವು ಬಾರಿ ವಾಗ್ದಾಳಿ ನಡೆಸಿದ ಬೆನ್ನಲ್ಲೇ ಪೊಲೀಸರು ಮತ್ತು ವಿಶೇಷ ಕಾರ್ಯಪಡೆ ಜಂಟಿ ತಂಡ ಅವರನ್ನು ಬಂಧಿಸಿದೆ.

ಸಿಬಿಎಸ್‌ಇ 12ನೇ ತರಗತಿಯ ಭೌತಶಾಸ್ತ್ರ ಪರೀಕ್ಷೆಯ ಸಮಯದಲ್ಲಿ ಅಕ್ರಮ ವಿಧಾನಗಳನ್ನು ಸುಗಮಗೊಳಿಸುವ ಸಲುವಾಗಿ ಹಣ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಅವರನ್ನು ಬಂಧಿಸಲಾಗಿದೆ. ಅಸ್ಸಾಂನ ಶ್ರೀಭೂಮಿ ಜಿಲ್ಲೆಯ ಕೇಂದ್ರೀಯ ವಿದ್ಯಾಲಯದಲ್ಲಿ ಒಟ್ಟು 274 ವಿದ್ಯಾರ್ಥಿಗಳು ಭೌತಶಾಸ್ತ್ರ ಪರೀಕ್ಷೆಗೆ ಹಾಜರಾಗಿದ್ದರು ಎಂದು ತಿಳಿದು ಬಂದಿದೆ. ಇದರಲ್ಲಿ 45 ವಿದ್ಯಾರ್ಥಿಗಳು ಶಾಲೆಯಿಂದ ಮತ್ತು 214 ವಿದ್ಯಾರ್ಥಿಗಳು ERD ಗ್ರೂಪ್‌ನಿಂದ ಬಂದಿದ್ದಾರೆ. ಹಣಕ್ಕೆ ಬದಲಾಗಿ ERD ಗ್ರೂಪ್ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯದಲ್ಲಿ ಸಹಾಯ ಮಾಡಲು ವ್ಯವಸ್ಥೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಭಗವದ್ಗೀತೆ ಹೆಸರಲ್ಲಿ ಎಫ್‌ಬಿಐ ನಿರ್ದೇಶಕರಾಗಿ ಕಶ್ಯಪ್ ಪಟೇಲ್ ಪ್ರಮಾಣ ವಚನ



ಅಮೆರಿಕ: ಅಮೆರಿಕದ ತನಿಖಾ ಸಂಸ್ಥೆ ಫೆಡರಲ್ ಬ್ಯುರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ನಿರ್ದೇಶಕರಾಗಿ ಭಾರತ ಮೂಲದ ಕಶ್ಯಪ್ ಪಟೇಲ್ ಭಗವದ್ಗೀತೆ ಮೇಲೆ ಪ್ರಮಾಣ ಮಾಡಿ ಅಧಿಕಾರ ಸ್ವೀಕರಿಸಿದ್ದಾರೆ. ವಾಷಿಂಗ್ಟನ್‌ನ ಶ್ವೇತಭವನದ ಆವರಣದಲ್ಲಿರುವ ಐಸೆನ್ ಹೋವರ್ ಕಾರ್ಯನಿರ್ವಾಹಕ ಕಚೇರಿ ಕಟ್ಟಡ (ಇಇಒಬಿ)ದಲ್ಲಿರುವ ಭಾರತೀಯ ಒಪ್ಪಂದ ಕೊಠಡಿಯಲ್ಲಿ ಯುಎಸ್ ಅಟಾರ್ನಿ ಜನರಲ್ ಪ್ಯಾಮ್ ಬೋಂಡಿ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು. ಎಫ್‌ಬಿಐನ 9ನೇ ನಿರ್ದೇಶಕರಾಗಿ ಕಶ್ಯಪ್ ಪಟೇಲ್ ಅವರನ್ನು ನೇಮಕಗೊಳಿಸಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಸೆನೆಟ್‌ನಲ್ಲಿ ನಿರ್ದೇಶಕರ ಹುದ್ದೆಗೆ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಪಟೇಲ್ ಪರ 51 ಮತ್ತು 49 ವಿರೋಧ ಮತಗಳನ್ನು ಪಡೆದಿದ್ದರು. ಇದುವರೆಗೆ ಎಫ್‌ಬಿಐ ಮುಖ್ಯಸ್ಥರಾಗಿದ್ದ ಕ್ರಿಸ್ಟೋಫರ್ ವ್ರೇ ಅವರ ಜಾಗಕ್ಕೆ ಈಗ ಪಟೇಲ್ ನೇಮಕಗೊಂಡಿದ್ದಾರೆ. ಅಮೆರಿಕದ ಪ್ರತಿಷ್ಠಿತ ಎಫ್‌ಬಿಐನ ಮೊದಲ ಭಾರತೀಯ ಮೂಲದ ನಿರ್ದೇಶಕರಲ್ಲದೆ, ಮೊದಲ ಏಷ್ಯನ್ ಮೂಲದವರು ಎನಿಸಿದ್ದಾರೆ. ಇವರ ಅವಧಿ ಮುಂದಿನ 10 ವರ್ಷಗಳ ಕಾಲ ಇರಲಿದೆ.

ಕೊಡವ ಭಾಷೆ ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಸೇರಿಸಲು ಆಗ್ರಹಿಸಿ

ಮಡಿಕೇರಿಯಲ್ಲಿ ಸಿಎನ್‌ಸಿ ಶಾಂತಿಯುತ ಸತ್ಯಾಗ್ರಹ



ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸುತ್ತಿರುವುದು.

ಮಡಿಕೇರಿ,ಫೆ.22– ಅಂತರರಾಷ್ಟ್ರೀಯ ಮಾತೃ ಭಾಷಾ ದಿನದ ಅಂಗವಾಗಿ ಮಡಿಕೇರಿಯಲ್ಲಿ ಸತ್ಯಾಗ್ರಹ ನಡೆಸಿದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ, ಕೊಡವ ಭಾಷೆಯನ್ನು ಸಂವಿಧಾನದ 8ನೇ ಶೆಡ್ಯೂಲ್‌ಗೆ ಸೇರಿಸಬೇಕು ಮತ್ತು ವಿಶ್ವರಾಷ್ಟ್ರ ಸಂಸ್ಥೆಯ ಭಾಷೆಗಳಲ್ಲಿ ಒಂದಾಗಿ ಪರಿಗಣಿಸಬೇಕೆಂದು ಒತ್ತಾಯಿಸಿತು.

ಶಾಂತಿಯುತ ಸತ್ಯಾಗ್ರಹದ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಅತ್ಯಂತ ವಿಶಿಷ್ಟವಾದ ಕೊಡವ ಬುಡಕಟ್ಟು ಜನಾಂಗದ ಕೊಡವ ಭಾಷೆಯನ್ನು ಸಂರಕ್ಷಿಸುವ ಅಗತ್ಯವಿದ್ದು, ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಗುರುತಿಸಿಕೊಳ್ಳುವುದು ಅನಿವಾರ್ಯವಾಗಿದೆ. ಯುನೆಸ್ಕೋದ 2025ರ ಘೋಷವಾಕ್ಯದಂತೆ 'ಲ್ಯಾಂಗ್ವೇಜಸ್ ಮ್ಯಾಟರ್: ಸಿಲ್ವರ್ ಜುಬ್ಲಿ ಸೆಲೆಬ್ರೇಶನ್ ಆಫ್ ಇಂಟರ್ ನ್ಯಾಷನಲ್ ಮದರ್ ಲ್ಯಾಂಗ್ವೇಜ್–ಡೇ'ಯಂದು ಸಿಎನ್‌ಸಿ ಸತ್ಯಾಗ್ರಹ ನಡೆಸಿದ್ದು, ಕಳೆದ 26 ವರ್ಷಗಳಿಂದ ಈ ಹೋರಾಟವನ್ನು ನಡೆಸಿಕೊಂಡು ಬರುತ್ತಿದೆ ಎಂದರು.

ಕೊಡವ ಭಾಷೆಯನ್ನು ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕು ಮತ್ತು ವಿಶ್ವರಾಷ್ಟ್ರ ಸಂಸ್ಥೆಯ ಭಾಷೆಗಳಲ್ಲಿ ಒಂದಾಗಿ ಪರಿಗಣಿಸಬೇಕು. ಕೊಡವ ಯೋಧ ಬುಡಕಟ್ಟು ಕೊಡವ ಪರ್ವತ ಬುಡಕಟ್ಟು ಸಮುದಾಯವನ್ನು ಕೊಡವ ಪ್ರದೇಶದ 'ಆದಿ ಬುಡಕಟ್ಟು' ಎಂದು ಗುರುತಿಸಬೇಕು ಮತ್ತು ಕೊಡವ ಬುಡಕಟ್ಟು ಜನಾಂಗವನ್ನು ಸಂವಿಧಾನದ ಎಸ್ಟಿ ಪಟ್ಟಿಯಲ್ಲಿ ಸೇರಿಸಬೇಕು. ಕೇಂದ್ರ ಸರ್ಕಾರ ಆಕ್ಸ್‌ಫರ್ಡ್ ನಿಘಂಟುಗಳಲ್ಲಿ ಕೊಡವ ಜಾನಪದ ಪದಗಳನ್ನು ಅಳವಡಿಸಲು ಮತ್ತು ಪರಿಚಯಿಸಲು ಕ್ರಮ ಕೈಗೊಳ್ಳಬೇಕು. ಕೊಡವ ಭಾಷೆಯನ್ನು ಭಾಷಾ ಪ್ರಯೋಗಾಲಯದಲ್ಲಿ ಪರಿಚಯಿಸಲು ಮತ್ತು ಎಲ್ಲಾ ತರಬೇತುದಾರರು ಕೊಡವ ಪದಗಳನ್ನು ನೆನಪಿಟ್ಟುಕೊಳ್ಳುವಂತೆ ಒತ್ತಾಯಿಸಲು ಸೇನೆ ಮತ್ತು ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಬೇಕು. ಕೊಡವ ಬುಡಕಟ್ಟು ಜನಾಂಗದವರ ಭೂಮಿಯನ್ನು ಉಳಿಸಲು ಕೊಡವನ್ನು ಸಂವಿಧಾನದ 8ನೇ ಶೆಡ್ಯೂಲ್ ಪಟ್ಟಿಯಲ್ಲಿ ಸೇರಿಸಬೇಕು. ಕೊಡಗು ಜಿಲ್ಲೆಯಲ್ಲಿ ಕೊಡವ ಭಾಷೆಯನ್ನು ಆಡಳಿತ ಭಾಷೆಯಾಗಿ ಘೋಷಿಸಬೇಕು. ಸಂವಿಧಾನ 347ನೇ ವಿಧಿಯಡಿಯಲ್ಲಿ ನಿಯಮಿತ ಪಠ್ಯಕ್ರಮದಲ್ಲಿ ಸೇರಿಸಬೇಕು. ಕರ್ನಾಟಕ ರಾಜ್ಯದ ಪಠ್ಯಕ್ರಮದಲ್ಲಿ ಕೊಡವ ಭಾಷೆಯನ್ನು 3ನೇ ಭಾಷೆಯಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು. ಬಳಿಕ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಎನ್.ಯು.ನಾಚಪ್ಪ ಅವರು ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು.

ಕಲಿಯಂಡ ಮೀನಾ ಕಾರ್ಯಪ್ಪ, ಕಿರವಂಡ ಸರಸು, ಕಲಿಯಂಡ ಪ್ರಕಾಶ್, ಕಾಂಡೇರ ಸುರೇಶ್, ಅಜ್ಜಿಕುಟ್ಟೀರ ಲೋಕೇಶ್, ಕಿರಿಯಮಾಡ ಶೆರಿನ್, ಜಮ್ಮಡ ಮೋಹನ್, ಮಣ್ಣೆಯ್ಯಿರ ಚಿಣ್ಣಪ್ಪ, ಬೇಪಡಿಯಂಡ ಬಿದ್ದಪ್ಪ, ಮೂಕೊಂಡ ದಿಲೀಪ್, ನಂದಿನೆರವಂಡ ವಿಜು, ಮೇದೂರ ಕಂಠಿ, ಕೂಪದಿರ ಸಾಬು, ಪುದಿಯೋಕ್ಕಡ ಪೃಥ್ವಿ, ಪುದಿಯೋಕ್ಕಡ ಕಾಶಿ ಮತ್ತಿತ್ತರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಕರಾಟೆ ಪಂದ್ಯಾವಳಿಯಲ್ಲಿ ವಿಜೇತರಾದ ವಿದ್ಯಾರ್ಥಿಗಳು



ಮೈಸೂರಿನ ಟೆರಿಷಿಯನ್ ಕಾಲೇಜಿನ ಸಭಾಂಗಣದಲ್ಲಿ ಶಿಯಾನ್ ಸುಧಾಕರ್ ಏರ್ಪಡಿಸಿದ್ದ ಕರಾಟೆ ಪಂದ್ಯಾವಳಿಯಲ್ಲಿ ವಿರಾಜಪೇಟೆಯ ಯೂಚೀರಿಯೊ ಕರಾಟೆ ವಿದ್ಯಾರ್ಥಿಗಳಾದ ಶಶಾಂಕ್, ಯಶ್ವಂತ್, ಜಯಶ್ರೀ, ದಿಪಾನ್ವಿತಾ, ಲೇಕ್ಷನಾ ಅವರುಗಳು ಭಾಗವಹಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಕರಾಟೆಯ ಮುಖ್ಯ ತರಬೇತಿದಾರರಾದ ಶಿಯಾನ್ ಶಿವಪ್ಪ ಅವರು ತಿಳಿಸಿದ್ದಾರೆ.

ನಾಳೆ 'ಕೊಡಗು ಜಾನಪದ ಬೆಡಗು' ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಕನ್ನಡ ಸಹ ಪ್ರಾಧ್ಯಾಪಕರಾದ ಡಾ. ಕಾವೇರಿ ಪ್ರಕಾಶ್ ಮಾತನಾಡಿದರು.

ಮಡಿಕೇರಿ,ಫೆ.22– ಕರ್ನಾಟಕ ಜಾನಪದ ಅಕಾಡೆಮಿ ಮತ್ತು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಂಯುಕ್ತಾಶ್ರಯದಲ್ಲಿ ಫೆ.24ರಂದು ಕಾಲೇಜು ಸಭಾಂಗಣದಲ್ಲಿ 'ಕೊಡಗು ಜಾನಪದ ಬೆಡಗು' ಜಾನಪದ ನಡೆ ವಿದ್ಯಾರ್ಥಿಗಳ ಕಡೆ ಎನ್ನುವ ವಿಶಿಷ್ಟ ಕಾರ್ಯಕ್ರಮ ಆಯೋಜಿತವಾಗಿದೆ.

ಸುದ್ದಿಗೋಷ್ಠಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹ ಪ್ರಾಧ್ಯಾಪಕರಾದ ಡಾ. ಕಾವೇರಿ ಪ್ರಕಾಶ್ ಮಾತನಾಡಿ, ಜಾನಪದ ಎನ್ನುವುದು ಸಾಹಿತ್ಯದ ಮೂಲ ಬೇರು. ಇಂತಹ ಅಮೂಲ್ಯ ಜಾನಪದ ಸಂಸ್ಕೃತಿ ಪರಂಪರೆಗಳು ತಲೆತಲಾಂತರಗಳಿಂದ ಹರಿದು ಬಂದಿದ್ದು, ಇದನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು. ಅಂದು ಬೆಳಗ್ಗೆ 10.30 ಗಂಟೆಗೆ ಕೊಡಗು ಜಾನಪದ ಬೆಡಗು ಕಾರ್ಯಕ್ರಮವನ್ನು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಅವರು ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ವೆಂಕಟೇಶ ಪ್ರಸನ್ನ ಪಿ.ಕೆ. ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಸಹ ಸಂಚಾಲಕರು ಹಾಗೂ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ಮೋಹನ್ ಕುಮಾರ್ ಮಾತನಾಡಿ, ಕಾರ್ಯಕ್ರಮದಲ್ಲಿ 'ಕೊಡಗಿನ ಸಾಂಪ್ರದಾಯಿಕ ಊಟೋಪಚಾರಗಳು' ವಿಷಯದ ಕುರಿತು ಡಾ.ಕಾವೇರಿ ಪ್ರಕಾಶ್ ಮತ್ತು 'ಬುಡಕಟ್ಟು ಸಂಸ್ಕೃತಿಯಲ್ಲಿ ಕುಡಿಯರು' ವಿಷಯದ ಕುರಿತು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಕುಡಿಯರ ಮುತ್ತಪ್ಪ ಅವರು ವಿಷಯ ಮಂಡನೆ ಮಾಡಲಿದ್ದಾರೆ ಎಂದರು. ಅತಿಥಿಗಳಾಗಿ ಐಕ್ಯೂಎಸಿ ಸಂಚಾಲಕರಾದ ಡಾ.ನಿರ್ಮಲ ಕೆ.ಡಿ, ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯ ಅಂಬೇಕಲ್ ನವೀನ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ. ಮೋಹನ್ ಕುಮಾರ್, ಜಾನಪದ ಅಕಾಡೆಮಿಯ ಸದಸ್ಯ ಸಂಚಾಲಕ ಡಾ. ಮೈಸೂರು ಉಮೇಶ್ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ಕಡ್ಲೇರ ತುಳಸಿ ಮೋಹನ್ ತಂಡದಿಂದ ಸುಗ್ಗಿ ಕುಣಿತ, ವಿಷ್ಣು ಪ್ರಿಯ ಮತ್ತು ತಂಡದಿಂದ ಕೊಡವ ಜಾನಪದ ನೃತ್ಯ, ಕುಡಿಯರ ಮುತ್ತಪ್ಪ ತಂಡದಿಂದ ದುಡಿಕೊಟ್ಟ್ ಪಾಟ್ ಪ್ರದರ್ಶನಗೊಳ್ಳಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಚೈತ್ರ ಎಸ್.ಜಿ., ಕಾಲೇಜು ವಿದ್ಯಾರ್ಥಿ ಸಂಘದ ವಿಷ್ಣು ಪ್ರಿಯ, ಯೋಗೇಶ್ ಮತ್ತು ಸುಫಾನ ಉಪಸ್ಥಿತರಿದ್ದರು.

ಕಾವೇರಿ ಶಾಲೆ ವಿದ್ಯಾರ್ಥಿಗಳಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥ



ವಿರಾಜಪೇಟೆ ಕಾವೇರಿ ಶಾಲೆ ವಿದ್ಯಾರ್ಥಿಗಳು ರಸ್ತೆ ಸುರಕ್ಷತಾ ಜಾಗೃತಿ ಜಾಥಾ ನಡೆಸಿದರು.

ವಿರಾಜಪೇಟೆ, ಫೆ.22– ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ವಿರಾಜಪೇಟೆ ಕಾವೇರಿ ಶಾಲೆ ವಿದ್ಯಾರ್ಥಿಗಳು ಪಟ್ಟಣದ ತೆಲುಗರ ಬೀದಿಯ ಮಾರಿಯಮ್ಮ ದೇವಸ್ಥಾನ ಬಳಿಯಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾ ನಡೆಸಿದರು.

ಜಾಥಾವು ಎಫ್‌ಎಂಸಿ ರಸ್ತೆ ಮೂಲಕ ಗಡಿಯಾರ ಕಂಬದ ಬಳಿಯಿಂದ ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯಿಂದ, ದೊಡ್ಡಟ್ಟಿ ಚೌಕಿ ಮಾರ್ಗವಾಗಿ ಸಾಗಿ 'ವಾಹನ ಚಲಾಯಿಸುವಾಗ ನಿಮ್ಮನ್ನು ರಕ್ಷಿಸಿಕೊಳ್ಳಿ, ಇತರರನ್ನು ರಕ್ಷಿಸಿ' ಎಂದು ಕೂಗುತ್ತ ಜಾಗೃತಿ ಮೂಡಿಸಿದರಲ್ಲದೆ, ವಾಹನ ಸಂಚಾರದ ನಿಯಮಗಳ ಬಗ್ಗೆ ಕರಪತ್ರ ಹಂಚಿದರು. ಈ ವೇಳೆ ಕಾವೇರಿ ಶಾಲೆಯ ಶಿಕ್ಷಕರುಗಳು ಭಾಗವಹಿಸಿದ್ದರು. ಇವರೊಂದಿಗೆ ಪುರಸಭೆ ಮತ್ತು ನಗರ ಠಾಣೆ ಪೊಲೀಸರು ಸಹಕಾರ ನೀಡಿದ್ದರು.

ನಾಳೆ ನಾಪೋಕ್ಲು ಪಟ್ಟಣದ ಮುಖ್ಯ ರಸ್ತೆಯಲ್ಲಿ ವಾಹನ ನಿಲುಗಡೆ ನಿಷೇಧ



ಠಾಣಾಧಿಕಾರಿ ಮಂಜುನಾಥ್

ನಾಪೋಕ್ಲು, ಫೆ.22– ನಾಪೋಕ್ಲು ಪಟ್ಟಣದ ಮುಖ್ಯರಸ್ತೆಯಲ್ಲಿ ವಾಹನ ನಿಲುಗಡೆಯನ್ನು ಸೋಮವಾರ (ಫೆ.24) ನಿಷೇಧಿಸಲಾಗಿದ್ದು, ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕೆಂದು ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ಕೋರಿದ್ದಾರೆ.

ಫೆ.24 ರಂದು ಎಮ್ಮೆಮಾಡು ಮಖಾಂ ಉರೂಸ್ ಪ್ರಯುಕ್ತ ಸಾರ್ವಜನಿಕ ಸಮ್ಮೇಳನಕ್ಕೆ ಜಿಲ್ಲೆ ಮತ್ತು ಹೊರ ಜಿಲ್ಲೆ ಹಾಗೂ ಹೊರ ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳಲ್ಲಿ ಬರುವುದರಿಂದ ನಾಪೋಕ್ಲುವಿನಲ್ಲಿ ಸಂತೆ ನಡೆಯಲಿರುವುದರಿಂದ ನಾಪೋಕ್ಲು ನಗರದಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ತೊಂದರೆಯಾಗುವ ಸಾಧ್ಯತೆಗಳಿರುವುದರಿಂದ ಈ ಕ್ರಮ ಜರುಗಿಸಲಾಗಿದೆ.

ನಾಪೋಕ್ಲು ನಗರದಲ್ಲಿ ಸುಗಮ ಸಂಚಾರಕ್ಕಾಗಿ ಎಮ್ಮೆಮಾಡು ಮಖಾಂ ಉರೂಸ್‌ಗೆ ಭಾಗವಹಿಸಲು ಬರುವವರು ಹಾಗೂ ಸಾರ್ವಜನಿಕರು ತಮ್ಮ ತಮ್ಮ ವಾಹನವನ್ನು ಕೊಟ್ಟಮುಡಿ ಜಂಕ್ಷನ್ ನಿಂದ ಎಮ್ಮೆಮಾಡು ಜಂಕ್ಷನ್ ವರೆಗೆ ರಸ್ತೆಯ ಎರಡು ಬದಿಯಲ್ಲಿ ನಿಲ್ಲಿಸದಂತೆ ಮನವಿ ಮಾಡಿದ್ದಾರೆ.

ನಾಳೆ ಉದ್ಯೋಗ ಮೇಳ

ಮಡಿಕೇರಿ ಫೆ.22– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಫೆ.24 ರಂದು ಬೆಳಗ್ಗೆ 10.30 ರಿಂದ ಅಪರಾಹ್ನ 3 ಗಂಟೆವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಉದ್ಯೋಗ ಮೇಳ ನಡೆಯಲಿದೆ.

ಈ ಉದ್ಯೋಗ ಮೇಳದಲ್ಲಿ ಮಡಿಕೇರಿ ತಾಜ್ ರೆಸಾರ್ಟ್, ವಿರಾಜಪೇಟೆ ತಾಮರ ರೆಸಾರ್ಟ್, ಮಡಿಕೇರಿ ಕಲ್ಯಾಣಿ ಮೋಟಾರ್ಸ್, ಪ್ಯಾಲೇಸ್ ಟೊಯೋಟಾ ಕಾರ್ ಶೋ ರೂಂ ಕುಶಾಲನಗರ, ಪೆಂಟಾಟೆಕ್ ಮತ್ತು ಕ್ಲಬ್ ಮಹೀಂದ್ರ ರೆಸಾರ್ಟ್ ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಈ ಮೇಳದಲ್ಲಿ ಖಾಸಗಿ ಕಂಪೆನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಈ ಉದ್ಯೋಗ ಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮ, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಿ ಉದ್ಯೋಗದ ನೆರವನ್ನು ಪಡೆಯಬಹುದು. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು, ಅನುಭವ ಪ್ರಮಾಣಪತ್ರ (ಅನ್ವಯಿಸುವರಿಗೆ ಮಾತ್ರ) ಹಾಗೂ ಸ್ವ–ವಿವರಗಳ ಪ್ರತಿಗಳೊಂದಿಗೆ ಉದ್ಯೋಗ ಮೇಳಕ್ಕೆ ಹಾಜರಾಗುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಸಿ.ಬಿ.ಮಂಜುನಾಥ ತಿಳಿಸಿದ್ದಾರೆ.

ಕೆರೆಯಲ್ಲಿ ಮುಳುಗಿಸಿ ಯುವತಿ ಹತ್ಯೆಗೆ ಯತ್ನಿಸಿದ್ದ ಬಸ್ ಕ್ಲೀನರ್‌ಗೆ ನಾಲ್ಕು ವರ್ಷ ಜೈಲು

ಕೊಳ್ಳೇಗಾಲ: ಯುವತಿಯನ್ನು ಕೆರೆಯಲ್ಲಿ ಮುಳುಗಿಸಿ ಹತ್ಯೆ ಮಾಡಲು ಯತ್ನಿಸಿದ್ದ ಬಸ್ ಕ್ಲೀನರ್‌ಗೆ 4 ವರ್ಷ ಜೈಲು ಹಾಗೂ 5 ಸಾವಿರ ರೂ. ದಂಡ ವಿಧಿಸಿ ಕೊಳ್ಳೇಗಾಲದ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಟಿ.ಸಿ.ಶ್ರೀಕಾಂತ್ ತೀರ್ಪು ನೀಡಿದ್ದಾರೆ.



ಕೆ.ಎಸ್.ಕಾರ್ತಿಕ್

ಮೈಸೂರಿನ ಸಿದ್ದಲಿಂಗಪುರ ಗ್ರಾಮದ ನಿವಾಸಿಯಾಗಿರುವ ಬಸ್ ಕ್ಲೀನರ್ ಕೆ.ಎಸ್.ಕಾರ್ತಿಕ್ ಶಿಕ್ಷೆಗೆ ಗುರಿಯಾದವನಾಗಿದ್ದು, ಈತ 2019ರ ಅಕ್ಟೋಬರ್ 26ರಂದು ಸಂಜೆ 6.30ರ ಸುಮಾರಿನಲ್ಲಿ ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜ್‌ಗೆ ಸಂಪರ್ಕ ಕಲ್ಪಿಸುವ ಚಿಕ್ಕರಂಗನಾಥ ಕೆರೆ ಸೇತುವೆ ಮೇಲೆ ಯುವತಿ ನಡೆದುಕೊಂಡು ಹೋಗುತ್ತಿದ್ದಾಗ ಆಕೆಯನ್ನು ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿದ್ದಾನೆ. ಆಕೆ ತಪ್ಪಿಸಿಕೊಳ್ಳಲು ಯತ್ನಿಸಿದ ವೇಳೆ ಕೆರೆಗೆ ಎಳೆದೊಯ್ದು ನೀರಿನಲ್ಲಿ ಯುವತಿಯನ್ನು ಮುಳುಗಿಸಿ ಹತ್ಯೆ ಮಾಡಲು ಪ್ರಯತ್ನಿಸಿದ್ದಾನೆ.

ಈ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಕೊಳ್ಳೇಗಾಲ ಪಟ್ಟಣ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಜೆ. ರಾಜೇಂದ್ರ ಅವರು, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಪಿ.ಮಂಜುನಾಥ್ ವಾದ ಮಂಡಿಸಿದ್ದರು.

ಸ್ಫೋಟಕ ಸಿಡಿದು ಜಾನುವಾರುಗಳ ಸಾವಿನ ಪ್ರಕರಣ

ಪ್ರಕರಣ ಭೇದಿಸಲು ವಿಶೇಷ ತಂಡ ರಚನೆ

ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ, ಪೊಲೀಸ್ ಅಧಿಕಾರಿಗಳ ತಂಡ ಭೇಟಿ



ಘಟನಾ ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ ಮತ್ತು ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಹನೂರು, ಫೆ22– ಜಮೀನಿನಲ್ಲಿ ಮೇಯಲು ಹೋಗಿದ್ದ ಜಾನುವಾರುಗಳು ಸ್ಫೋಟಕ ಸಿಡಿದು ಮೃತಪಡುತ್ತಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ ವಿಶೇಷ ತಂಡ ರಚನೆ ಮಾಡಿ ಪ್ರಕರಣ ಭೇದಿಸಲು ಕ್ರಮಕೈಗೊಂಡಿದ್ದಾರೆ.

ಹನೂರು ತಾಲೂಕಿನ ಕೌದಳ್ಳಿ, ಭದ್ರಯ್ಯನಹಳ್ಳಿ, ಹನೂರು ಪಟ್ಟಣ ವ್ಯಾಪ್ತಿಯ 7ನೇ ಹಾಗೂ 12ನೇ ವಾರ್ಡ್ ವ್ಯಾಪ್ತಿಯ ರೈತರುಗಳ ಜಾನುವಾರುಗಳು ಮೇವು ಮೇಯಲು ತೆರಳಿದ್ದಾಗ ಕಿಡಿಗೇಡಿಗಳು ಮೇವಿನ ಮಧ್ಯೆ ಇಟ್ಟಿದ್ದ ನಾಡಬಾಂಬ್‌ಗಳು ಕಚ್ಚುತ್ತಿದ್ದಂತೆ ಸ್ಫೋಟವಾಗಿ ಹಸು ಹಾಗೂ ಇನ್ನಿತರ ಜಾನುವಾರುಗಳ ಬಾಯಿ ಛಿದ್ರವಾಗಿ ನರಳುತ್ತಾ ಮೃತಪಡುತ್ತಿದ್ದವು.

ಈ ಸಂಬಂಧ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು. ನೊಂದ ರೈತರು ಮೃತಪಟ್ಟಿರುವ ಜಾನುವಾರುಗಳಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಿ ಕಿಡಿಗೇಡಿಗಳನ್ನು ಪತ್ತೆಹಚ್ಚಿ ಶಿಕ್ಷೆ ಕೊಡಿಸುವಂತೆ ಒತ್ತಾಯಿಸಿದ್ದರು.

ಜಾನುವಾರುಗಳು ಹನೂರು ತಾಲೂಕು ವ್ಯಾಪ್ತಿಯಲ್ಲಿಯೇ ಅತೀ ಹೆಚ್ಚು ಮೃತಪಡುತ್ತಿರುವುದರಿಂದ ಕಿಡಿಗೇಡಿಗಳನ್ನು ಪತ್ತೆ ಹಚ್ಚಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾ ಹಾಗೂ ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಧರ್ಮೇಂದ್ರ ನೇತೃತ್ವದಲ್ಲಿ ಶುಕ್ರವಾರ ಜಿಲ್ಲಾ ಬಾಂಬ್ ನಿಷ್ಕ್ರಿಯದಳ ಹಾಗೂ ಸಿಬ್ಬಂದಿ ಭದ್ರಯ್ಯನಹಳ್ಳಿ ಗ್ರಾಮದಲ್ಲಿ ಜಾನುವಾರುಗಳು ಸ್ಫೋಟಗೊಂಡು ಗಾಯಗೊಂಡಿದ್ದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನಾ ಸ್ಥಳದಲ್ಲಿ ಯಾವುದೇ ಸಿಡಿಮದ್ದುಗಳು ಕಂಡು ಬಂದಿಲ್ಲ ಎಂದು ತಿಳಿದುಬಂದಿದೆ.

ಎಸ್‌ಪಿ ಡಾ.ಕವಿತಾ ಮಾಧ್ಯಮದವರೊಂದಿಗೆ ಮಾತನಾಡಿ, ಹನೂರು ತಾಲೂಕು ವ್ಯಾಪ್ತಿ ಕಳೆದ ತಿಂಗಳ ಅವಧಿಯಲ್ಲಿ ಸಿಡಿಮದ್ದುಗಳು ಸಿಡಿದು ಜಾನುವಾರುಗಳು ಮೃತಪಡುತ್ತಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ನಾಡ ಬಾಂಬ್ ಪತ್ತೆ ಮಾಡಲು ವಿಶೇಷ ಶ್ವಾನದಳ ಕರೆತರಲಾಗಿತ್ತು ಆದರೆ ಯಾವುದೇ ಸಿಡಿ ಮದ್ದುಗಳು ಪತ್ತೆಯಾಗಿಲ್ಲ, ಗ್ರಾಮಸ್ಥರು ಮೊದಲ ಪ್ರಕರಣವಾದಾಗ ಗಮನಕ್ಕೆ ತಂದಿದ್ದರೆ ಇದನ್ನು ತಡೆಗಟ್ಟಬಹುದಾಗಿತ್ತು. ಆದರೂ ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಕ್ರಮ ವಹಿಸಲಾಗುವುದು. ಗ್ರಾಮಸ್ಥರು ಸಹ ತಮ್ಮ ಸುತ್ತಮುತ್ತಲಿನ ಪರಿಸರಗಳಲ್ಲಿ ಇಂತಹ ಘಟನೆಗಳು ಕಂಡು ಬಂದರೆ ನೇರವಾಗಿ ಮಾಹಿತಿ ನೀಡಿದರೆ ಅಂಥವರ ಹೆಸರನ್ನು ಗೌಪ್ಯವಾಗಿ ಇಡಲಾಗುವುದು. ಸಾರ್ವಜನಿಕರು ಸಹಕಾರ ನೀಡಿದರೆ ಕಿಡಿ ಗೇಡಿಗಳನ್ನು ಆದಷ್ಟು ಬೇಗ ಪತ್ತೆ ಹಚ್ಚಬಹುದು ಎಂದು ತಿಳಿಸಿದರು.

ಈ ವೇಳೆ ರಾಮಾಪುರ ಪ್ರಭಾರ ಇನ್‌ಸ್ಪೆಕ್ಟರ್ ಶೇಷಾದ್ರಿ ಸಿಬ್ಬಂದಿವರ್ಗ ಪಾಲ್ಗೊಂಡಿದ್ದರು.

ಸಂವಿಧಾನ ಕೇವಲ ಗ್ರಂಥವಲ್ಲ, ಅಭಾಗ್ಯರ ಆಯುಧ

ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಅಭಿಮತ



'ಸಂವಿಧಾನ ಓದು ಅಧ್ಯಯನ ಶಿಬಿರ'ವನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಉದ್ಘಾಟಿಸಿದರು.

ಚಾಮರಾಜನಗರ, ಫೆ.22– ಸಂವಿಧಾನ ಕೇವಲ ಗ್ರಂಥವಲ್ಲ. ಅದು ಎರಡು ತಲೆಮಾರಿನ ತ್ಯಾಗದ ಮಹಾನ್ ಚರಿತ್ರೆ ಅದು ಅಭಾಗ್ಯರ ಕೈಯಲ್ಲಿರುವ ಆಯುಧ ಎಂದು ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅಭಿಮತ ವ್ಯಕ್ತಪಡಿಸಿದ್ದಾರೆ.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಸಂವಿಧಾನ ಓದು ಅಭಿಯಾನ ಕರ್ನಾಟಕ ಹಾಗೂ ಸಮಾನ ಮನಸ್ಕ ಸಂಘಟನೆಗಳ ವತಿಯಿಂದ ಎರಡು ದಿನಗಳ 'ಸಂವಿಧಾನ ಓದು ಅಧ್ಯಯನ ಶಿಬಿರ'ವನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕೆಲವು ವರ್ಷಗಳ ಹಿಂದೆ ಸಂವಿಧಾನದ ಬಗ್ಗೆ ಮಾತನಾಡುವವರೇ ಇರಲಿಲ್ಲ. ಸಂವಿಧಾನ ಓದು ಕರ್ನಾಟಕ ಅಭಿಯಾನ ಆರಂಭಿಸಿದ ಮೇಲೆ ಸಂವಿಧಾನದ ಬಗ್ಗೆ ಮಾತನಾಡುವವರು ಹೆಚ್ಚಾಗಿದ್ದಾರೆ. ಕಳೆದೊಂದು ವರ್ಷದಿಂದ ರಾಜ್ಯದ 10 ಜಿಲ್ಲೆಗಳಲ್ಲಿ ಸಂವಿಧಾನ ಓದು ಅಧ್ಯಯನ ಶಿಬಿರ ನಡೆಸಲಾಗಿದೆ. ಎಲ್ಲಾ ಧರ್ಮ ಗ್ರಂಥಗಳಿಗಿಂತಲೂ ಶ್ರೇಷ್ಠವಾದ ಗ್ರಂಥ ಸಂವಿಧಾನವಾಗಿದೆ.

ನಂತರ ದಸಂಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ಇಂದು ಸಂವಿಧಾನದ ಮೇಲೆ ದಾಳಿಗಳು ನಡೆಯುತ್ತಿದ್ದು, ಮೀಸಲಾತಿ ಕೇವಲ ದಲಿತರಿಗೆ ಮಾತ್ರ ಎಂಬಂತೆ ಆಳುವ ಸರ್ಕಾರಗಳು ಬಿಂಬಿಸಿವೆ. ಅಂಬೇಡ್ಕರ್ ಕೇವಲ ದಲಿತರಿಗೆ ಮಾತ್ರ ಮೀಸಲಾತಿ ಸೌಲಭ್ಯವನ್ನು ಒದಗಿಸಿಲ್ಲ. ಎಲ್ಲಾ ವರ್ಗದವರಿಗೂ ಸಮಾನ ಅವಕಾಶ ಕಲ್ಪಿಸಿದ್ದಾರೆ. ಮೀಸಲಾತಿ ಎನ್ನುವುದು ಪ್ರಾತಿನಿಧ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ದೇಶದಲ್ಲಿ ಸಾರ್ವಜನಿಕ ವಲಯ ಸೇರಿದಂತೆ ಖಾಸಗಿ ವಲಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಇಂತಹ ಗಂಭೀರ ಸಮಸ್ಯೆಗಳ ಬಗ್ಗೆ ಸರ್ಕಾರ ಚರ್ಚಿಸಿ, ಪರಿಹಾರ ಸೂಚಿಸಬೇಕಿತ್ತು. ಅದುಬಿಟ್ಟು, ಗಂಗಾನದಿಯಲ್ಲಿ ಸ್ನಾನ ಮಾಡಿ, ಪುಣ್ಯ ಬರುತ್ತದೆ ಎಂದು ಜನರಲ್ಲಿ ಸರ್ಕಾರಗಳು ಅವೈಜ್ಞಾನಿಕ ಮನೋಭಾವ ಮೂಡಿಸುತ್ತಿರುವುದು ವಿಷಾದನೀಯ ಎಂದರು.

ಬಳಿಕ ದೀನಬಂಧು ಸಂಸ್ಥೆ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ್ ಮಾತನಾಡಿ, ಬಹುತ್ವ ಕಾಪಾಡುವಲ್ಲಿ ಸಂವಿಧಾನದ ಪಾತ್ರ ಅತ್ಯಂತ ದೊಡ್ಡದು, ಸಂವಿಧಾನವನ್ನು ಅರ್ಥೈಸಿಕೊಳ್ಳುವುದು, ಅದರ ರಕ್ಷಣೆಗೆ ಪೂರಕವಾಗಿ ಸಂವಿಧಾನ ಓದು ಅಭಿಯಾನ ಹಮ್ಮಿಕೊಂಡಿರುವುದು ಉತ್ತಮ ಬೆಳವಣಿಗೆ ಎಂದರು.

ಸಾಹಿತಿ ಮಹದೇವ ಶಂಕನಪುರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಎಸ್.ಮುನಿರಾಜು ಮಾತನಾಡಿದರು. ಮಧ್ಯಾಹ್ನ ನಡೆದ ವಿಚಾರಗೋಷ್ಠಿಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಎಚ್.ಎನ್. ನಾಗಮೋಹನ್‌ದಾಸ್ ಅವರು 'ಸಂವಿಧಾನ ರಚನೆ ಹಾಗೂ ಮೂಲತತ್ವಗಳು' ಕುರಿತು ವಿಚಾರ ಮಂಡನೆ ಮಾಡಿದರು.

ಕಾರ್ಯಕ್ರಮದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪನಿರ್ದೇಶಕ ಯೋಗಾನಂದ್, ಜಾನಪದ ಕಲಾವಿದ ಸಿ.ಎಂ. ನರಸಿಂಹಮೂರ್ತಿ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ವ್ಯವಸ್ಥಾಪಕ ಗೋವಿಂದರಾಜು, ಸಾಹಿತಿ ವೆಂಕಟರಾಜು, ಸಂವಿಧಾನ ಓದು ಅಭಿಯಾನ ರಾಜ್ಯ ಸಂಚಾಲಕ ಪರಶಿವಮೂರ್ತಿ ಸೇರಿದಂತೆ ಕಾಲೇಜು ವಿದ್ಯಾರ್ಥಿನಿಯರು, ಶಿಬಿರಾರ್ಥಿಗಳು ಹಾಜರಿದ್ದರು.

ಇಂದು ಸಮಾರೋಪ, ಪ್ರಶಸ್ತಿ ವಿತರಣೆ

ಚಾಮರಾಜನಗರ: ಸಂವಿಧಾನ ಓದು ಅಧ್ಯಯನ ಶಿಬಿರದ ಸಮಾರೋಪ ಸಮಾರಂಭ ಹಾಗೂ ಪ್ರಶಸ್ತಿ ವಿತರಣೆ ಫೆ.23 ರಂದು ಮಧ್ಯಾಹ್ನ 2.30ಕ್ಕೆ ನಡೆಯಲಿದೆ. ಬೆಳಗ್ಗೆ 10ರಿಂದ ಮಧ್ಯಾಹ್ನ 2.30ರವರಗೆ ಸಂವಿಧಾನ, ಸಾಮಾಜಿಕ ನ್ಯಾಯ ಕುರಿತು ರಾಜಶೇಖರಮೂರ್ತಿ, ಸಂವಿಧಾನ ಒಕ್ಕೂಟ ವ್ಯವಸ್ಥೆ ಕುರಿತು ಕರಿಯಣ್ಣ ನಿಷಾಧ, ಸಂವಿಧಾನ ಜಾತ್ಯಾತೀತತೆ ಕುರಿತು ರಾಮಕೃಷ್ಣ ವಿಚಾರ ಮಂಡಿಸುವರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ನಾಗಮೋಹನ್‌ದಾಸ್ ವಹಿಸುವರು, ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರಯ್ಯ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಇನ್‌ಸ್ಪೆಕ್ಟರ್ ಶ್ರೀಕಾಂತ್ ಪಾಲ್ಗೊಳ್ಳುವರು.

ಚಾಮರಾಜನಗರ ವಿವಿ ಉಳಿವಿಗೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ ವಿವಿ ಉಳಿವಿಗಾಗಿ ಬೋಧಕರು, ಬೋಧಕೇತರ ಸಂಘ ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ22– ಚಾಮರಾಜನಗರ ವಿಶ್ವವಿದ್ಯಾನಿಲಯವನ್ನು ಯಥಾಸ್ಥಿತಿ ಮುಂದುವರಿಸಬೇಕು ಎಂದು ಆಗ್ರಹಿಸಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಬೋಧಕರು ಮತ್ತು ಬೋಧಕೇತರ ಸಂಘ ಹಾಗೂ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಆವರಣದಲ್ಲಿ ಶುಕ್ರವಾರ ಪ್ರತಿಭಟನಾ ಧರಣಿ ನಡೆಸಿ ಒತ್ತಾಯಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಚಾ.ನಗರ ವಿಶ್ವವಿದ್ಯಾನಿಲಯದಲ್ಲಿ ಬೋಧಕ ಬೋಧಕೇತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಚಾಮರಾಜನಗರ ವಿವಿಯನ್ನು ಯಥಾಸ್ಥಿತಿ ಮುಂದುವರಿಸಬೇಕು ಹಾಗೂ ಅನುದಾನ ನೀಡಬೇಕು ಎಂದು ವಿದ್ಯಾರ್ಥಿಗಳು ಜೊತೆಗೂಡಿ ಪ್ರತಿಭಟಿಸಿದರು.

ಸಂಘದ ಗೌರವ ಸಲಹೆಗಾರರಾದ ಮಲ್ಲಿಕಾರ್ಜುನ ಅವರು ಮಾತನಾಡಿ, ಗಡಿಜಿಲ್ಲೆಯಲ್ಲಿ ದಲಿತ, ಹಿಂದುಳಿದ ಅಲ್ಪಸಂಖ್ಯಾತರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಸಿಕ್ಕಿದೆ. ಚಾಮರಾಜನಗರ ದಿ.ಧ್ರುವನಾರಾಯಣ, ದಿ. ಮಹದೇವಪ್ರಸಾದ್ ಅವರ ಕನಸಾಗಿತ್ತು. ಜಿಲ್ಲೆಯ ಜನತೆಯ ಹೆಮ್ಮೆಯ ವಿಶ್ವವಿದ್ಯಾನಿಲಯ ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ಗೌರವಾಧ್ಯಕ್ಷ ಬಿ.ಗುರುರಾಜು ಯರಗನಹಳ್ಳಿ ಮಾತನಾಡಿ, ರಾಜ್ಯದಲ್ಲಿ ಉನ್ನತ ಶಿಕ್ಷಣಕ್ಕೆ ದಾಖಲಾತಿ ಅನುಪಾತ ಶೇ.36 ಮಾತ್ರ, ನೆರೆರಾಜ್ಯ ತಮಿಳುನಾಡು ಶೇ.55–60 ಇದೆ. ಜಿಲ್ಲಾವಾರು ಗಮನಿಸಿದಾಗ ಮಂಡ್ಯ ಮೈಸೂರು ಜಿಲ್ಲೆಗಳಲ್ಲಿ ಶೇ.25–30ರಷ್ಟು ದಾಖಲಾತಿ ಇದೆ. ಆದರೆ ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ದಾಖಲಾತಿ ಶೇ.10.08 ಮಾತ್ರ ಇರುವುದು ಆತಂಕ ಮೂಡಿಸಿದೆ ಇಂಥ ಜಿಲ್ಲೆಗೆ ವಿಶ್ವವಿದ್ಯಾನಿಲಯ ಅತ್ಯವಶ್ಯಕವಾಗಿದೆ. ವಿಶ್ವವಿದ್ಯಾನಿಲಯದಲ್ಲಿ 7652 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಇವರಲ್ಲಿ 4281 ವಿದ್ಯಾರ್ಥಿನಿಯರು ಓದುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶ್ವವಿದ್ಯಾನಿಲಯ ಅವಕಾಶವಾಗಿದೆ. ಸರ್ಕಾರ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅನುದಾನ ನೀಡಿ ಮುಂದುವರಿಸಬೇಕು ಎಂದು ಮನವಿ ಮಾಡಿಕೊಂಡರು.

ಉಪಾಧ್ಯಕ್ಷ ಡಾ.ಕುಮಾರ್ ಚಿಕ್ಕಹೊಳೆ ಮಾತನಾಡಿ, ಚಾಮರಾಜನಗರ ನೂತನ ಜಿಲ್ಲೆಯಾಗಿ ರೂಪುಗೊಂಡಿದ್ದರಿಂದ ಹಲವು ಸೌಲಭ್ಯಗಳು ದೊರಕಿ ಅಭಿವೃದ್ಧಿಯಾಗುತ್ತಿದೆ. ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು, ಕಾನೂನು ಕಾಲೇಜು, ಜಿಲ್ಲಾ ಆಸ್ಪತ್ರೆ ಮುಂತಾದವು ಸಾಧ್ಯವಾಗಿದೆ. ವಿಶ್ವವಿದ್ಯಾನಿಲಯ ಮುಂದುವರಿಸುವುದರಿಂದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ, ಸಂಶೋಧನೆಗೆ, ಉದ್ಯೋಗ ಅವಕಾಶಕ್ಕೆ ಅನುಕೂಲವಾಗಲಿದೆ. ಜಿಲ್ಲೆಯ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ವಿಶ್ವವಿದ್ಯಾನಿಲಯವನ್ನು ಯಥಾಸ್ಥಿತಿ ಮುಂದುವರಿಸಬೇಕು ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ಸಂಘದ ಸದಸ್ಯರು ರಾಜ್ಯಪಾಲರಿಗೆ, ಮುಖ್ಯಮಂತ್ರಿಗಳಿಗೆ, ಉಪಮುಖ್ಯಮಂತ್ರಿಗಳಿಗೆ, ಉನ್ನತ ಶಿಕ್ಷಣ ಸಚಿವರಿಗೆ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಮೂಲಕ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ಡಾ.ಮಹದೇವಮೂರ್ತಿ, ಉಪಾಧ್ಯಕ್ಷ ಚೇತನ್, ಪ್ರಧಾನ ಕಾರ್ಯದರ್ಶಿ ಡಾ.ಮಹೇಶ್ ಕೋಡಿಉಗನೆ, ಪ್ರಮೋದ್ ಕುಮಾರ್, ಸಹಕಾರ್ಯದರ್ಶಿ ಎಂ.ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ಮಹೇಶ್ ಚಂದಕವಾಡಿ, ರೇಖಾ, ಖಜಾಂಚಿ ದಿವ್ಯಶ್ರೀ, ಕಾರ್ಯಕಾರಿಣಿ ಮಂಡಳಿ ಸದಸ್ಯರಾದ ಭಾಗ್ಯಮ್ಮ, ಡಾ.ಎಸ್.ನಿಂಗರಾಜು,ಡಾ.ಸಂಗಪ್ಪ ಶಿರೂರು, ಬಂಗಾರು, ಮನೋಜ್, ಸುರೇಶ್ ಬಾಬು, ಭಾಸ್ಕರ್ ಹಾಗೂ ನೂರಾರು ವಿದ್ಯಾರ್ಥಿಗಳು ಹಾಜರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ 23-2-2025

ನಾಳೆ
ಬಿಸಿಲು ಮಾರಮ್ಮ ಜಾತ್ರೆ ಸಂಭ್ರಮ

■ ಎಂ.ಬಿ.ಪವನ್‌ಮೂರ್ತಿ
ಮೊ.9738845134



ಜಾತ್ರೆ ಪ್ರಯುಕ್ತ ಮೈಸೂರಿನ ತೊಣಚಿಕೊಪ್ಪಲಿನ ಬಿಸಿಲು ಮಾರಮ್ಮ ದೇವಸ್ಥಾನದ ರಾಜಗೋಪುರ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿರುವುದು.

ಮೇಲ್ಛಾವಣಿಯೇ ಇಲ್ಲದಿರುವುದು ಆ ಗರ್ಭಗುಡಿಯ ವಿಶೇಷ! ಹೌದು, ಮೈಸೂರಿನ ತೊಣಚಿಕೊಪ್ಪಲು ಶ್ರೀ ಬಿಸಿಲು ಮಾರಮ್ಮ ದೇವಸ್ಥಾನದ ಗರ್ಭಗುಡಿ ಮೇಲ್ಛಾವಣಿ ಹೊಂದಿಲ್ಲ. ವೃಕ್ಷಗಳ ನಡುವೆ ಬಿಸಿಲು ಮಾರಮ್ಮನ ಕಲ್ಲಿನ ಉದ್ಭವಮೂರ್ತಿ ಇದ್ದು, ಮಾರಮ್ಮ ತಾಯಿಯ ಹೆಸರೇ ಹೇಳುವಂತೆ, 'ಬಿಸಿಲು' ಮಾರಮ್ಮನ ಉದ್ಭವಮೂರ್ತಿ ಮೇಲೆ ಬೀಳುವುದು ವಿಶೇಷ. ಮಳೆ ಬಂದಾಗ ಮಳೆ ನೀರಿನ ಅಭಿಷೇಕವೂ ಮಾರಮ್ಮನ ಮೂರ್ತಿಗೆ ಆಗುತ್ತದೆ.

ಮಾರಮ್ಮನ ಇಚ್ಛೆಯಂತೆಯೇ ಗರ್ಭಗುಡಿಗೆ ಮೇಲ್ಛಾವಣಿಯನ್ನು ನಮ್ಮ ಹಿರಿಯರು ನಿರ್ಮಿಸಿಲ್ಲವೆಂಬುದು ಗ್ರಾಮಸ್ಥರ ನಂಬಿಕೆ. ಹಾಗಾಗಿಯೇ ದೇವಸ್ಥಾನಕ್ಕೆ ರಾಜ ಗೋಪುರ ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿ ಕೈಗೊಂಡಿದ್ದರೂ ಮೇಲ್ಛಾವಣಿ ಮಾತ್ರ ನಿರ್ಮಾಣ ಮಾಡಿಲ್ಲ. ಇಂತಹ ವಿಶೇಷತೆ ಹೊಂದಿರುವ ಬಿಸಿಲು ಮಾರಮ್ಮ ದೇವಸ್ಥಾನದ ವಾರ್ಷಿಕ ಜಾತ್ರೆ ಮಹೋತ್ಸವ ಫೆ.24ರಂದು ವಿಜೃಂಭಣೆಯಿಂದ ಪ್ರತಿ ವರ್ಷದಂತೆ ನಡೆಯಲಿದೆ.

ಜಾತ್ರೆ ದಿನದಂದು ಬಿಸಿಲು ಮಾರಮ್ಮ ದೇವಸ್ಥಾನದಲ್ಲಿ ಬೆಳಗ್ಗೆ 4 ಗಂಟೆಗೆ ಹೋಮ ಸೇರಿದಂತೆ ಪೂಜಾ ಕೈಂಕರ್ಯ ಆರಂಭಗೊಳ್ಳಲಿವೆ. ಬೆಳಗ್ಗೆ 5 ಗಂಟೆ ನಂತರ ಭಕ್ತರು ಮಾರಮ್ಮನ ದರ್ಶನ ಪಡೆಯಲು ಹಾಗೂ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. 10.30ಕ್ಕೆ ತೊಣಚಿಕೊಪ್ಪಲು ಗ್ರಾಮದ ಹುಚ್ಚಮ್ಮತಾಯಿ ದೇವಸ್ಥಾನದಿಂದ ತಂಪಿನ ಮೆರವಣಿಗೆ ಹೊರಡಲಿದ್ದು, ಹೊಂಬಾಳೆ ಮತ್ತು ತಂಬಿಟ್ಟು ಹೊತ್ತ ಮಹಿಳೆಯರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಲಿದ್ದಾರೆ. ಬಿಸಿಲು ಮಾರಮ್ಮನ ದೇವಸ್ಥಾನಕ್ಕೆ ಮೆರವಣಿಗೆಯು ಮಧ್ಯಾಹ್ನ 2 ಗಂಟೆ ವೇಳೆಗೆ ಆಗಮಿಸಲಿದೆ. ಜೊತೆಗೆ ಬಿಸಿಲು ಮಾರಮ್ಮ ದೇವಸ್ಥಾನದಲ್ಲಿ ಭಕ್ತರು ದರ್ಶನ ಪಡೆದು, ವಿಶೇಷ ಪೂಜೆ ಸಹ ಸಲ್ಲಿಸುವುದು ನಡೆಯುತ್ತಿರುತ್ತದೆ.

ಜಾತ್ರೆಯ ಹಿಂದಿನ ದಿನವೇ ಹುಚ್ಚಮ್ಮ ತಾಯಿ ದೇವಸ್ಥಾನದಿಂದ ಬಿಸಿಲು ಮಾರಮ್ಮ ಉತ್ಸವ ಮೂರ್ತಿಯನ್ನು ತಂದು ಬಿಸಿಲು ಮಾರಮ್ಮ ದೇವಸ್ಥಾನ ಗರ್ಭಗುಡಿಯ ಉದ್ಭವಮೂರ್ತಿ ಮುಂದೆ ಪ್ರತಿಷ್ಠಾಪಿಸಿ ಪೂಜೆಗೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಜಾತ್ರೆ ದಿನದಂದು ರಾತ್ರಿ 8.30ಕ್ಕೆ ಉತ್ಸವ ಮೂರ್ತಿಯ ಪಲ್ಲಕ್ಕಿ ಉತ್ಸವ ನಡೆಯಲಿದೆ. ಬಳಿಕ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ಹುಚ್ಚಮ್ಮತಾಯಿ ದೇವಸ್ಥಾನದಲ್ಲಿ ಇರಿಸಲಾಗುತ್ತದೆ. ವರ್ಷಪೂರ್ತಿ ಇದೇ ದೇವಸ್ಥಾನದಲ್ಲಿ ಬಿಸಿಲು ಮಾರಮ್ಮನ ಉತ್ಸವ ಮೂರ್ತಿ ಇರಿಸುವ ಪದ್ಧತಿ ನಡೆದು ಬಂದಿದೆ.

ಫೆ.26ರ ಶಿವರಾತ್ರಿ ಹಬ್ಬದ ದಿನದಂದು ಊರಿನ ಎಲ್ಲಾ ದೇವಸ್ಥಾನಗಳ ದೇವರ ಉತ್ಸವ ಮೂರ್ತಿಗಳು ಹಾಗೂ ದೇವರ ಸಾಮಗ್ರಿಗಳನ್ನು ಪೆಟ್ಟಿಗೆಗಳಲ್ಲಿ ತುಂಬಿಕೊಂಡು ಪಾದಯಾತ್ರೆ ಮೂಲಕ ಕಾವೇರಿ ತೀರದ ಪವಿತ್ರ ಯಾತ್ರಾಸ್ಥಳವಾದ ಬಲಮುರಿಗೆ ಗ್ರಾಮದ ನೂರಾರು ಮಂದಿ ತೆರಳಲಿದ್ದಾರೆ. ಬೆಳಗ್ಗೆಯೇ ಹೊರಟು, ಅಲ್ಲಿ ಉತ್ಸವ ಮೂರ್ತಿಗಳು ಹಾಗೂ ದೇವರ ಸಾಮಗ್ರಿಗಳನ್ನು ಶುಚಿಗೊಳಿಸಿ ನಂತರ ಅವುಗಳಿಗೆ ವಿಶೇಷ ಪೂಜೆ ಮತ್ತು ಹೋಮ ನೆರವೇರಿಸಿ ಕಾಲ್ನಡಿಗೆ ಮೂಲಕವೇ ಅದೇ ದಿನ ಮಧ್ಯಾಹ್ನ 3 ಗಂಟೆ ವೇಳೆಗೆ ತೊಣಚಿಕೊಪ್ಪಲಿನ ಬಿಸಿಲು ಮಾರಮ್ಮ ದೇವಸ್ಥಾನಕ್ಕೆ ಮರಳಲಾಗುತ್ತದೆ. ಬಳಿಕ ಇದೇ ದೇವಸ್ಥಾನದ ಆವರಣದಲ್ಲಿ ಅನ್ನಸಂತರ್ಪಣೆಗೆ ಚಾಲನೆ ದೊರೆಯಲಿದೆ.


ಮಾರಮ್ಮನಿಗೆ ಕೊಡಗು ಕಿತ್ತಳೆ ನಂಟು!: ಬಿಸಿಲು ಮಾರಮ್ಮ ದೇವಸ್ಥಾನಕ್ಕೆ 350 ವರ್ಷಗಳಿಗೂ ಹೆಚ್ಚಿನ ಇತಿಹಾಸ ಇದೆ. ಕೊಡಗು ಜಿಲ್ಲೆಯಿಂದ ಬಿಸಿಲು ಮಾರಮ್ಮ ತಾಯಿ, ಕಿತ್ತಳೆಹಣ್ಣು ಗಾಡಿಯಲ್ಲಿ ತೊಣಚಿಕೊಪ್ಪಲಿಗೆ ಬಂದು ನೆಲೆಸಿರುವ ಪ್ರತೀತಿ ನಮ್ಮ ಹಿರಿಯರಿಂದಲೂ ಇದೆ ಎನ್ನುತ್ತಾರೆ ಶ್ರೀ ಬೀರೇಶ್ವರಸ್ವಾಮಿ ಟ್ರಸ್ಟ್ ಪದಾಧಿಕಾರಿಗಳು. ಕಿತ್ತಳೆಹಣ್ಣು ವ್ಯಾಪಾರಕ್ಕೆ ಬಂದ ವ್ಯಾಪಾರಸ್ಥರೊಂದಿಗೆ ಹಣ್ಣಿನ ಗಾಡಿಯಲ್ಲಿ ಬಿಸಲು ಮಾರಮ್ಮ ಇಲ್ಲಿಗೆ ಬಂದು, ಇದೇ ಸೂಕ್ತ ಸ್ಥಳವೆಂದು ಇಲ್ಲಿ ನೆಲೆಸಿದಳು ಎಂಬ ಪ್ರತೀತಿ ಇದೆ. ತೊಣಚಿಕೊಪ್ಪಲು ಗ್ರಾಮದ ಎಲ್ಲಾ ದೇವಸ್ಥಾನಗಳ ನಿರ್ವಹಣೆಯ ಹೊಣೆ ಈ ಟ್ರಸ್ಟ್‌ನದ್ದಾಗಿದೆ.

3 ಶತಮಾನಗಳ ಹಿಂದೆ ಬಿಸಿಲು ಮಾರಮ್ಮ ಇಲ್ಲಿ ಬಂದು ನೆಲೆಸಿದಾಗ, ಈ ಊರಿನ ಅಂದಿನ ಹಿರಿಯರಿಗೆ ಕನಸ್ಸಿನಲ್ಲಿ ಬಂದ ಮಾರಮ್ಮ, 'ನಿಮ್ಮ ಗ್ರಾಮ ದೇವತೆಯಾಗಿ ಇಲ್ಲಿ ನೆಲೆಸಿದ್ದೇನೆ' ಎಂದಳಂತೆ. ಅಂದಿನಿಂದ ಪ್ರತಿವರ್ಷ ಶಿವರಾತ್ರಿ ಹಬ್ಬದ ಹಿಂದಿನ ಸೋಮವಾರ ಜಾತ್ರೆ ಆಚರಿಸಿಕೊಂಡು ಬರಲಾಗುತ್ತಿದೆ. ಇಡೀ ಜಿಲ್ಲೆಯಿಂದ ಭಕ್ತಾದಿಗಳು ಬಂದು ವರ್ಷಪೂರ್ತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಾರೆ. ಸೋಮವಾರ, ಬುಧವಾರ ಮತ್ತು ಶನಿವಾರ ಹೊರತಾಗಿ ವಾರದ ಉಳಿದೆಲ್ಲಾ ದಿನಗಳಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಲಿದೆ. ಭಕ್ತಾದಿಗಳು ನೂರಾರು ಸಂಖ್ಯೆಯಲ್ಲಿ ಬರುತ್ತಾರೆ.

ಗ್ರಾಮ ದೇವತೆ: ಬಿಸಿಲು ಮಾರಮ್ಮನೇ ನಮ್ಮ ಗ್ರಾಮದ ದೇವತೆ ಎಂಬ ನಂಬಿಕೆ ನಮ್ಮ ಹಿರಿಯರಿಂದಲೇ ಬಂದಿದೆ. ಜಾತ್ರೆಯ ಪ್ರಯುಕ್ತ ಪ್ರತಿವರ್ಷ ಶಿವರಾತ್ರಿಯಂದು ಬಿಸಿಲು ಮಾರಮ್ಮ ದೇವಸ್ಥಾನದ ಆವರಣದಲ್ಲಿ ಸುಮಾರು 15 ಸಾವಿರ ಮಂದಿಗೆ ಅನ್ನಸಂತರ್ಪಣೆ ಮಾಡಲಾಗುತ್ತದೆ. ಈ ಬಾರಿ ಬಾತ್, ಅನ್ನ-ಸಾಂಬಾರು ಮತ್ತು ಸಿಹಿ ಒಳಗೊಂಡ ಊಟ ಇರಲಿದೆ ಎನ್ನುತ್ತಾರೆ ಟ್ರಸ್ಟ್ ಅಧ್ಯಕ್ಷ ಸಿ.ಜವರಪ್ಪ, ಕಾರ್ಯದರ್ಶಿ ಜೆ.ಕಾಳಪ್ಪ, ಖಜಾಂಚಿ ಬಿ.ರವಿ.

ಗರ್ಭಗುಡಿ ಮೇಲೆ ಸಿದ್ಧಗೊಂಡಿತ್ತು ಪೂರ್ಣಯ್ಯ ನಾಲೆಯ ನೀಲನಕ್ಷೆ...!


ಮಾರಮ್ಮನ ಗರ್ಭಗುಡಿ ಮೇಲೆಯೇ ಪೂರ್ಣಯ್ಯ ನಾಲೆಗೆ ನಕ್ಷೆ ಸಿದ್ಧಪಡಿಸಲಾಗಿತ್ತು. ಆಗ ನಕ್ಷೆ ಸಿದ್ಧಪಡಿಸಿದ್ದ ಇಂಜಿನಿಯರ್ ಕನಸ್ಸಿನಲ್ಲಿ ಆ ಜಾಗ ಬಿಟ್ಟು ಬೇರೆಡೆ ನಾಲೆ ನಕ್ಷೆ ಮಾಡುವಂತೆ ಮಾರಮ್ಮ ಹೇಳಿದ್ದಳು ಎಂಬ ನಂಬಿಕೆ ಇದೆ. ಇದು ನಮ್ಮ ಹಿರಿಯರು ಹೇಳಿದ್ದು, ತೊಣಚಿಕೊಪ್ಪಲು ಗ್ರಾಮ ಸ್ಥಾಪನೆಯಾದ ಇತಿಹಾಸದ ಬಗ್ಗೆ ನಿಖರ ಮಾಹಿತಿ ಇಲ್ಲ. ಬಿಸಿಲು ಮಾರಮ್ಮನ ಉದ್ಭವಮೂರ್ತಿ ಇರುವ ಗರ್ಭಗುಡಿಯಲ್ಲಿ ಯಾವುದೇ ಮೇಲ್ಛಾವಣಿ ನಿರ್ಮಿಸಿಲ್ಲ. ಮೇಲ್ಛಾವಣಿ ನಿರ್ಮಿಸಬಾರದೆಂಬುದು ನಮ್ಮ ಪೂರ್ವಿಕರ ನಂಬಿಕೆ. ಅಂತೆಯೇ ನಾವು ನಡೆದುಕೊಳ್ಳುತ್ತಿದ್ದು, ರಾಜ ಗೋಪುರ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ದೇವಸ್ಥಾನ ಆವರಣದಲ್ಲಿ ನಡೆಸಿದ್ದೇವೆ. ಆದರೆ ಮೇಲ್ಛಾವಣಿ ಮಾತ್ರ ನಿರ್ಮಿಸಿಲ್ಲ ಎನ್ನುತ್ತಾರೆ ಟ್ರಸ್ಟ್ ಅಧ್ಯಕ್ಷ ಸಿ.ಜವರಪ್ಪ.



ಬಿಸಿಲು ಮಾರಮ್ಮ ದೇವಸ್ಥಾನದ ಮೇಲ್ಛಾವಣಿ ಇಲ್ಲದ ಗುರ್ಭಗುಡಿಯಲ್ಲಿ ಮಾರಮ್ಮನ ಉದ್ಭವಮೂರ್ತಿ ಇರುವುದನ್ನು ಚಿತ್ರದಲ್ಲಿ ಕಾಣಬಹುದು.

ಜಾತ್ರೆಯಲ್ಲಿ ಮಾಂಸಾಹಾರ ನಿಷಿದ್ಧ

ಸಾಮಾನ್ಯವಾಗಿ ಮಾರಮ್ಮನ ಹಬ್ಬಗಳು ಎಂದ ಕೂಡಲೇ ಮಾಂಸಾಹಾರ ಕಣ್ಮುಂದೆ ಬರುತ್ತದೆ. ಆದರೆ ಬಿಸಿಲು ಮಾರಮ್ಮನ ಜಾತ್ರೆಯಲ್ಲಿ ಮಾಂಸಾಹಾರಕ್ಕೆ ಅವಕಾಶವಿಲ್ಲ. ಅಂದು ಇಲ್ಲಿ ಸಂಪೂರ್ಣ ಸಸ್ಯಾಹಾರ. ಜಾತ್ರೆ ಹಿನ್ನೆಲೆಯಲ್ಲಿ ಮಾರಮ್ಮನ ದೇವಸ್ಥಾನದ ರಾಜಗೋಪುರ ಸೇರಿದಂತೆ ಇಡೀ ದೇವಸ್ಥಾನ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದೆ. ಜಾತ್ರೆಗೆ ತಿಂಗಳು ಇರುವಾಗಲೇ ಗ್ರಾಮಸ್ಥರು ತಮ್ಮ ಮನೆಗಳನ್ನು ಶುಚಿ ಮಾಡಿಕೊಳ್ಳುತ್ತಾರೆ. ಅತ್ಯಂತ ಮಡಿಯಿಂದ ಜಾತ್ರೆ ಆಚರಣೆಯನ್ನು ಗ್ರಾಮಸ್ಥರು ಮಾಡುತ್ತಾರೆ. ಜಾತ್ರೆ ದಿನದಂದು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರುತ್ತಾರೆ. ಬೇರೆ ಬೇರೆ ಊರುಗಳಿಂದಲೂ ನಂಟರಿಷ್ಟರು ಬರುತ್ತಾರೆ. ಬದಲಾದ ಕಾಲಘಟ್ಟದಲ್ಲಿ ತೊಣಚಿಕೊಪ್ಪಲಿಗೆ ಗ್ರಾಮದ ಸ್ವರೂಪ ಇಲ್ಲವಾದರೂ ಮೂಲತಃ ಇರುವ ಗ್ರಾಮಸ್ಥರು ಶ್ರದ್ಧಾಭಕ್ತಿಯಿಂದ ಜಾತ್ರೆ ಸೇರಿದಂತೆ ದೇವಸ್ಥಾನದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಬಿಸಿಲು ಮಾರಮ್ಮ ಇಷ್ಟಾರ್ಥಗಳನ್ನು ಈಡೇರಿಸುತ್ತಾಳೆ ಎಂಬ ನಂಬಿಕೆ ಹೊಂದಿರುವ ಭಕ್ತರು, ದೇವಸ್ಥಾನಕ್ಕೆ ಬಂದು ನಿತ್ಯ ಪೂಜೆ ಸಲ್ಲಿಸುತ್ತಾರೆ.



ವಾರಭವಿಷ್ಯ

23.02.2025 ರಿಂದ 01.03.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕುಂಭ, ಚಂದ್ರ-ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ-ಮಿಥುನ, ಬುಧ-ಕುಂಭ, ಮೀನ, ಗುರು-ವೃಷಭ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಮನೋವಾಂಛಿತ ಕೆಲಸಗಳು ಸಾಕಾರಗೊಳ್ಳುವಲ್ಲಿ ಅನುಭವಿಗಳ ಮಾರ್ಗದರ್ಶನ ದೊರಕುವುದು. ಶುಭ ಗುರುವಿನ ಪರಿಣಾಮ ಭಾಗ್ಯದಲ್ಲಿ ವೃದ್ಧಿ ವಿದ್ಯಾರ್ಥಿಗಳಿಗೆ ಪರೀಕ್ಷೆ, ಸಂದರ್ಶನಗಳಲ್ಲಿ ಸಫಲತೆ. ಮಕ್ಕಳ ಶ್ರೇಯಸ್ಸಿನಿಂದ ಮಾತಾ-ಪಿತರಿಗೆ ಹರುಷ. ಮನೋರಂಜನಾ ಹಾಗೂ ಪ್ರಸಾಧನ ವಸ್ತು ವೆಚ್ಚಗಳು ಹೆಚ್ಚುವುದು. ಸ್ತ್ರೀಯರಿಗೆ ರಕ್ತದೋಷ ಕಾಡುವುದು.
ಶ್ರೀ ಗಣಪತಿ ಸ್ತುತಿ. ಶುಭ ಸಂಖ್ಯೆ-1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವ್ಯಾಪಾರ-ವ್ಯವಹಾರಗಳು ಸಾಧಾರಣವಾಗಿ ನಡೆಯುವುದು. ನೆರೆಹೊರೆಯಲ್ಲಿ ಜಗಳ, ವಿವಾದಗಳಿಂದ ಮನಃಶಾಂತಿಗೆ ಭಂಗ. ಎಣ್ಣೆ ಕಾಳು, ದ್ವಿದಳ ಧಾನ್ಯ ವ್ಯಾಪಾರಗಳು ಉತ್ತಮ ಗತಿಯಲ್ಲಿ ಸಾಗಿ ಧನಲಾಭ. ವಾರದ ಉತ್ತರಾರ್ಧದಲ್ಲಿ ಗೃಹ ಕೃತ್ಯಗಳಿಗೆ ಮಿತ್ರ ಜನರ ಸಹಾಯಹಸ್ತ ದೊರೆಯುವುದು. ಸಾಲಭಾರ ಕಡಿಮೆ ಆಗುವುದು. ಆಯುಧ, ಶಸ್ತ್ರಗಳಿಂದ ತೊಂದರೆ ಉಂಟಾದೀತು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-9

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಈ ವಾರ ನಿಮಗೆ ಮಿಶ್ರ ಫಲದ ವಾರ. 'ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ; ಎಂದು ಮುಂದೆ ಸಾಗಿ. ಮಹಿಳೆಯೊಬ್ಬರ ಸಹಾಯದಿಂದ ನಿಮ್ಮ ವೈಯಕ್ತಿಕ ಸಮಸ್ಯೆ ಪರಿಹಾರವಾಗುವುದು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆ ಅನುಭವಿಸಬೇಕಾದೀತು. ವಾರದ ಕಡೆಗೆ ಅನಿರೀಕ್ಷಿತವಾಗಿ ಧನಾಗಮವಾಗುವುದು.
ಶ್ರೀ ಮನ್ನಾರಾಯಣ ನಾಮಸ್ತುತಿ. ಶುಭ ಸಂಖ್ಯೆ-3

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಗುರು ಲಾಭಸ್ಥಾನದಲ್ಲಿ ಗೋಚರಿಸುವ ಪರಿಣಾಮ ಕೈಗೆತ್ತಿಕೊಂಡ ಕೆಲಸಗಳಲ್ಲಿ ಉಂಟಾಗಿದ್ದ ಅಡತಡೆಗಳು ನಿವಾರಣೆ ಆಗುತ್ತದೆ. ಪ್ರತಿಷ್ಠಿತ ವ್ಯಕ್ತಿಗಳ ಪರಿಚಯವಾಗುತ್ತದೆ. ಮನೆಯಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳು ನಡೆಯುವ ಸಾಧ್ಯತೆ ಇದೆ. ಲಘು ಕೈಗಾರಿಕೆಯವರಿಗೆ ಅನೂಕೂಲಕರ ಸಮಯ. ಋಣಬಾಧೆಗಳಿಂದ ಮುಕ್ತರಾಗುವಿರಿ. ವಿದ್ಯುತ್ ಯಂತ್ರಗಳ ಮೇಲೆ ಕೆಲಸ ಮಾಡುವಾಗ ಜಾಗೃತರಾಗಿರಿ.
ಶ್ರೀ ದುರ್ಗಾ ಪರಮೇಶ್ವರಿ ಅರ್ಚನೆ. ಶುಭ ಸಂಖ್ಯೆ-5

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಶುಭ ಕಾರ್ಯ ಯತ್ನಗಳಲ್ಲಿ ಸಫಲತೆ. ಹಿರಿಯರ ಬುದ್ಧಿವಂತಿಕೆಗೆ ಬೆಲೆ ಇರಲಿ. ವ್ಯಾಪಾರ, ವ್ಯವಹಾರಗಳು ಚುರುಕಾಗಿ ನಡೆಯುವುದು. ಶಿಕ್ಷಣ ಕ್ಷೇತ್ರದವರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ಸಪ್ತಮ ಶನಿಯಿಂದ ಸಂಬಂಧಗಳು ಕೆಡುವುದು. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ. ಸ್ತ್ರೀ ಮೂಲಕ ಕಾರ್ಯಸಿದ್ಧಿ. ಆರೋಗ್ಯದಲ್ಲಿ ವ್ಯತ್ಯಯ ಉಂಟಾದೀತು. ವಾಸಸ್ಥಳ ಬದಲಾವಣೆಯಿಂದ ಅನಾನುಕೂಲಗಳು.
ಶ್ರೀ ಸೂರ್ಯ ಅರ್ಚನೆ. ಶುಭ ಸಂಖ್ಯೆ-2

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದಾರಂಭಕ್ಕೆ ಧನ ಸಂಚಯ ಶುಭ ವಾರ್ತೆ ಬರುವುದು. ನಿಮ್ಮ ಹಿತಚಿಂತಕರೊಂದಿಗೆ ಸಮಾಗಮ. ನೆರೆಹೊರೆಯಲ್ಲಿ ಸೌಹಾರ್ದ ವೃದ್ಧಿಯಿಂದ ಕುಟುಂಬಕ್ಕೆ ಪ್ರಯೋಜನಗಳು. ಮನೆಯಲ್ಲಿ ಮಂಗಳವಾದ್ಯ ಮೊಳಗೀತು. ಸಮಯಕ್ಕೆ ಸರಿಯಾಗಿ ವರ್ತಿಸಿ ಆರ್ಥಿಕ ಲಾಭವನ್ನು ಹೊಂದುವಿರಿ. ನಿಮ್ಮ ಐಕ್ಯೂ ಉತ್ತಮ ಮಟ್ಟವಾಗಿದ್ದು ಸಂದರ್ಶನದಲ್ಲಿ ಸಫಲತೆಯನ್ನು ಹೊಂದುವಿರಿ. ಯಾರೊಡನೆಯೂ ದುಡುಕು ಮಾತು ಬೇಡ.
ಶ್ರೀ ಅಶ್ವತ್ಥ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಪೂರ್ವಾರ್ಧದಲ್ಲಿ ಎಲ್ಲವೂ ಚೆನ್ನಾಗಿ ನಡೆಯುವುದು. ಧನ, ಕನಕ, ದುಬಾರಿ ವಸ್ತು ಹೊಂದುವ ಅವಕಾಶವಿದೆ. ಚಂದ್ರಗ್ರಹ ಪ್ರಭಾವದಿಂದ ಗೌರವಾನ್ವಿತ ವ್ಯಕ್ತಿಗಳ ಭೇಟಿ ಹಾಗೂ ಮಾರ್ಗದರ್ಶನ ಪ್ರಾಪ್ತಿ. ವಾರದ ಉತ್ತರಾರ್ಧದಲ್ಲಿ ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ಮುಟ್ಟುವುದು. ಇದಕ್ಕೆ ದುರಾಸೆಯೇ ಕಾರಣ. 'ಹಂಗಿನ ಹಾಲಿಗಿಂತ ಸ್ವಂತದ ಅಂಬಲಿ ಲೇಸು' ಎಂಬ ಗಾದೆಯನ್ನು ಗ್ರಹಿಸಿ ಮುಂದುವರೆಯಿರಿ.
ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ-7

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ
ಸಪ್ತಾಹದ ಆರಂಭಕ್ಕೆ ಉಂಟಾಗುವ ಗಜ-ಕೇಸರಿ ಯೋಗದಿಂದ ಕೈಗೊಂಡ ಮಹತ್ವದ ಕೆಲಸಗಳಲ್ಲಿ ಯಶಸ್ಸು. ಹಿಂದೆ ಮಾಡಿದ್ದ ಪುಣ್ಯದ ಕೆಲಸಗಳು ಈಗ ಫಲಿಸಲಿದೆ. ಮನೆಯಲ್ಲಿ ದೇವತಾ ಕಾರ್ಯಗಳು ನಡೆಯುವುದರ ಜೊತೆಗೆ ಮನೆ ಮುಂದೆ ಹಸಿರು ಚಪ್ಪರ ಹಾಕುವ ಯೋಗ ಕೂಡಿ ಬರುವ ಸಾಧ್ಯತೆ ಇದೆ. ಮಠ-ಮಾನ್ಯಗಳ ಭೇಟಿಯಿಂದ ಮನಸ್ಸು ಪುಳಕಿತವಾಗುವುದು. ಸರ್ಕಾರಿ ನೌಕರರು ಅವ್ಯವಹಾರಗಳಿಗೆ ಕೈ ಹಾಕಿ ತೊಂದರೆಗೆ ಸಿಲುಕುವರು. ಶ್ರೀ ನರಸಿಂಹ ಸ್ತುತಿ. ಶುಭ ಸಂಖ್ಯೆ-2

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕೆ ಅಧಿಕಾರಿಗಳಿಂದ ಸಹಕಾರ ದೊರಕಿದರೂ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು. ಇಂಜಿನಿಯರ್‌ಗಳಿಗೆ ಬೇಡಿಕೆ ಹೆಚ್ಚಾಗುವುದು. ವಾರ ಮಧ್ಯೆ ಮಾತುಕತೆಯಿಂದ ಕಾರ್ಯ ಸಾಧನೆ. ಎಣ್ಣೆಕಾಳು, ಬೀಜಗಳ ವ್ಯಾಪಾರ ಚೆನ್ನಾಗಿ ನಡೆಯುವುದು. ರಾಹು ಗ್ರಹ ಅಶುಭವಿರುವ ಕಾರಣ ನೆರೆಹೊರೆಯಲ್ಲಿ ತಂಟೆ ತಕರಾರುಗಳು ಉಂಟಾಗುವುದು. ಸಂಯಮದಿಂದ ನಿಭಾಯಿಸಿ.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-4


ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಸಾಫ್ಟ್‌ವೇರ್ ವೃತ್ತಿಪರರಿಗೆ ಸ್ಥಳ ಬದಲಾವಣೆಯ ಜೊತೆ ವರಮಾನದಲ್ಲಿ ಹೆಚ್ಚಳವಾಗುವುದು. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ಸುವರ್ಣ-ರಜತ ವ್ಯಾಪಾರ ಹೆಚ್ಚಳ, ಆದಾಯಕ್ಕೆ ಕೊರತೆ ಇರದು. ವಾರದ ಕಡೆಗೆ, ಧನ, ವಸ್ತ್ರಾಭರಣ, ಸ್ತ್ರೀ ಸುಖಗಳು ಪ್ರಾಪ್ತಿ. ಪಿತೃ ವರ್ಗದವರಿಂದ ಸ್ಥಿರಾಸ್ತಿ ದೊರಕುವ ಸಂಭವ. ಸಂಧಿವಾತ, ಮೊಣಕಾಲು ನೋವು ಉಂಟಾದೀತು.
ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದ ಆದಿಗೆ ಚಂದ್ರಗ್ರಹ ಸಂಚಾರ ಶುಭವಿದ್ದು, ಆರ್ಥಿಕ ಸ್ಥಿತಿಯಲ್ಲಿ ಮುನ್ನಡೆಯನ್ನು ಸಾಧಿಸುವಿರಿ. ನಿರೀಕ್ಷಿತ ಹಣ ಕೈ ಸೇರುವುದು. ಪಶು ಸಂಗೋಪನೆಯಿಂದ ಹಣ ಗಳಿಕೆ, ಭೋಜನ, ಶಯನ ಸುಖಗಳೂ ಉಂಟು. ಕೈಗೆ ಬಂದ ಹಣ ನೀರಿನಂತೆ ಪೋಲಾಗುವುದು. ಶೇರು ವ್ಯವಹಾರಗಳು ಆಶಾದಾಯಕವಾಗಿರದು. ಸಟ್ಟಾ-ಜೂಜುಗಳ ಲಾಭ ತರದು. ಆರೋಗ್ಯದ ಬಗ್ಗೆ ನಿರಾಕರಣೆ ಬೇಡ.
ಶ್ರೀ ವೆಂಕಟೇಶ್ವರ ಪ್ರಾರ್ಥನೆ. ಶುಭ ಸಂಖ್ಯೆ-5

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
'ಸರಳ ಜೀವನವೇ ಸುಖೀ ಜೀವನ'. ಇಲ್ಲದ ಲಂಪಟಗಳನ್ನು ನೀವಾಗಿ ಆಹ್ವಾನಿಸಿಕೊಳ್ಳುವಿರಿ. ಬಂದ ಹಣ ನೀರಿನಂತೆ ಪೋಲಾಗುವುದು. ಗುರು-ಹಿರಿಯರ ಭೇಟಿಯಿಂದ ಪ್ರೇರಣೆ ಉತ್ಸಾಹ ದೊರಕುವುದು. ಹಾಗೂ ಪ್ರತಿಕೂಲ ಪರಿಣಾಮಗಳು ನಿವಾರಣೆ ಆಗುವುದು. ವಾರಾಂತ್ಯಕ್ಕೆ ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಮನೆ ಮಂದಿಯೊಂದಿಗೆ ತೀರ್ಥಕ್ಷೇತ್ರ ಭೇಟಿಯಿಂದ ಮನದ ಬೇಗುದಿ ನಿವಾರಣೆಯಾಗುವುದು. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ-3

ಮಕ್ಕಳ ಚಿತ್ರಕಥೆ
'ಆ ಎರಡು ವಜ್ರಗಳು ಯಾವುವು...?'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಮ್ಮೆ ಊರ ಪ್ರಮುಖನೊಬ್ಬ ಜಾತ್ರೆಗೆ ಹೋಗಿ ತನಗೆ ಇಷ್ಟವಾದ ಒಂದು ಒಂಟೆಯನ್ನು ಖರೀದಿಸಿದ. ಮನೆಗೆ ಹಿಂದಿರುಗಿ ತನಗೆ ತೀವ್ರ ವಿಶ್ವಾಸಪಾತ್ರನಾದ ನೌಕರನಿಗೆ ಒಂಟೆಯನ್ನು ತೋರಿಸಿದನು. ನೌಕರನೂ ಕೂಡ ಒಂಟೆಯನ್ನು ನೋಡಿ ಬಹಳ ಸಂತಸಪಟ್ಟ. ಸ್ವಲ್ಪ ಸಮಯದ ನಂತರ ಒಂಟೆಯ ಬೆನ್ನಿನ ಮೇಲಿದ್ದ ಆಸನ ಹಾಗು ಇತರ ಬಟ್ಟೆಗಳನ್ನು ಸ್ವಚ್ಛಗೊಳಿಸಲು ತೆಗೆಯಲಾರಂಭಿಸಿದ.




ಅಲ್ಲಿ ಅದರ ಬೆನ್ನಿಗೆ ತೂಗುಹಾಕಿದ್ದ ಒಂದು ಸಣ್ಣ ಚೀಲ ಕಂಡಿತು. ಅದನ್ನು ತೆಗೆದು ನೋಡಿದರೆ, ಅದರ ಭರ್ತಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ವಜ್ರಗಳಿದ್ದವು. ಇದರಿಂದ ರೋಮಾಂಚನಗೊಂಡ ನೌಕರ ತನ್ನ ಧಣಿಯತ್ತ ಓಡಿಹೋಗಿ "ಒಂಟೆಯ ಬೆನ್ನಿನಲ್ಲಿ ವಜ್ರಗಳು ತುಂಬಿದ ಚೀಲ ಸಿಕ್ಕಿದೆ. ನೀವು ಎಂತಹ ಅದೃಷ್ಟವಂತರು, ತೆಗೆದುಕೊಳ್ಳಿ" ಎಂದು ಹೇಳಿ ಅಲ್ಲೇ ಇದ್ದ ಒಂದು ಮೇಜಿನ ಮೇಲೆ ಹರಡಿದ.




ಇದನ್ನು ನೋಡಿದ ಊರ ಪ್ರಮುಖ ದಿಗ್ಭ್ರಮೆಗೊಂಡು "ಇದು ಒಂಟೆ ಮಾರುವವನದಿರಬೇಕು. ಈ ಚೀಲವನ್ನು ಒಂಟೆಗೆ ತೂಗು ಹಾಕಿ ಮರೆತಿರಬಹುದು.. ನಾನೀಗಲೇ ಹಿಂದಿರುಗಿಸಲು ಹೊರಟೆ..!" ಎಂದೆನ್ನುತ್ತಾ ಸಿದ್ಧನಾಗತೊಡಗಿದ. ಆ ನೌಕರನು ತನ್ನ ಧಣಿಯನ್ನು ತಡೆದು ನಿಲ್ಲಿಸಿ, "ಇದರಲ್ಲಿ ವಜ್ರಗಳಿರುವ ವಿಷಯ ನಮ್ಮಿಬ್ಬರ ಹೊರತು ಬೇರೆ ಯಾರಿಗೂ ಗೊತ್ತಿಲ್ಲ ನೀವೇ ಇಟ್ಟುಕೊಳ್ಳಿ" ಎಂದು ಒತ್ತಾಯಿಸಿದ. ಇದಕ್ಕೆ ಒಪ್ಪದ ಆ ಊರ ಪ್ರಮುಖ ಚೀಲವನ್ನು ಹಿಂದಿರುಗಿಸಲು ಹೊರಟೇಬಿಟ್ಟ



ತನಗೆ ಒಂಟೆ ನೀಡಿದ ವ್ಯಕ್ತಿಯನ್ನು ಆ ಜಾತ್ರೆಯಲ್ಲೇ ಕಷ್ಟಪಟ್ಟು ಹುಡುಕಿ ಅವನಿಗೆ ಆ ವಜ್ರ ತುಂಬಿದ ಚೀಲ ಹಿಂದಿರುಗಿಸಿದ. ಚೀಲ ಕಾಣೆಯಾದ ಬಗ್ಗೆ ತೀವ್ರ ಕಳವಳಗೊಂಡಿದ್ದ ಆ ಮಾರಾಟಗಾರ ಆನಂದಪಟ್ಟ. ಊರ ಪ್ರಮುಖನ ಪ್ರಾಮಾಣಿಕತೆಗೆ ಮೆಚ್ಚಿ ಹೊಗಳುತ್ತಾ "ಈ ಚೀಲದಲ್ಲಿದಲ್ಲಿರುವ ವಜ್ರಗಳಲ್ಲಿ ನಿಮಗೆ ಇಷ್ಟವಾದ ಒಂದನ್ನು ಆಯ್ದುಕೊಳ್ಳಿ, ಇದು ನಾನು ನಿಮಗೆ ಮೆಚ್ಚುಗೆಯಿಂದ ಕೊಡುತ್ತಿರವುದು" ಎಂದ. ಊರ ಪ್ರಮುಖ ಎಷ್ಟೇ ನಿರಾಕರಿಸಿದರೂ ಆ ಮಾರಾಟಗಾರ ತನ್ನ ಹಠಬಿಡಲಿಲ್ಲ.



ಕಡೆಗೆ ಪ್ರಮುಖನು "ನಾನು ಈಗಾಗಲೇ ನಿಮ್ಮ ಚೀಲದಿಂದ ಎರಡು ಅತ್ಯಮೂಲ್ಯವಾದ ವಜ್ರಗಳನ್ನು ತೆಗೆದುಕೊಂಡುಬಿಟ್ಟಿದ್ದೇನೆ..!" ಎಂದ. ತಕ್ಷಣ ಮಾರಾಟಗಾರನಿಗೆ ಅಸಾಧ್ಯಕೋಪ ಬಂದು ಆ ಪ್ರಮುಖನನ್ನು ನಿಂದಿಸಿ, ಬೈಯುತ್ತಾ ತನ್ನ ಚೀಲದಲ್ಲಿದ್ದ ವಜ್ರಗಳನ್ನು ಲೆಕ್ಕಹಾಕಿ ನೋಡಿದ.



ಏನಾಶ್ಚರ್ಯ, ಅಷ್ಟೂ ವಜ್ರಗಳ ಸಂಖ್ಯೆ ಸರಿಯಾಗಿಯೇ ಇದ್ದವು. ಇದನ್ನು ನೋಡಿ ನಕ್ಕ ಊರ ಪ್ರಮುಖ "ನಾನೀಗ ನಿಮ್ಮ ಚೀಲದಿಂದ ತೆಗೆದುಕೊಂಡಿರುವುದು ಪ್ರಾಮಾಣಿಕತೆ ಮತ್ತು ಆತ್ಮ ಸಾಕ್ಷಿ ಎಂಬ ಎಂದಿಗೂ ಬೆಲೆಕಟ್ಟಲಾರದ ವಜ್ರಗಳನ್ನ ಮಾತ್ರ", ಎಂದು ಹೇಳಿ ಹೊರಟೇಬಿಟ್ಟ. ಆ ಒಂಟೆ ಮಾರಾಟಗಾರ ಮತ್ತೊಮ್ಮೆ ಆತನಿಗೆ ಅಪಾರ ಗೌರವದಿಂದ ಕೈಮುಗಿಯುತ್ತಾ ನಿಂತಿದ್ದ.

ನೀತಿ: ಯಾರೋ ಪುಣ್ಯಾತ್ಮರು ಹೇಳಿದ ಮಾತು, "ಯಾರಾದರು ನಿಮ್ಮ ಬಳಿ ಖಾಲಿ ತಟ್ಟೆ ಹಿಡಿದು ಬಂದರೆ ಅವರನ್ನು ನೀವು ಏನನ್ನೋ ಬೇಡಲು ಬಂದಿದ್ದಾನೆ ಎಂದು ತಿಳಿಯಬೇಡಿ. ಆತ ತನ್ನ ಬಳಿ ಇದ್ದ ಎಲ್ಲಾ ವಸ್ತುಗಳನ್ನು ದಾನಮಾಡಿಯೂ ಬಂದಿರಬಹುದು. ಆದ್ದರಿಂದ ಮಕ್ಕಳೇ, ಹಣದಿಂದ ಬಹಳಷ್ಟು ವಸ್ತುಗಳನ್ನು ಖರೀದಿಸಬಹುದು ಆದರೆ ಹಣದಿಂದಲೇ ಎಲ್ಲವನ್ನೂ ಕೊಳ್ಳಲು ಸಾಧ್ಯವಿಲ್ಲ. ಜೀವನದಲ್ಲಿ ಪ್ರಾಮಾಣಿಕತೆ ಮತ್ತು ಆತ್ಮಸಾಕ್ಷಿಯನ್ನು ಎಂದಿಗೂ ಬಿಡಬಾರದು. ಹಾಗೆಯೇ ಇವುಗಳಿಂದ ನಮ್ಮ ಮನಸ್ಸಿಗೆ ಹೆಚ್ಚು ಸಂತೋಷ ಹಾಗೂ ತೃಪ್ತಿ ಸಿಗುತ್ತದೆ.

ಮೈಸೂರು ಮಿತ್ರ

ರೈತರು ತಮ್ಮನ್ನು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವಲ್ಲಿ

ಸಹಕಾರ ಸಂಘದ ಸಿಇಓ, ಸಿಬ್ಬಂದಿ ಪಾತ್ರ ಮಹತ್ವದ್ದು

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅಭಿಪ್ರಾಯ



ಡೈರಿಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸಿಬ್ಬಂದಿಗಳಿಗೆ ಚೆಕ್ ವಿತರಿಸಿ, ಸನ್ಮಾನಿಸಲಾಯಿತು

ತಿ.ನರಸೀಪುರ, ಫೆ.22– ರೈತರು ತಮ್ಮನ್ನು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಾಹಕರು ಹಾಗೂ ಸಿಬ್ಬಂದಿ ಪಾತ್ರ ಮಹತ್ವದ್ದಾಗಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅಭಿಪ್ರಾಯಪಟ್ಟರು.

ಪಟ್ಟಣದ ಎಪಿಎಂಸಿ ಆವರಣದ ಮೈಮುಲ್ ಉಪ ಕಚೇರಿಯಲ್ಲಿ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಹಕಾರ ಸಂಘದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸಿಬ್ಬಂದಿಗಳಿಗೆ ಚೆಕ್ ವಿತರಣೆ ಹಾಗೂ ಆಹಾರ ಸುರಕ್ಷತಾ ಮತ್ತು ಭದ್ರತಾ ಕಾಯ್ದೆಯಡಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೈನುಗಾರಿಕೆಗೆ ಪ್ರೋತ್ಸಾಹ ನೀಡುವ ಕೆಲಸ ಮಾಡಿದರೆ ಮಾತ್ರ ಹೈನುಗಾರಿಕೆ ಉಳಿಯಲು ಸಾಧ್ಯ. ಇಲ್ಲವಾದಲ್ಲಿ ಸರಿಯಾದ ಪ್ರತಿಫಲ ಸಿಗದೆ ಹೈನುಗಾರಿಕೆಯತ್ತ ಒಲವು ಕಡಿಮೆಯಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಹಕಾರ ಕಾಯ್ದೆಗೆ ಅನೇಕ ತಿದ್ದುಪಡಿಗಳು ಆಗುತ್ತಿದ್ದು, ಕಾಯ್ದೆ ಕಾನೂನಿನ ಬದಲಾವಣೆ ಅರಿವನ್ನು ಪಡೆದುಕೊಳ್ಳಬೇಕು. ಸಹಕಾರ ಸಂಸ್ಥೆಗಳ ಬೈಲಾದಲ್ಲಿರುವ ವಿಚಾರಗಳನ್ನು ಸಮಗ್ರವಾಗಿ ಓದಿ ಮಾಹಿತಿ ಪಡೆದುಕೊಳ್ಳಬೇಕು ಎಂದರು.


ಸರ್ಕಾರಿ ನೌಕರರಿಗೆ ನೀಡುವ ಸೌಲಭ್ಯದಂತೆ ನಮ್ಮ ಒಕ್ಕೂಟದ ಸದಸ್ಯರಿಗೂ ಸೌಲಭ್ಯ ನೀಡುತ್ತಿದ್ದೇವೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಹೈನುಗಾರಿಕೆಯನ್ನು ಲಾಭದಾಯಕವಾಗಿ ಬಳಸಲು ಎಲ್ಲಾ ಉತ್ಪನ್ನಗಳನ್ನು ರಿಯಾಯಿತಿ ದರದಲ್ಲಿ ಸದಸ್ಯರಿಗೆ ನೀಡುತ್ತಾ ಒಕ್ಕೂಟ ರೈತರಿಗೆ ಸಹಕಾರ ನೀಡುತ್ತಾ ಬಂದಿದೆ ಎಂದರು.

ಎಫ್‌ಎಸ್‌ಎಸ್‌ಎಐ ಅಧಿಕಾರಿ ರಶ್ಮಿ ಮಾತನಾಡಿ ಬೇಕರಿ, ಹೋಟೆಲ್, ಪ್ರಾವಿಷನ್ ಸ್ಟೋರ್, ಟೀ ಸ್ಟಾಲ್ ಹಾಗೂ ಜನರು ತಿನ್ನುವ ಯಾವುದೇ ಪದಾರ್ಥಗಳನ್ನು ಮಾರಾಟ ಮಾಡಬೇಕಾದರೆ ಕಡ್ಡಾಯವಾಗಿ FSSAI ಲೈಸನ್ಸ್ ಅನ್ನು ಪಡೆಯಬೇಕು. ಹಾಗೂ ಮಾರಾಟ ಮಾಡುವುದಕ್ಕೂ ಮುಂಚಿತವಾಗಿ ಆಹಾರದ ಬಗ್ಗೆ ತಿಳಿದುಕೊಳ್ಳಬೇಕು. ಲೈಸೆನ್ಸ್ ಪಡೆಯದೇ ಮಾರಾಟ ಮಾಡಿ ಹೆಚ್ಚು ಕಡಿಮೆ ಆದರೆ ನಿಮ್ಮ ಮೇಲೆ ಕಾನೂನು ಕ್ರಮ ಜರುಗಿಸಲು ಅವಕಾಶಗಳಿರುವುದರಿಂದ ಜಾಗ್ರತೆ ವಹಿಸಿ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ಮಾರಾಟ ಮಾಡಬೇಕಿದೆ ಎಂದರು.

ಮೈಮೂಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮಾತನಾಡಿ, ಇದು ಒಂದು ಉತ್ತಮ ಕಾರ್ಯಕ್ರಮ. ಜನರಿಗೆ ಉತ್ತಮ ಆಹಾರ ನೀಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ. ಈ ತರಬೇತಿ ಎಲ್ಲರಿಗೂ ಬೇಕು. ಎಲ್ಲರೂ ಕಡ್ಡಾಯವಾಗಿ FSSAI ಲೈಸನ್ಸ್ ಅನ್ನು ಪಡೆಯಬೇಕಾಗುತ್ತದೆ. ಹಾಗೂ ಜನರಿಗೆ ಗುಣಮಟ್ಟದ ಆಹಾರ ಒದಗಿಸಬೇಕಾಗುತ್ತದೆ. ಆದ್ದರಿಂದ ತರಬೇತಿ ಮುಖ್ಯ ಎಂದು ತಿಳಿಸಿದರು.

ಮೈಮುಲ್ ತಾಲೂಕು ಮೇಲ್ವಿಚಾರಕ ಆರ್.ಪ್ರಮೋದ್, ಮೈಮುಲ್ ವಿಸ್ತರಣಾಧಿಕಾರಿಗಳಾದ ದಿವ್ಯಶ್ರೀ, ಶಿವಕುಮಾರ್ ಬೋವಿ, ಅನಿತಾ, ಶೃತಿ, ರಂಜಿತಾ ಹಾಗೂ ಕಾರ್ಯದರ್ಶಿಗಳಾದ ಕೇತುಪುರ ಕುಳ್ಳೇಗೌಡ, ಬೆನಕನಹಳ್ಳಿ ಮಾದಪ್ಪ, ಸೋಸಲೆ ನಿಂಗಯ್ಯ, ಮೂಗೂರು ನಾಗೇಂದ್ರ, ದೊಡ್ಡ ಮುಲಗೂಡು ಗುರುಪ್ರಸಾದ್, ವ್ಯಾಸರಾಜಪುರ ಅಂದಾನಿಗೌಡ, ತಾಲೂಕಿನ ಎಲ್ಲಾ ಕಾರ್ಯದರ್ಶಿಗಳು ಹಾಜರಿದ್ದರು.

ಭಕ್ತರೇ ದೇವಸ್ಥಾನ ನಿರ್ಮಿಸಿರುವುದು ಶ್ಲಾಘನೀಯ: ಶಾಸಕ ಜಿ.ಡಿ.ಹರೀಶ್‌ಗೌಡ



ಹುಣಸೂರು, ಫೆ.22– ಸರ್ಕಾರದ ಸಹಾಯಧನ ಪಡೆಯದೇ ಗ್ರಾಮದಲ್ಲಿ ಭಕ್ತರೇ ದೇವಸ್ಥಾನ ನಿರ್ಮಿಸಿರುವುದು ಶ್ಲಾಘನೀಯ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಮೋದೂರು ಎಂ.ಕೊಪ್ಪಲು ಗ್ರಾಮದಲ್ಲಿ ಎಣ್ಣೆ ಹೊಳೆ ರಂಗನಾಥ ಸ್ವಾಮಿ ಕಳಸಮ್ಮ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಹಿಂದೂ ಧರ್ಮ ಶ್ರೇಷ್ಠ ಸಂಸ್ಕೃತಿ ಹೊಂದಿದೆ. ಈ ಧರ್ಮ ಸಭ್ಯತೆ ಮತ್ತು ಸಂಸ್ಕಾರ ಎರಡನ್ನು ಜಗತ್ತಿಗೆ ನೀಡಿದೆ. ಗ್ರಾಮದ ಪ್ರತಿ ವಿದ್ಯಾರ್ಥಿಯೂ ಶಿಕ್ಷಣ ಪಡೆದು ವಿದ್ಯಾವಂತರಾಗಬೇಕು. ಪರಸ್ಪರ ಗೌರವಿಸುವ ಭಾವನೆ ಬೆಳೆಸಿಕೊಳ್ಳಬೇಕು ಎಂದರು.

ದೇವಸ್ಥಾನ ನಿರ್ಮಾಣ ಆದ ನಂತರ ಅದರ ನಿರ್ವಹಣೆಯನ್ನು ಉತ್ತಮವಾಗಿ ಮಾಡಿಕೊಂಡು ಶ್ರದ್ಧಾ ಭಕ್ತಿಯಿಂದ ಪೂಜಾ ಕಾರ್ಯಕ್ರಮ ಮಾಡಿಕೊಂಡು ಹೋಗಬೇಕು. ಶ್ರದ್ಧಾ ಭಕ್ತಿ ಇದ್ದರೇ ಶಿಸ್ತು ತಾನಾಗಿಯೇ ಬರುತ್ತದೆ. ಗ್ರಾಮದ ಯುವಕರು ಅದನ್ನು ರೂಢಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವಂತಾಗಬೇಕು ಎಂದರು.

ಹುಚ್ಚಯ್ಯ ತಾತಾ ಅಳಗವಾಡಿ ಹಾಗೂ ಶರಣಯ್ಯ ಹಿರೇಮಠ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಜೆಡಿಎಸ್ ಮುಖಂಡ ಶ್ರೀಧರ್, ಗ್ರಾಪಂ ಮಾಜಿ ಅಧ್ಯಕ್ಷ ಸೋಮಶೇಖರ್, ರಾಮಚಂದ್ರ, ಚನ್ನಮಲ್ಲೇಗೌಡ, ರಾಜೇಗೌಡ, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಅಪರಾಧ ತಡೆಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ

ಜನಸಂಪರ್ಕ ಸಭೆಯಲ್ಲಿ ಸಿಪಿಐ ಪ್ರಸನ್ನಕುಮಾರ್



ಸರಗೂರಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಿಪಿಐ ಪ್ರಸನ್ನಕುಮಾರ್ ಮಾತನಾಡಿದರು.

> ಅಪರಾಧ ಕೃತ್ಯಗಳನ್ನು ಎಸಗುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು. ಅಕ್ರಮ ಮದ್ಯ ಮಾರಾಟ, ಡ್ರಗ್ಸ್, ಅಕ್ರಮ ಲಾಟರಿ ದಂಧೆಗೆ ಮುಲಾಜಿಲ್ಲದೇ ಕಡಿವಾಣ ಹಾಕಲಾಗುವುದು. ಜನಸಾಮಾನ್ಯರ ಸಮಸ್ಯೆ ಆಲಿಸಿ ಅವುಗಳಿಗೆ ಪರಿಹಾರ ಕಲ್ಪಿಸಲಾಗುವುದು.
> – ಆರ್.ಕಿರಣ್, ಎಸ್‌ಐ.

ಸರಗೂರು, ಫೆ.22– ಪೊಲೀಸರು ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಿ ಜನಸ್ನೇಹಿ ವ್ಯವಸ್ಥೆ ರೂಪಿಸುವುದೇ ಜನಸಂಪರ್ಕ ಸಭೆ ಎಂದು ಸಿಪಿಐ ಪ್ರಸನ್ನಕುಮಾರ್ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಜನ ಸಾಮಾನ್ಯರ ಸಮಸ್ಯೆ ಆಲಿಸಿ, ಅವುಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಆರಂಭಿಸಿರುವ ಜನಸಂಪರ್ಕ ಸಭೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಪರಾಧ ತಡೆಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಹೀಗಾಗಿ ಸಮಸ್ಯೆ ಬಂದಾಗ ಸಾರ್ವಜನಿಕರು ನೇರವಾಗಿ ಠಾಣೆಗೆ ಆಗಮಿಸಿ ದೂರು ನೀಡಬಹುದು ಎಂದರು.

ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಸಣ್ಣಸ್ವಾಮಿ ಮಾತನಾಡಿ, ಪಟ್ಟಣದ ಯುವ ಜನತೆ ಸ್ವೇಚ್ಛಾಚಾರದಲ್ಲಿ ತೊಡಗಿದ್ದಾರೆ. ಇವರನ್ನೇ ನಂಬಿರುವ ಕುಟುಂಬಸ್ಥರ ಪಾಡು ಹೇಳತೀರದಾಗಿದೆ. ಯುವಕರು ಮದ್ಯಪಾನ, ಧೂಮಪಾನ, ಡ್ರಗ್ಸ್, ಅಕ್ರಮ ಲಾಟರಿ ದಂಧೆಗೆ ಬಲಿಯಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಒಳಭಾಗದಲ್ಲಿ ಪೇ ಅಂಡ್ ಪಾರ್ಕ್ ವ್ಯವಸ್ಥೆ ಇದ್ದರೂ ಹೋಟೆಲ್, ಬಾರ್‌ಗಳ ಎದುರು ಎಲ್ಲೆಂದರಲ್ಲಿ ಸವಾರರು ದ್ವಿಚಕ್ರ ವಾಹನಗಳನ್ನು ನಿಲ್ಲಿಸುತ್ತಾರೆ. ಅಲ್ಲದೇ ವ್ಯಾಪಾರಕ್ಕೆಂದು ಬರುವ ಗ್ರಾಹಕರು ತಮ್ಮ ವಾಹನಗಳನ್ನು ಅಂಗಡಿಗಳ ಮುಂದೆ ಅಡ್ಡಾದಿಡ್ಡಿಯಾಗಿ ನಿಲುಗಡೆ ಮಾಡುವ ಕಾರಣ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಪುಂಡ ಪೋಕರಿಗಳ ಕುಚೇಷ್ಟೆ ಮಿತಿಮೀರುತ್ತಿದ್ದು, ಶಾಲಾ–ಕಾಲೇಜು ಪ್ರಾರಂಭ ಹಾಗೂ ಬಿಡುವಿನ ಸಮಯದಲ್ಲಿ ಪೊಲೀಸ್ ಗಸ್ತು ಅವಶ್ಯಕ ಎಂದರು.

ವರ್ತಕರ ಸಂಘದ ಅಧ್ಯಕ್ಷ ಎಸ್.ಪಿ. ಪ್ರಸಾದ್, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಲಕ್ಷ್ಮಣ್, ರಾಜಣ್ಣ ಮಲ್ಲೇಶ್, ಪಪಂ ಸದಸ್ಯ ಶ್ರೀನಿವಾಸ್, ಎಸ್.ಸಿ. ವೆಂಕಟೇಶ್, ಪುಟ್ಟಹನುಮಯ್ಯ, ಪ್ರಕಾಶ್, ಮಹೇಶ್, ಮಹೇಂದ್ರ, ನಾಗರಾಜು ಮಾತನಾಡಿದರು. ಸಭೆಯಲ್ಲಿ ಎಸ್‌ಐ ಗೋಪಾಲ್, ಸಿಬ್ಬಂದಿಗಳಾದ ಇಮ್ರಾನ್ ಅಹಮ್ಮದ್, ಜಗದೀಶ್, ಸುನೀಲ್, ಸಾರ್ವಜನಿಕರು ಉಪಸ್ಥಿತರಿದ್ದರು.

ಶಿವಾಜಿ ಮಹಾರಾಜರ ಇತಿಹಾಸ ಎಂದೆಂದಿಗೂ ಜೀವಂತ



ಶ್ರೀಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಡೆಯಿತು.

ಹುಣಸೂರು, ಫೆ.22– ವಿಶ್ವ ಕಂಡ ಶ್ರೇಷ್ಠ ರಾಜರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಮುಂದಿರುತ್ತಾರೆ. ಸ್ವರಾಜ್ಯದ ಕಲ್ಪನೆಯಲ್ಲಿ ಹಿಂದೂ ಧರ್ಮದ ಉಳಿವಿಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟ ಶಿವಾಜಿ ಮಹಾರಾಜರ ಇತಿಹಾಸ ಎಂದೆಂದಿಗೂ ಜೀವಂತ ಎಂದು ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತಿನ ಗೌರವಾಧ್ಯಕ್ಷ ಮಹದೇವರಾವ್ ಬಾಗಲ್ ತಿಳಿಸಿದರು.

ತಾಲೂಕಿನ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ವತಿಯಿಂದ ನಡೆದ ಶ್ರೀಛತ್ರಪತಿ ಶಿವಾಜಿ ಮಹಾರಾಜರ 398ನೇ ಜಯಂತಿಯಲ್ಲಿ ಮಾತನಾಡಿದ ಅವರು, ಮುಂದಿನ ಪೀಳಿಗೆಗೆ ಶಿವಾಜಿ ಮಹಾರಾಜರ ಆದರ್ಶ, ಶ್ರದ್ಧೆ, ಛಲ, ಸಾಧಿಸುವ ಗುರಿ, ಬದುಕಿನ ಸಂಸ್ಕಾರ, ಧರ್ಮ ರಕ್ಷಣೆಯ ಕಿಚ್ಚು ಅವರ ಮಾದರಿ ಬದುಕಿನ ಕುರಿತು ತಿಳಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪರಿಷತ್‌ನ ಅಧ್ಯಕ್ಷ ಲೋಕನಾಥ್ ರಾವ್ ಕದಂ ಜಯಂತಿ ಕಾರ್ಯಕ್ರಮವನ್ನು ಎಲ್ಲರೂ ಸೇರಿ ಒಂದೆಡೆ ಆಚರಿಸಬೇಕಾಗಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಜಿ.ವಿ.ಶ್ರೀನಾಥ್ ಮಾತನಾಡಿ, ಶಿವಾಜಿ ಮಹಾರಾಜರ ಜಯಂತಿಯನ್ನು ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಿಜೃಂಭಣೆಯಿಂದ ಆಚರಿಸುವ ಮೂಲಕ ಮುಂದಿನ ಪೀಳಿಗೆಗೆ ಇತಿಹಾಸದ ಪರಿಚಯ ಮಾಡಿಕೊಡುವ ಕೆಲಸವನ್ನು ಪರಿಷತ್ ವತಿಯಿಂದ ಮಾಡಲಾಗುವುದು ಎಂದರು.

ಇದೇ ವೇಳೆ ಆಸ್ಪತ್ರೆ ಕಾವಲ್ ಗ್ರಾಪಂ ಅಧ್ಯಕ್ಷ ನಾಗೇಶ್ ರಾವ್ ಮೆಂಗಾಣಿ, ಜಾಬಗೆರೆ ಗ್ರಾಪಂ ಅಧ್ಯಕ್ಷೆ ಯಶೋಧಬಾಯಿ ಚವ್ಹಾಣ್, ಗಾವಡಗೆರೆ ರೈತ ಸೇವಾ ಸಹಕಾರ ಸಂಘದ ಉಪಾಧ್ಯಕ್ಷ ವಿಠಲ್ ರಾವ್ ಪವಾರ್, ಸದಸ್ಯ ಹೊನ್ನಪ್ಪ ರಾವ್ ಕಾಳಿಂಗೆ ಅವರನ್ನು ಸನ್ಮಾನಿಸಲಾಯಿತು. ವಕೀಲರಾದ ವೀರೇಶ್ ರಾವ್, ಶ್ರೀಧರ್, ಗ್ರಾಪಂ ಸದಸ್ಯರಾದ ಶ್ರೀನಾಥ್.ಪಿ, ತುಳಸಿ ರಾಮ್ ಇತರರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಸುಬ್ಬರಾವ್ ಕದಂ, ಖಜಾಂಜಿ ಕೇತನ್ ರಾವ್ ಚವ್ಹಾಣ್, ಸದಸ್ಯರಾದ ರಮೇಶ್ ರಾವ್ ಚವ್ಹಾಣ್, ಮಂಜುನಾಥ್, ದೀಲಿಪ್, ನಾಗೇಶ್ ರಾವ್, ನಂಜುಂಡರಾವ್, ಮಹದೇವ್ ರಾವ್, ಪ್ರದೀಪ್, ಸಾಗರ್ ಇತರರಿದ್ದರು.

ಕುರುಬೂರು ಶಾಂತಕುಮಾರ್ ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸಿ

ಕಬ್ಬು ಬೆಳೆಗಾರರ ಸಂಘದಿಂದ ವಿಶೇಷ ಪೂಜೆ



ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ರೈತ ಮುಖಂಡರು ವಿಶೇಷ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಫೆ.22– ಪಂಜಾಬಿನಲ್ಲಿ ಅಪಘಾತಕ್ಕೀಡಾಗಿ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಶೀಘ್ರ ಗುಣಮುಖರಾಗಲಿ ಎಂದು ತಾಲೂಕು ಕಬ್ಬು ಬೆಳೆಗಾರರ ಸಂಘದ ಮುಖಂಡರು ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಪಂಜಾಬಿನಲ್ಲಿ ರೈತ ಮುಖಂಡರು ನಡೆಸುತ್ತಿರುವ ಹೋರಾಟ ಬೆಂಬಲಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ 10 ಮಂದಿ ಕರ್ನಾಟಕದ ರೈತರು ಪಂಜಾಬಿನ ಕನೋರಿ ಪಾರ್ಟಿಗೆ ತೆರಳಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಈ ವೇಳೆ ಕೇಂದ್ರ ಸರ್ಕಾರ ರೈತ ಸಂಘಟನೆಯೊಂದಿಗೆ ಚರ್ಚಿಸಲು ಚಂಡೀಘಡದಲ್ಲಿ ಕರೆದಿದ್ದ ಸಭೆಯಲ್ಲಿ ಭಾಗವಹಿಸಲು ತೆರಳುತ್ತಿದ್ದ ವೇಳೆ ರಸ್ತೆ ಅಪಘಾತವಾಗಿ ಶಾಂತಕುಮಾರ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತಿ.ನರಸೀಪುರ ಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ತಾಲೂಕು ಕಬ್ಬು ಬೆಳೆಗಾರರ ಸಂಘದ ಸದಸ್ಯರು ವಿಶೇಷ ಪೂಜೆ ಸಲ್ಲಿಸುವ ಜೊತೆಗೆ ಉರುಳು ಸೇವೆ ಮಾಡಿ ಶಾಂತಕುಮಾರ್ ಬೇಗ ಗುಣಮುಖರಾಗಲಿ ಎಂದು ಪ್ರಾರ್ಥಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರ್, ತಾಲೂಕು ಅಧ್ಯಕ್ಷ ಸಿದ್ದೇಶ್, ಟೌನ್ ಅಧ್ಯಕ್ಷ ಅಪ್ಪಣ್ಣ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ನಾಯಕ್, ಉಪಾಧ್ಯಕ್ಷ ಉಮೇಶ್, ರಾಜೇಂದ್ರ, ಸಂಘಟನಾ ಕಾರ್ಯದರ್ಶಿ ರಾಜೇಶ್, ಜಿಲ್ಲಾ ಜಂಟಿ ಕಾರ್ಯದರ್ಶಿ ಬಿ.ಪಿ. ಪರಶಿವಮೂರ್ತಿ, ಗುರುಸ್ವಾಮಿ, ಸತೀಶ್, ಡೈರಿ ರಾಜು, ಶಾಂತರಾಜು, ರಾಮಮೂರ್ತಿ, ಚಿನ್ನಸ್ವಾಮಿ, ವೀರೇಶ್, ನಾಗೇಶ, ಸಿದ್ದು ಭಾಗಿಯಾಗಿದ್ದರು.

ಮೂಲ ಸೌಲಭ್ಯ ಅಭಿವೃದ್ಧಿಗೆ ಒತ್ತು: ಶಾಸಕ ದರ್ಶನ್



ರಸ್ತೆ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು

ಮಲ್ಕುಂಡಿ, ಫೆ.22– ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ಮಲ್ಕುಂಡಿಯಲ್ಲಿ 20 ಲಕ್ಷ ರೂ. ವೆಚ್ಚದ ಚರಂಡಿ, ರಸ್ತೆ, ತರಗನಹಳ್ಳಿ 15 ಲಕ್ಷ ರೂ. ವೆಚ್ಚದ ಚರಂಡಿ, ರಸ್ತೆ, ಯಾಲೇಹಳ್ಳಿಯಲ್ಲಿ 20 ಲಕ್ಷ ರೂ. ವೆಚ್ಚದ ರಸ್ತೆ, ಶೆಟ್ಟಹಳ್ಳಿಯಲ್ಲಿ 20 ಲಕ್ಷ ರೂ. ವೆಚ್ಚದ ಡಾ.ಅಂಬೇಡ್ಕರ್ ಸಮುದಾಯ ಭವನ, ದುಗ್ಗಹಳ್ಳಿಯಲ್ಲಿ 20 ಲಕ್ಷ ರೂ. ವೆಚ್ಚದ ಡಾ.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ರಸ್ತೆ, ಚರಂಡಿ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ. ಸಿಎಂ ಸಿದ್ದರಾಮಯ್ಯನವರು ನಂಜನಗೂಡು ಕ್ಷೇತ್ರಕ್ಕೆ 25 ಕೋಟಿ ರೂ. ವಿಶೇಷ ಅನುದಾನ ನೀಡಿದ್ದಾರೆ. ಕ್ಷೇತ್ರದ ಜನರಿಗೆ ಅಗತ್ಯ ಮೂಲ ಸೌಕರ್ಯ ಒದಗಿಸುವುದು ನನ್ನ ಆದ್ಯ ಕರ್ತವ್ಯ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನರಿಗೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ. 25 ಕೋಟಿ ಅನುದಾನದಲ್ಲಿ ಪ್ರತಿ ಗ್ರಾಮಗಳಿಗೆ 25 ಲಕ್ಷದಂತೆ ಅನುದಾನ ನೀಡಿದ್ದೇನೆ. ಜೊತೆಗೆ ಜನರ ಸಮಸ್ಯೆ ಆಲಿಸಿ ಸ್ಥಳದಲ್ಲೇ ಪರಿಹಾರ ಕಲ್ಪಿಸಲಾಗುವುದು. ನಾನು ಶಾಸಕನಾದ ನಂತರ ಕ್ಷೇತ್ರದ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಜನರ ಕಷ್ಟ ಸುಖಗಳಿಗೆ ಭಾಗಿಯಾಗಿದ್ದೇನೆ. ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯಾಗಬೇಕಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕೆ.ಜಿ. ಮಹೇಶ್, ಶ್ರೀಕಂಠನಾಯಕ, ಕೆ.ಮಾದಪ್ಪ, ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ ಶಿವನಾಗಪ್ಪ, ಗ್ಯಾರಂಟಿ ಯೋಜನೆ ಅಧ್ಯಕ್ಷ ಕೆ.ಮಾರುತಿ, ಪ್ರಭುಸ್ವಾಮಿ, ನಾಗೇಂದ್ರ, ಗುತ್ತಿಗೆದಾರ ಶಿವಣ್ಣ, ಕಗ್ಗಲಿಹುಂಡಿ ಮಹದೇವು, ಬಸವಣ್ಣ, ರಾಜು, ಸೂರ್ಯ ಕುಮಾರ್, ಆದರ್ಶ, ಅಶೋಕ, ಅಭಿನಂದನ್ ಪಾಟೀಲ್, ಸತೀಶ್, ಹಲ್ಲರೆ ಗ್ರಾಪಂ ಉಪಾಧ್ಯಕ್ಷ ರೆಹಮತ್ ಉಲ್ಲಾ, ದೇವಮ್ಮ, ಪಾಪ, ಇಂಜಿನಿಯರಿಂಗ್ ಯಶವಂತ್, ಲ್ಯಾಂಡ್ ಆರ್ಮಿ ಸಹಾಯಕ ಅಭಿನಂತರ ಶರಣ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಹಲ್ಲರೆ ಮಹದೇವು ಸೇರಿದಂತೆ ಪ್ರಮುಖರು ಹಾಜರಿದ್ದರು.

56 ಅರ್ಜಿಗಳು ತಿರಸ್ಕೃತ


ಚುಂಚನಕಟ್ಟೆ, ಫೆ.22– ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ 2023–24ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ದತ್ತಾಂಶಗಳನ್ನು ಬೆಳೆ ವಿಮೆ ನೋಂದಣಿ ಪ್ರಸ್ತಾವನೆಗಳೊಂದಿಗೆ ಹೋಲಿಸಿದಾಗ ಬೆಳೆ ಸಮೀಕ್ಷೆಯೊಂದಿಗೆ ತಾಳೆಯಾದಾಗ ಮುಂಗಾರು ಹಂಗಾಮಿನ ಕೆ.ಆರ್.ನಗರ ತಾಲೂಕಿನಲ್ಲಿ 35 ಹಾಗೂ ಸಾಲಿಗ್ರಾಮ ತಾಲೂಕಿನಲ್ಲಿ 21 ಒಟ್ಟು 56 ಅರ್ಜಿಗಳು ತಿರಸ್ಕೃತಗೊಂಡಿವೆ. ತಿರಸ್ಕತಗೊಂಡ ಪ್ರಸ್ತಾವನೆಗಳನ್ನು ತಾಲೂಕಿನ ಕೃಷಿ ನಿರ್ದೇಶಕರ ಕಚೇರಿ ಮತ್ತು ರೈತ ಸಂಪರ್ಕಗಳಲ್ಲಿ ನೋಟಿಸ್ ಬೋರ್ಡ್‌ನಲ್ಲಿ ಹಾಕಲಾಗಿದ್ದು, ರೈತರ ಆಕ್ಷೇಪಣೆಗಳು ಇದ್ದಲ್ಲಿ ಮಾ.6 ರೊಳಗಾಗಿ ಅಗತ್ಯ ದಾಖಲಾತಿಗಳಾದ 2023–24ರ ಪಹಣಿಯಲ್ಲಿ ವಿಮೆಗೆ ನೋಂದಾಯಿಸಿದ ಬೆಳೆ ಇರಬೇಕು. ಬೆಂಬಲ ಬೆಲೆ ರಶೀದಿ, ಎಪಿಎಂಸಿಯಲ್ಲಿ ಮಾರಾಟ ಮಾಡಿದ್ದಲ್ಲಿ ದಾಖಲೆಯನ್ನು ಕೃಷಿ ಇಲಾಖೆಗೆ ಸಲ್ಲಿಸಬೇಕು, ಇಲ್ಲವಾದಲ್ಲಿ ಎಲ್ಲಾ ಪ್ರಸ್ತಾವನೆಗಳು ತಿರಸ್ಕೃತಗೊಳ್ಳಲಿವೆ ಎಂದು ಕೆ.ಅರ್.ನಗರ ಕೃಷಿ ಸಹಾಯ ನಿರ್ದೇಶಕ ಕೆ.ಜೆ.ಮಲ್ಲಿಕಾರ್ಜುನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳೆ ವಿಮೆಯ 196 ಅರ್ಜಿ ತಿರಸ್ಕೃತ

ನಂಜನಗೂಡು, ಫೆ22– ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ 2023ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ದತ್ತಾಂಶವನ್ನು ಬೆಳೆ ವಿಮೆ ನೋಂದಣಿ ಪ್ರಸ್ತಾವನೆಗಳೊಂದಿಗೆ ಹೋಲಿಸಿದ ವೇಳೆ ಬೆಳೆ ಸಮೀಕ್ಷೆಯೊಂದಿಗೆ ತಾಳೆಯಾಗದೆ ನಂಜನಗೂಡು ತಾಲೂಕಿನಲ್ಲಿ ಒಟ್ಟು 196 ಅರ್ಜಿಗಳು ತಿರಸ್ಕೃತಗೊಂಡಿದೆ.

ತಿರಸ್ಕೃತಗೊಂಡಿರುವ ಅರ್ಜಿಗಳ ವಿವರವನ್ನು ಕುರಿತ ಮಾಹಿತಿಯನ್ನು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಮತ್ತು ರೈತ ಸಂಪರ್ಕ ಕೇಂದ್ರಗಳ ನೋಟಿಸ್ ಬೋರ್ಡ್‌ನಲ್ಲಿ ಹಾಕಲಾಗಿದೆ. ತಿರಸ್ಕೃತಗೊಂಡಿರುವ ಪ್ರಸ್ತಾವನೆಗಳಿಗೆ ರೈತರ ಆಕ್ಷೇಪಣೆಗಳು ಇದ್ದಲ್ಲಿ ಮಾ.7 ರೊಳಗೆ ಅಗತ್ಯ ದಾಖಲಾತಿಗಳಾದ 2023–24ರ ಪಹಣಿ (ಪಹಣಿಯಲ್ಲಿ ವಿಮೆಗೆ ನೋಂದಾಯಿಸಿದ ಬೆಳೆ ಇರಬೇಕು) ಹಾಗೂ ಬೆಂಬಲ ಬೆಲೆ ಯೋಜನೆಯಡಿ ಎಪಿಎಂಸಿಯಲ್ಲಿ ಮಾರಾಟ ಮಾಡಿದ್ದಲ್ಲಿ ರಶೀದಿಯ ದಾಖಲೆಯನ್ನು ಕೃಷಿ ಇಲಾಖೆಗೆ ಸಲ್ಲಿಸಬೇಕು. ಇಲ್ಲವಾದಲ್ಲಿ ಎಲ್ಲಾ ಪ್ರಸ್ತಾವನೆಗಳು ತಿರಸ್ಕೃತಗೊಳ್ಳಲಿವೆ ಎಂದು ನಂಜನಗೂಡು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ ಎಸ್.ಕೆ.ರವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿ ಲಾರಿ ಪಲ್ಟಿ



ಹೆಚ್.ಡಿ.ಕೋಟೆ, ಫೆ.22– ಚಾಲಕನ ನಿಯಂತ್ರಣ ತಪ್ಪಿ ಲಾರಿ ಪಲ್ಟಿಯಾಗಿರುವ ಘಟನೆ ಪಟ್ಟಣದ ಮಹದೇಶ್ವರ ದೇವಸ್ಥಾನದ ಬಳಿ ನಡೆದಿದೆ.

ತಾಲೂಕಿನ ಬೊಮ್ಮಲಾಪುರದಿಂದ ಜೋಳದ ಹುಲ್ಲು ತುಂಬಿಕೊಂಡು ಬರುತ್ತಿದ್ದ ಲಾರಿ ಪಟ್ಟಣದ ಮಹದೇಶ್ವರ ದೇವಸ್ಥಾನದ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಘಟನೆ ಬಳಿಕ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿದ್ಯುತ್ ತಂತಿ ಸ್ಪರ್ಶ: ಕ್ಯಾಂಟರ್ ಭಸ್ಮ



ಹೆಚ್.ಡಿ.ಕೋಟೆ, ಫೆ.22– ಕಬ್ಬಿನ ಸೋಗು ತುಂಬಿಕೊಂಡು ಹೋಗುತ್ತಿದ್ದ ಕ್ಯಾಂಟರ್‌ಗೆ ವಿದ್ಯುತ್ ತಂತಿ ಸ್ಪರ್ಶಗೊಂಡ ಪರಿಣಾಮ ಕಬ್ಬಿನ ಸೋಗು, ಕ್ಯಾಂಟರ್ ಭಸ್ಮವಾಗಿರುವ ಘಟನೆ ತಾಲೂಕಿನ ಬೆಟ್ಟದಬೀಡು ಗ್ರಾಮದ ಬಳಿ ನಡೆದಿದೆ.

ಶನಿವಾರ ಮಧ್ಯಾಹ್ನ ನಿಗದಿಗಿಂತ ಹೆಚ್ಚು ಕಬ್ಬಿನ ಸೋಗನ್ನು ತುಂಬಿಕೊಂಡು ಹೋಗುತ್ತಿದ್ದ ಕ್ಯಾಂಟರ್‌ಗೆ ವಿದ್ಯುತ್ ತಂತಿ ತಗುಲಿ ಬೆಂಕಿ ಕಾಣಿಸಿಕೊಂಡಿದೆ. ಇದನ್ನು ಕಂಡ ಗ್ರಾಮಸ್ಥರು ಬೆಂಕಿ ನಂದಿಸಲು ಪ್ರಯತ್ನಿಸಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಪರಿಣಾಮ ಕ್ಯಾಂಟರ್ ಬೆಂಕಿಗೆ ಆಹುತಿಯಾಗಿದೆ. ಚಾಲಕ ವಾಹನದಿಂದ ಧುಮುಕಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಯಪುರ ಹೋಬಳಿಯಲ್ಲಿ ಕುಂದುಕೊರತೆ ಆಲಿಸಿದ ಯದುವೀರ್



ಸಂಸದ ಯದುವೀರ್ ಕುಂದು ಕೊರತೆ ಆಲಿಸಿದರು.

ಜಯಪುರ, ಫೆ.22– ಜಯಪುರ ಹೋಬಳಿಯ ವಿವಿಧ ಗ್ರಾಮಗಳಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿ ಕುಂದು ಕೊರತೆ ಆಲಿಸಿದರು. ಇದೇ ವೇಳೆ ಹಾರೋಹಳ್ಳಿ ಗ್ರಾಮಸ್ಥರು ಬಸವೇಶ್ವರ ಸಮುದಾಯ ಭವನಕ್ಕೆ ಅನುದಾನ ಕೋರಿದರು. ಅರಮನೆ ಕಾವಲು ಜಮೀನುಗಳಿಗೆ ದುರಸ್ತಿ ಮಾಡಿಸಿಕೊಡಿ ಎಂದು ರೈತರು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಯದುವೀರ್ ನಮ್ಮ ತಾಯಿಯವರ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸುವೆ ಎಂದರು.

ಸೋಲಿಗರ ಕಾಲೋನಿಯಲ್ಲಿ ಗ್ರಾಮಸ್ಥರು ಅರಣ್ಯ ಮಧ್ಯ ಭಾಗದಲ್ಲಿ ಸ್ಮಶಾನ ಇದ್ದು, ಶವಸಂಸ್ಕಾರಕ್ಕೆ ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಾರೆ ಎಂದು ದೂರಿದರು. ಕೇಂದ್ರ ಬುಡಕಟ್ಟು ಇಲಾಖೆ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಸಂಸದರು ತಿಳಿಸಿದರು.

ಚುಂಚರಾಯನಹುಂಡಿ ಗ್ರಾಮ ಸಮೀಪವಿರುವ ಮಲ್ಲೇಶ್ವರ ಬೆಟ್ಟಕ್ಕೆ ರಸ್ತೆ ನಿರ್ಮಿಸಬೇಕು. ಸರ್ಕಾರಿ ಶಾಲೆ ಶಿಥಿಲೀಕರಣಗೊಂಡಿದ್ದು, ಹೊಸ ಕಟ್ಟಡ ಹಾಗೂ ಬಸವೇಶ್ವರ ಸಮುದಾಯ ಭವನ ನಿರ್ಮಿಸಿಕೊಡಿ ಎಂದು ಮದ್ದೂರು ಹುಂಡಿ ಗ್ರಾಮಸ್ಥರು ಮನವಿ ಮಾಡಿದರು. ಈ ವೇಳೆ ಯದುವೀರ್ ನನ್ನ 5 ವರ್ಷದ ಅವಧಿಯಲ್ಲಿ ಶಾಲೆ ದುರಸ್ಥಿಗೆ ಅನುದಾನ ನೀಡಲಾಗುವುದು ಎಂದರು.

ಮೈಸೂರು–ಮಾನಂದವಾಡಿ ರಾಜ್ಯ ಹೆದ್ದಾರಿ ಕಿರಿದಾಗಿದ್ದು, ವಾಹನಗಳ ದಟ್ಟಣೆ ಹೆಚ್ಚಿದೆ. ನಿತ್ಯ ಅಪಘಾತಗಳು ಸಂಭವಿಸಿ ಸಾವು ನೋವುಗಳಾಗುತ್ತಿವೆ. ಹೆದ್ದಾರಿ ಅಗಲೀಕರಣ ಮಾಡಿ 4 ಪಥದ ರಸ್ತೆ ನಿರ್ಮಿಸಿಕೊಡಿ ಎಂದು ಗುಜ್ಜೆಗೌಡನಪುರ ಗ್ರಾಮಸ್ಥರು ಮನವಿ ಮಾಡಿದರು. ಇದಕ್ಕೆ ಯದು ವೀರ್ ಪ್ರತಿಕ್ರಿಯಿಸಿ ರಾಜ್ಯ ಲೋಕೋಪಯೋಗಿ ಮತ್ತು ಕೇಂದ್ರ ಸಚಿವರ ಜೊತೆ ಮಾತನಾಡಿ, ರಸ್ತೆ ನಿರ್ಮಾಣವನ್ನು ತ್ವರಿತವಾಗಿ ಮಾಡಿಸಲು ಕ್ರಮ ವಹಿಸಲಾಗುವುದು ಎಂದರು.

ಇದೇ ವೇಳೆ ಸಂಸದ ಯದುವೀರ್ ಜಯಪುರ ಗ್ರಾಮದ ಗುಜ್ಜಮ್ಮತಾಯಿ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ವೇಳೆ ಜಯಪುರ ಹೋಬಳಿ ಕೇಂದ್ರದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ತೆರೆಯಬೇಕು, ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಬೇಕು, ಜಯಪುರ ಕೆಗ್ಗೆರೆಯ ಮಧ್ಯ ಭಾಗದಲ್ಲಿ ಹಾದು ಹೋಗಿರುವ 11 ಕೆವಿ ವಿದ್ಯುತ್ ತಂತಿ ಸಂಪರ್ಕ ತೆರವುಗೊಳಿಸಬೇಕು, ಕ್ರೀಡಾಂಗಣ ನಿರ್ಮಿಸಬೇಕು, ಅರಮನೆ ಕಾವಲು ಭೂಮಿಗೆ ದುರಸ್ತಿ ಮಾಡಿಸಿಕೊಡಬೇಕು ಎಂದು ಜಯಪುರ ಗ್ರಾಮಸ್ಥರು ಅಹವಾಲು ನೀಡಿದರು.

ನಂತರ ಬರಡನಪುರ ಗ್ರಾಮದ ಮಂಟೇಸ್ವಾಮಿ ದೇಗುಲಕ್ಕೆ ಭೇಟಿ ನೀಡಿ ಸಂಸದರು ಪೂಜೆ ಸಲ್ಲಿಸಿದರು. ಗ್ರಾಮಕ್ಕೆ ಸಮುದಾಯ ಭವನ ನಿರ್ಮಿಸಿಕೊಡಬೇಕು, ಸ್ಮಶಾನಕ್ಕೆ ಜಾಗ ಗುರುತಿಸಿ ಕೊಡಬೇಕು ಎಂದು ಮನವಿ ಮಾಡಿದರು. ಬರಡನಪುರ ಗುರುಮಹಾಂತೇಶ್ವರ ಮಠಕ್ಕೆ ಭೇಟಿ ನೀಡಿ ಪರಶಿವಮೂರ್ತಿ ಸ್ವಾಮೀಜಿ ಭೇಟಿ ಮಾಡಿ, ಫಲಪುಷ್ಪ ಸ್ವೀಕರಿಸಿದರು.

ದಾರಿಪುರ ಗ್ರಾಮದ ಗುರುಕರೂರು ಸ್ವಾಮಿ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ ಯದುವೀರ್ ಪ್ರಸಾದ ಸ್ವೀಕರಿಸಿದರು. ಸಾರ್ವಜನಿಕ ಸಮುದಾಯ ಭವನ ಮುಂದುವರಿದ ಕಾಮಗಾರಿಗೆ 4.5ಲಕ್ಷ ಹಾಗೂ ಗ್ರಾಮಕ್ಕೆ ಹೊಸ ಬಸ್ ನಿಲ್ದಾಣ ನಿರ್ಮಿಸಲು 4.5ಲಕ್ಷ ಬಿಡುಗಡೆ ಮಾಡಲಾಗಿದೆ ಎಂದು ಗ್ರಾಮಸ್ಥರಿಗೆ ತಿಳಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಚಾಮುಂಡೇಶ್ವರಿ ಕ್ಷೇತ್ರ ಬಿಜೆಪಿ ಘಟಕದ ಮಂಡಲ ಅಧ್ಯಕ್ಷ ಪೈ.ಟಿ.ರವಿ, ಉಪಾಧ್ಯಕ್ಷ ಸುನೀಲ್ ಕುಮಾರ್, ಪ್ರಧಾನ ಕಾರ್ಯದರ್ಶಿ ಹೇಮಂತ್ ಕುಮಾರ, ಮುಖಂಡರಾದ ಡಿ.ಚಂದ್ರಶೇಖರ್, ವೀರಭದ್ರಸ್ವಾಮಿ ಸೇರಿದಂತೆ ನೂರಾರು ಮುಖಂಡರಿದ್ದರು.

ಡಿ.ದೇವರಾಜೇಗೌಡ ನಿಧನ



ಕೆ.ಆರ್.ನಗರ, ಫೆ.22– ತಾಲೂಕಿನ ಕಗ್ಗೆರೆ ಗ್ರಾಮದ ಡಿ.ದೇವರಾಜೇಗೌಡ(80) ಅವರು ಶನಿವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಇವರು ಪತ್ನಿ ಲಲಿತಾ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮಹಿಳಾ ಉದ್ಯಮಿಗಳಿಂದ ತಯಾರಾದ ಉತ್ಪನ್ನಗಳ ಪ್ರದರ್ಶನ, ಮಾರಾಟ

● ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಚಾಲನೆ ● ಸಣ್ಣ ಕೈಗಾರಿಕೆಗಳಿಂದಲೇ ದೇಶದಲ್ಲಿ ಆರ್ಥಿಕ ಪ್ರಗತಿ





ಮೈಸೂರಿನ ಚಾಮುಂಡಿವಿಹಾರ ಒಳ ಕ್ರೀಡಾಂಗಣದಲ್ಲಿ ಮಹಿಳಾ ಉದ್ಯಮಿಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಮೇಳದಲ್ಲಿರುವ ಮಳಿಗೆಗಳನ್ನು ಕಾಣಬಹುದು.

ಮೈಸೂರು, ಫೆ.22(ಎಂಟಿವೈ)– ಸಣ್ಣ, ಸೂಕ್ಷ್ಮ ಕೈಗಾರಿಕೆಗಳಿಂದಲೇ ದೇಶದ ಆರ್ಥಿಕತೆ ಪ್ರಗತಿಯಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಚಾಮುಂಡಿ ವಿಹಾರ ಒಳ ಕ್ರೀಡಾಂಗಣದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ವತಿಯಿಂದ ಆಯೋಜಿಸಿದ್ದ ಮಹಿಳಾ ಉದ್ಯಮಿಗಳಿಂದ ತಯಾರಿಸಿರುವ ಉತ್ಪನ್ನಗಳ ಮಾರಾಟ ಮತ್ತು ಪ್ರದರ್ಶನ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊರೊನಾ ನಂತರ 80 ಸಾವಿರಕ್ಕೂ ಹೆಚ್ಚು ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳು ಮುಚ್ಚಿವೆ. ಆ ಕಾರಣದಿಂದಾಗಿ ಆರ್ಥಿಕತೆಯ ಬೆನ್ನೆಲುಬು ಕುಸಿದು ಬಿದ್ದಂತಾಗಿತ್ತು. ಇದೀಗ ಮತ್ತೆ ಸಣ್ಣ, ಮತ್ತು ಗುಡಿ ಕೈಗಾರಿಕೆ ಬೆಳವಣಿಗೆಗೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ ಎಂದರು.

ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ ಗುಡಿ ಕೈಗಾರಿಕೆಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆ ರೂಪಿಸಿದ್ದೆ. ಇದರ ಜೊತೆಗೆ ಕಡಕೊಳ ಬಳಿ ಜಮೀನನ್ನು ಮಹಿಳಾ ಉದ್ಯಮಕ್ಕಾಗಿ ನೀಡಲಾಗಿದೆ. ಮಹಿಳೆಯರಿಗೆ ಸೂಕ್ತ ಅವಕಾಶಗಳನ್ನು ಒದಗಿಸಿದರೆ ಯಾರಿಗೂ ಕಡಿಮೆ ಇಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾರೆ ಎಂದು ತಿಳಿಸಿದರು.

ಕಾಸಿಯಾ ಅಧ್ಯಕ್ಷ ಎಂ.ಜಿ.ರಾಜಗೋಪಾಲ್ ಮಾತನಾಡಿ, ಮಹಿಳೆಯರಿಗೆ ಉತ್ತೇಜನ ಹಾಗೂ ಪ್ರೋತ್ಸಾಹ ನೀಡಲು ಮೇಳವನ್ನು ಆಯೋಜಿಸಲಾಗಿದೆ. ಈ ಬಾರಿ ಒಟ್ಟಾರೆ 84 ಮಳಿಗೆಗಳಿದ್ದು, ಅವುಗಳಲ್ಲಿ ಮಹಿಳೆಯರಿಂದಲೇ ತಯಾರಿಸಲ್ಪಟ್ಟ ಇಂಜಿನಿಯರಿಂಗ್ ಸಂಬಂಧಿತ ವಸ್ತುಗಳು, ಮಕ್ಕಳ ಆಟಿಕೆಗಳು, ಆಹಾರೋತ್ಪನ್ನಗಳು, ಕರಕುಶಲ ವಸ್ತುಗಳು ಲಭ್ಯವಿದೆ ಎಂದರು.

ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನದ ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಅವಕಾಶ ನೀಡಲಾಗಿದ್ದು, ಬೆಂಗಳೂರು, ಕಲಬುರಗಿ ಸೇರಿದಂತೆ ವಿವಿಧ ಜಿಲ್ಲೆಗಳ ಮಹಿಳೆಯರು ಮಳಿಗೆಗಳನ್ನು ತೆರೆದಿದ್ದಾರೆ. ಮಹಿಳೆಯರ ಮಳಿಗೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಉತ್ತಮವಾದ ಮೂರು ಮಳಿಗೆಗಳಿಗೆ ಪ್ರಶಸ್ತಿಗಳನ್ನು ನೀಡುವುದರ ಜೊತೆಗೆ ಭಾಗವಹಿಸಿದ ಪ್ರತಿಯೊಬ್ಬ ಮಹಿಳೆಗೂ ಪ್ರಮಾಣ ಪತ್ರ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಚೇಂಬರ್ಸ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜ್, ಕಾಸಿಯಾ ಉಪಾಧ್ಯಕ್ಷ ಬಿ.ಆರ್.ಗಣೇಶ್ ರಾವ್, ಜಂಟಿ ಕಾರ್ಯದರ್ಶಿ ಎನ್.ಸತೀಶ್, ಜೆ.ಎಸ್.ಬಾಬು, ಖಜಾಂಚಿ ಹೆಚ್. ಮಂಜುನಾಥ್, ಮಹಿಳಾ ಸಬಲೀಕರಣ ಉಪಸಮಿತಿಯ ಅಧ್ಯಕ್ಷೆ ಎಸ್.ಲತಾ, ಉಪಾಧ್ಯಕ್ಷೆ ಉಷಾರಾಣಿ, ಸದಸ್ಯರಾದ ರಮಾ ಸುಬ್ರಹ್ಮಣ್ಯನ್, ಸುಮಿತ್ರ, ಶ್ರೀವಾಣಿ, ಪದ್ಮಾ, ರಕ್ಷಿತಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಉದಯಗಿರಿ ಠಾಣೆ, ಪೊಲೀಸರ ಮೇಲೆ ಕಲ್ಲು ತೂರಾಟ ಯಾರೇ ಮಾಡಿದ್ದರೂ ತಪ್ಪೇ!

ಮುಸ್ಲಿಂ ಮುಖಂಡರೂ ಆದ ವಕೀಲ ಅಬ್ದುಲ್ ರಜಾಕ್ ಅಭಿಮತ



ಮೈಸೂರು, ಫೆ.22(ಎಸ್‌ಪಿಎನ್)– ಉದಯಗಿರಿ ಪೊಲೀಸ್ ಠಾಣೆ ಮೇಲೆ, ಪೊಲೀಸರ ಮೇಲೆ ಯಾರೇ ಹಲ್ಲೆ ಮಾಡಿದ್ದರೂ ತಪ್ಪೇ ಎಂದು ಮುಸ್ಲಿಂ ಮುಖಂಡರಾದ ವಕೀಲ ಅಬ್ದುಲ್ ರಜಾಕ್, ಈ ಸಂಬಂಧ ಬಹಿರಂಗವಾಗಿ ಕ್ಷಮೆ ಯಾಚಿಸುವುದಾಗಿ ಹೇಳಿದರು.

ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲುತೂರಿದ ಪ್ರಕರಣದ ಆರೋಪಿಗಳ ಪರವಾಗಿ ಮೈಸೂರು ಜಿಲ್ಲಾ ನ್ಯಾಯಾಲಯದಲ್ಲಿ ವಾದಿಸಲು ಆಗಮಿಸಿದ್ದ ಬೆಂಗಳೂರಿನ ವಕೀಲ ಅಬ್ದುಲ್ ರಜಾಕ್, ನ್ಯಾಯಾಲಯದ ಮುಂಭಾಗ ಮಾಧ್ಯಮಗಳೊಂದಿಗೆ ಮಾತನಾಡಿದರು.

ಉದಯಗಿರಿ ಠಾಣಾ ವ್ಯಾಪ್ತಿಯ ಗಲಭೆ ಪ್ರಕರಣದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರ ಮೇಲೆ ಎಫ್‌ಐಆರ್ ದಾಖಲಾಗಿದೆ. ಇದರಲ್ಲಿ ಅಮಾಯಕರು, ಅಪ್ರಾಪ್ತರು ಸೇರಿದ್ದಾರೆ. ಹಾಗಾಗಿ ಪ್ರಕರಣದಲ್ಲಿ ಸಿಲುಕಿಕೊಂಡ ಮುಗ್ಧರಿಗೆ ಕಾನೂನು ನೆರವು ನೀಡಲು ಆಗಮಿಸಿದ್ದೇನೆ. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣ ಮರುಕಳಿಸದಂತೆ ನೋಡಿಕೊಳ್ಳಲು ಉದಯಗಿರಿಯ ಎಲ್ಲಾ ಸಮುದಾಯಗಳ ಮುಖಂಡರ ನೇತೃತ್ವದಲ್ಲಿ ಶಾಂತಿ ಸಭೆ ಆಯೋಜಿಸುವ ಆಲೋಚನೆ ಇದೆ ಎಂದರು.

ನಮ್ಮ ಪ್ರವಾದಿ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದರೆ ಇಲ್ಲವೇ ಕೆಟ್ಟ ಸಂದೇಶ ನೀಡುವ ಪೋಸ್ಟರ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಡಿದರೆ, ಯಾರಿಗಾದರೂ ಕೋಪ ಬರುತ್ತದೆ. ಈ ಪ್ರಕರಣದಲ್ಲೂ ಅದೇ ಆಗಿದೆ. ಇಷ್ಟಕ್ಕೆ ಮಾಜಿ ಸಂಸದ ಪ್ರತಾಪ ಸಿಂಹ ಮುಸ್ಲಿಂರನ್ನು ಭಾರತ ಬಿಟ್ಟು ಹೋಗಿ ಎಂದು ಹೇಳಲು ಇವನ್ಯಾರು? ಎಂದು ಏಕವಚನದಲ್ಲೇ ಪ್ರಶ್ನಿಸಿದರು.

ನಮ್ಮ ಮುಸ್ಲಿಂ ಯುವಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದರೆ ಸ್ವಲ್ಪ ಪ್ರೀತಿ ಜಾಸ್ತಿ. ಹಾಗಾಗಿ ಅವರ ಮೇಲೆ ನಮಗೆ ನಂಬಿಕೆಯಿದ್ದು, ಆಗಂತ ನಾನು ಯಾವುದೇ ಪಕ್ಷದ ಪರವಾಗಿ ವಕಾಲತ್ತು ವಹಿಸಲು ಬಂದಿಲ್ಲ. ಈ ಘಟನೆಯಲ್ಲಿ ಕೆಲ ಅಮಾಯಕರು ಇದ್ದಾರೆ. ಅಂತಹವರ ಪರವಾಗಿ ಸರ್ಕಾರ ಮೃದು ಧೋರಣೆ ತೋರಬೇಕು ಎಂದು ಮನವಿ ಮಾಡಿದ ಅವರು, ಇಂತಹ ಯುವಕರಿಗೆ ಕಾನೂನು ನೆರವು ನೀಡಲು ಬಂದಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಸಾಮಾಜಿಕ ಜಾಲತಾಣದಲ್ಲಿ ವಿವಾದಿತ ಪೋಸ್ಟರ್ ಹಾಕಿರುವ ವ್ಯಕ್ತಿ ಮಾಜಿ ಸಂಸದ ಪ್ರತಾಪ ಸಿಂಹ ಅವರ ಚೇಲಾ. ಈತನಿಗೆ ಉರ್ದು ಭಾಷೆ ಗೊತ್ತಿಲ್ಲ ಎಂದ ಮೇಲೆ ಏಕೆ ಇಂತಹ ಪೋಸ್ಟ್ ಹಾಕಬೇಕಿತ್ತು ಎಂದು ಪ್ರಶ್ನಿಸಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆ ಇನ್ನೇನು ಘೋಷಣೆಯಾಗಲಿದೆ. ಆ ವಾರ್ಡ್‌ನಲ್ಲಿ ಮುಸ್ಲಿಂ ಮತ ಕಡಿಮೆ ಇದ್ದು, ಅನ್ಯ ಧರ್ಮೀಯರ ಮತ ಕ್ರೋಢೀಕರಣ ಮಾಡಿ, ಚುನಾವಣೆ ಗೆಲ್ಲಲು ಇಂತಹ ನೀಚ ಪ್ರಯತ್ನ ಮಾಡಿದ್ದಾರೆ ಎಂದು ಕಿಡಿಕಾರಿದರು.

ಮೈಸೂರಲ್ಲಿ ಬೃಹತ್ ಮರ ಬಿದ್ದು ಆಟೋ, ಸ್ಕೂಟರ್, ತಳ್ಳುವ ಗಾಡಿ ಜಖಂ

● ತರಕಾರಿ ವ್ಯಾಪಾರಿಗೆ ಗಂಭೀರ ಗಾಯ, ಆಸ್ಪತ್ರೆಗೆ ದಾಖಲು

● ನಗರಪಾಲಿಕೆ, ಅರಣ್ಯ ಇಲಾಖೆ ವಿರುದ್ಧ ಸಾರ್ವಜನಿಕರ ಆಕ್ರೋಶ



ನಗರದ ಸರಸ್ವತಿಪುರಂನ 14ನೇ ಮುಖ್ಯ ರಸ್ತೆಯಲ್ಲಿರುವ ಭಾರಿ ಗಾತ್ರದ ಮರವೊಂದು ಮುರಿದು ಆಟೋಗಳು ಜಖಂಗೊಂಡಿರುವ ದೃಶ್ಯ

ಮೈಸೂರು, ಫೆ.22(ಜಿಎ)–ಬೃಹತ್ ಮರವೊಂದು ಮುರಿದು ಬಿದ್ದ ಪರಿಣಾಮ ಎರಡು ಆಟೋ, ಸ್ಕೂಟರ್, ತರಕಾರಿ ಗಾಡಿ ಸೇರಿದಂತೆ ಹಲವು ವಸ್ತುಗಳು ಜಖಂಗೊಂಡಿದ್ದು, ತರಕಾರಿ ವ್ಯಾಪಾರಿಯೊಬ್ಬರು ಗಾಯಗೊಂಡಿರುವ ಘಟನೆ ನಗರದ ಸರಸ್ವತಿಪುರಂನಲ್ಲಿ ಸಂಭವಿಸಿದೆ.

ನಗರದ ಸರಸ್ವತಿಪುರಂನ 14ನೇ ಮುಖ್ಯ ರಸ್ತೆಯಲ್ಲಿರುವ ಶಿಥಿಲಗೊಂಡಿರುವ ಭಾರಿ ಗಾತ್ರದ ಮರವೊಂದು ಶನಿವಾರ ಬೆಳಗ್ಗೆ ಮುರಿದು ಬಿದ್ದ ಪರಿಣಾಮ ಮರದ ಕೆಳಗೆ ನಿಲ್ಲಿಸಿದ್ದ ಎರಡು ಆಟೋಗಳು, ತರಕಾರಿ ಗಾಡಿ ಸಂಪೂರ್ಣ ಜಖಂಗೊಂಡಿದೆ. ಮತ್ತೊಂದೆಡೆ ನಿಲ್ಲಿಸಿದ್ದ ಸ್ಕೂಟರ್ ಕೂಡ ಮರದ ಕೊಂಬೆ ಬಿದ್ದು ಹಾನಿಗೊಳಗಾಗಿದೆ. ತರಕಾರಿ ಮಾರಾಟ ಮಾಡುತ್ತಿದ್ದ ಮಹದೇವ ಎಂಬುವರ ಮೇಲೆ ಮರ ಬಿದ್ದು ತಲೆಗೆ ಪೆಟ್ಟಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ನಗರಪಾಲಿಕೆ, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ: ಮರ ಬಿದ್ದಿರುವ ವಿಷಯ ತಿಳಿಯುತ್ತಿದ್ದಂತೆ ಪಾಲಿಕೆ ಅಧಿಕಾರಿಗಳು, ಅಭಯ ಸಿಬ್ಬಂದಿ, ಪೊಲೀಸರು ಸ್ಥಳಕ್ಕೆ ಆಗಮಿಸಿ ತಕ್ಷಣ ಮರ ತೆರವು ಮಾಡಲು ಮುಂದಾದರು. ಈ ವೇಳೆ ಸಾರ್ವಜನಿಕರು ಸ್ಥಳಕ್ಕೆ ಪಾಲಿಕೆ ಆಯುಕ್ತರು, ಅರಣ್ಯ ಇಲಾಖೆಯ ಅಧಿಕಾರಿಗಳು ಬರುವ ತನಕ ಮರ ತೆರವು ಮಾಡಬೇಡಿ. ಶಿಥಿಲಗೊಂಡಿದ್ದ ಈ ಮರ ತೆರವುಗೊಳಿಸುವಂತೆ ಈಗಾಗಲೇ ಪಾಲಿಕೆಗೆ ದೂರು ಸಲ್ಲಿಸಿ, ಅದನ್ನು ಅರಣ್ಯ ಇಲಾಖೆಗೆ ಗಮನಕ್ಕೆ ತರಲಾಗಿತ್ತು. ಆದರೆ, ಅಧಿಕಾರಿಗಳ ಬೇಜವಾಬ್ದಾರಿಯಿಂದ ಇಂದು ಮರ ಬಿದ್ದು, ಅನಾಹುತ ಸಂಭವಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿ ಬಾರಿ ಮರ ತೆರವು ಸಂಬಂಧ ಪಾಲಿಕೆಗೆ ಪತ್ರ ಬರೆದರೆ, ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಅರಣ್ಯ ಇಲಾಖೆಗೆ ಸಂಪರ್ಕಿಸಿ ಎಂದು ಹೇಳುತ್ತಾರೆ. ಅರಣ್ಯ ಇಲಾಖೆ ಅವರು ಯಾವುದೇ ದೂರು ನೀಡಿದರೂ ಅದರ ಬಗ್ಗೆ ಯಾವುದೇ ಕ್ರಮವಹಿಸುವುದಿಲ್ಲ. ಹೀಗೆ ಅರಣ್ಯ ಇಲಾಖೆ ಮತ್ತು ನಗರ ಪಾಲಿಕೆಯ ಬೇಜಾವಾಬ್ದಾರಿಯಿಂದ ನಗರದಲ್ಲಿ ಮತ್ತಷ್ಟು ಅನಾಹುತ ಸಂಭವಿಸುತ್ತದೆಯೋ ನೋಡಬೇಕಿದೆ ಎಂದು ಸಾರ್ವಜನಿಕರು ವಾಗ್ದಾಳಿ ನಡೆಸಿದರು.

ಮರ ತೆರವು : ಪಾಲಿಕೆ ಅಧಿಕಾರಿ ಹಾಗೂ ಪೊಲೀಸರು ಆಕ್ರೋಶಗೊಂಡಿದ್ದ ಸಾರ್ವಜನಿಕರನ್ನು ಸಮಾಧಾನಪಡಿಸಿ, ನಂತರ ಅಭಯ ಸಿಬ್ಬಂದಿ ಮರ ತೆರವು ಮಾಡಲು ಸೂಚಿಸಿದರು. ಆಧುನಿಕ ಉಪಕರಣಗಳನ್ನು ಬಳಸಿಕೊಂಡು ಬೃಹತ್ ಮರವನ್ನು ಹಂತ ಹಂತವಾಗಿ ಕತ್ತರಿಸಿ ತೆರವುಗೊಳಿಸಿದರು. ಮುಂಜಾಗ್ರತಾ ಕ್ರಮವಾಗಿ ವಾಹನ ಸಂಚರಿಸದಂತೆ ಕ್ರಮ ವಹಿಸಲಾಗಿತ್ತು.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಗುಲ್ವೀರ್ ಸಿಂಗ್

5000 ಮೀಟರ್‌ರನ್ನು 12 ನಿಮಿಷದಲ್ಲಿ ಓಡಿದ ಮೊದಲ ಭಾರತೀಯ



ನವದೆಹಲಿ, ಫೆ.22– ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಗುಲ್ವೀರ್ ಸಿಂಗ್ ಅವರು ಒಳಾಂಗಣ 5,000 ಮೀ. ಓಟದ ಏಷ್ಯನ್ ದಾಖಲೆಯನ್ನು ಮುರಿದರು. ಜೊತೆಗೆ ವರ್ಷದ ಕೊನೆಯಲ್ಲಿ ನಡೆಯುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೂ ಅರ್ಹತೆ ಪಡೆದರು.

ಅಮೆರಿಕದ ಬಾಸ್ಟನ್‌ನಲ್ಲಿ ಶುಕ್ರವಾರ ನಡೆದ ಡಿಎಂಆರ್ ಚಾಲೆಂಜ್ ಒಳಾಂಗಣ ಕೂಟದಲ್ಲಿ ಗುಲ್ವೀರ್ ಈ ದೂರವನ್ನು 12 ನಿಮಿಷ 59.77 ಸೆ.ಗಳಲ್ಲಿ ಪೂರೈಸಿ ಈ ಸಾಧನೆಗೆ ಪಾತ್ರರಾದರು. 5000 ಮೀ. ಓಟವನ್ನು 13 ನಿಮಿಷಗಳ ಒಳಗೆ ಕ್ರಮಿಸಿದ ಭಾರತದ ಮೊದಲ ಓಟಗಾರನೆಂಬ ಹಿರಿಮೆಯೂ 26 ವರ್ಷ ವಯಸ್ಸಿನ ಸೇನಾ ಪಡೆಯ ಗುಲ್ವೀರ್ ಅವರದ್ದಾಯಿತು.

ಥಾಯ್ಲೆಂಡ್‌ನ ಕೀರನ್ ತುಂಟಿವೇಟ್ ಅವರು 2022ರಲ್ಲಿ ಸ್ಥಾಪಿಸಿದ ಏಷ್ಯನ್ ಒಳಾಂಗಣ ಓಟದ ದಾಖಲೆಯನ್ನು (13ನಿ.08.41 ಸೆ.) ಅವರು ಮುರಿದರು. ಅವರು 5000 ಮೀ. ಒಳಾಂಗಣ ಓಟದಲ್ಲಿ ರಾಷ್ಟ್ರೀಯ ದಾಖಲೆಯನ್ನು (13ನಿ.11.82 ಸೆ.) 12 ಸೆಕೆಂಡುಗಳಿಂದ ಉತ್ತಮಪಡಿಸಿದರು.

ಟೋಕಿಯೊದಲ್ಲಿ ನಿಗದಿಯಾಗಿರುವ 2025ರ (ಸೆಪ್ಟೆಂಬರ್ 13 ರಿಂದ 21) ವಿಶ್ವ ಚಾಂಪಿಯನ್‌ಷಿಪ್‌ಗೆ ಪ್ರವೇಶ ಅರ್ಹತಾ ಮಟ್ಟವನ್ನು 13ನಿ.01.00ಗೆ ನಿಗದಿಪಡಿಸಲಾಗಿದೆ.

ಆದರೆ ಗುಲ್ವೀರ್ ಅವರ ದಾಖಲೆ ಅವಧಿಯನ್ನು ರಾಷ್ಟ್ರೀಯ ಹೊರಾಂಗಣ ದಾಖಲೆಯನ್ನಾಗಿ ಪರಿಗಣಿಸಲಾಗದು ಎಂದು ಭಾರತದ ಮುಖ್ಯ ಅಥ್ಲೆಟಿಕ್ ಕೋಚ್ ರಾಧಾಕೃಷ್ಣನ್ ನಾಯರ್ ತಿಳಿಸಿದ್ದಾರೆ.

ರಾಷ್ಟ್ರೀಯ ಕಬಡ್ಡಿಗೆ ಆಯ್ಕೆ



ಒರಿಸ್ಸಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹಿರಿಯರ ಕಬಡ್ಡಿ ಕ್ರೀಡಾಕೂಟಕ್ಕೆ ಕುಂಬಾರಕೊಪ್ಪಲಿನ ಮಾಜಿ ಕಬಡ್ಡಿ ಕ್ರೀಡಾಪಟು ಕೇಬಲ್ ನಾಗರಾಜು ಪುತ್ರ ನಿತಿನ್ ಗೌಡ ಆಯ್ಕೆಯಾಗಿದ್ದಾರೆ. ಇವರು ಒಳಗೊಂಡಿರುವ ತಂಡ ಯಶಸ್ಸು ಕಾಣಲಿ ಎಂದು ಚಾಮರಾಜ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡ ಹಾರೈಸಿದ್ದಾರೆ.

ಸಾಧಕ ಶಿಕ್ಷಕರಿಗೆ ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ

ಜೀವನದಿ ಕಾವೇರಿ ಬಂಗಾರ ನಿಧಿ ಇದ್ದಂತೆ: ಹಿರಿಯ ಸಾಹಿತಿ ಬನ್ನೂರು ಕೆ.ರಾಜು



'ಜೀವನದಿ ಕಾವೇರಿ ಪ್ರಶಸ್ತಿ'ಯನ್ನು ಸಾಧಕ ಶಿಕ್ಷಕರಿಗೆ ಪ್ರಧಾನ ಮಾಡಲಾಯಿತು.

ಮೈಸೂರು, ಫೆ.22(ಎಸ್‌ಪಿಎನ್)– ಕೊಡಗಿನ ನೆಲದಲ್ಲಿ ಹುಟ್ಟಿ ಹಳೆ ಮೈಸೂರು ಭಾಗದ ಜಿಲ್ಲೆಗಳ ಜೀವನಾಡಿಯಾಗಿರುವ ಕಾವೇರಿ ನದಿ, ಕನ್ನಡಿಗರ 'ಬಂಗಾರ ನಿಧಿ' ಇದ್ದಂತೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ತ್ಯಾಗರಾಜ ರಸ್ತೆಯ ಅಕ್ಕಮಹಾದೇವಿ ಸಭಾಂಗಣದಲ್ಲಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ ಸಹಯೋಗದೊಂದಿಗೆ ಏರ್ಪಡಿಸಿದ್ದ ಜೀವನದಿ ಕಾವೇರಿ ಪ್ರಶಸ್ತಿ–2025 ಅನ್ನು ಸಾಧಕ ಶಿಕ್ಷಕರಿಗೆ ಪ್ರಧಾನ ಮಾಡಿ, ಮಾತನಾಡಿದರು.

ಸಮುದಾಯಕ್ಕೆ ಕೊಟ್ಟು ಖುಷಿಪಡುವ ಪರಂಪರೆಯನ್ನು ರೂಢಿಸಿಕೊಂಡವರು ಕೊಡವರು. ಇಂತಹ ನೆಲದಲ್ಲಿ ಹುಟ್ಟಿ ಕನ್ನಡರಿಗೆ ಜೀವನಾಡಿಯಾಗಿರುವ ಕಾವೇರಿ, ಕನ್ನಡಿಗರ 'ಬಂಗಾರ ನಿಧಿ' ಎಂದರೆ ತಪ್ಪಾಗಲಾರದು. ಇಂತಹ ಜೀವಮಾತೆಯ ಹೆಸರಿನಲ್ಲಿ ಕೊಡಮಾಡುತ್ತಿರುವ 'ಜೀವನದಿ ಕಾವೇರಿ ಪ್ರಶಸ್ತಿ'ಯನ್ನು ಸಾಧಕ ಶಿಕ್ಷಕರಿಗೆ ಪ್ರಧಾನ ಮಾಡುತ್ತಿರುವುದು ನಿಜಕ್ಕೂ ಔಚಿತ್ಯ ಪೂರ್ಣ ಸಂಗತಿ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಬಹಳಷ್ಟು ಪ್ರಶಸ್ತಿ–ಪುರಸ್ಕಾರಗಳು, ಅನರ್ಹರ ಪಾಲಾಗಿ, ತನ್ನ ಘನತೆ ಕಳೆದು ಕೊಳ್ಳುತ್ತಿದೆ. ಇಂತಹ ಕಾಲಘಟ್ಟದಲ್ಲಿ ಪ್ರಶಸ್ತಿ ಕೊಡುವವರನ್ನು ಹಾಗೂ ಸನ್ಮಾನಿಸಿಕೊಳ್ಳುವವರನ್ನು ಜನ ಅನುಮಾನದಿಂದ ನೋಡುವಂತಾಗಿದೆ. ಇಂತಹ ಸಂದರ್ಭದಲ್ಲಿ ತಾಯಿ ಕಾವೇರಿ ಹೆಸರಿನಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕಿಯರಿಗೆ ಪ್ರದಾನ ಮಾಡುತ್ತಿರುವುದು ಉತ್ತಮ ಸಂಗತಿ ಎಂದು ಹೇಳಿದರು.

ಜೀವನದಿ ಕಾವೇರಿಗೂ ಮತ್ತು ವಿದ್ಯಾದಾತೆಯರಾದ ಶಿಕ್ಷಕಿಯರಿಗೂ ಒಂದು ರೀತಿ ಸಾಮ್ಯತೆಯುಂಟು ಜೀವನದಿ ಕಾವೇರಿಯಂತೆ ಇವರು ಗ್ರಾಮೀಣ ಮಕ್ಕಳಿಗೆ ಜ್ಞಾನಾರ್ಜನೆ ಮಾಡಿ, ಜ್ಞಾನದ ನಿಧಿಯೂ, ದೇವನದಿಯೂ ಆಗಿದ್ದಾರೆ. ಇಂತಹ ಶ್ರೇಷ್ಠ ಶಿಕ್ಷಿಯರಿಗೆ ಕಾವೇರಿ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಸಂತೋಷದ ಸಂಗತಿ ಎಂದರು.

ಮಂಡ್ಯ ಜಿಲ್ಲೆ ಡಯಟ್ ಪ್ರಾಂಶುಪಾಲ ಪುರುಷೋತ್ತಮ್ ಮಾತನಾಡಿ, ಜಗತ್ತಿನಲ್ಲಿ ಬುದ್ಧ, ಗಾಂಧಿ, ಬಸವ, ಅಂಬೇಡ್ಕರ್, ಸಾವಿತ್ರಿಬಾಯಿ ಫುಲೆ, ಜ್ಯೋತಿಬಾ ಫುಲೆ, ಡಾ.ಎಸ್.ರಾಧಾಕೃಷ್ಣನ್ ಸೇರಿದಂತೆ ಎಲ್ಲಾ ಮಹನೀಯರು ಸಾಮಾನ್ಯರಾಗಿಯೇ ಹುಟ್ಟಿ, ತಮ್ಮ ಕ್ಷೇತ್ರದಲ್ಲಿ ಅಸಾಮಾನ್ಯರಾಗಿ ಬೆಳೆದು ಬಂದಿದ್ದಾರೆ. ಇವರ ಬದುಕು ಶಿಕ್ಷಕರಿಗೆ ಆದರ್ಶವಾಗಬೇಕು ಎಂದರು.

ಸಾಧಕ ಶಿಕ್ಷಕರು: ಮೈಸೂರಿನ ಕೃಷ್ಣಮೂರ್ತಿಪುರಂನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಚಂಪಾಶ್ರೀ, ನಜರ್‌ಬಾದ್ ಸುಭಾಷ್ ಚಂದ್ರ ಬೋಸ್ ಅನಿವಾಸಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ಜಗದಾಂಬ ಪ್ರಸನ್ನ, ಜ್ಯೋತಿನಗರದ ಎಂಸಿಸಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿಯರಾದ ಜೆ. ಇಂದ್ರಾಣಿ ಮತ್ತು ಬಿ.ಸಿ. ಉಷಾರಾಣಿ, ಮೈಸೂರು ದಕ್ಷಿಣ ವಲಯದ ಬಿಐಆರ್‌ಟಿ ಶಿಕ್ಷಕಿ ಎಸ್. ಮಮತ, ಮೈಸೂರು ತಾಲೂಕು ಆಯರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎ.ಸುಧಾ, ನಂಜನಗೂಡು ತಾಲೂಕು ಗೀಕಹಳ್ಳಿ ಹುಂಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಹೆಚ್. ವೇದಾವತಿ, ನಂಜನಗೂಡಿನ ದಿವ್ಯ ಜ್ಯೋತಿ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಜೆ. ರಾಜೇಶ್ವರಿ ಅವರಿಗೆ ಮಂಡ್ಯ ಜಿಲ್ಲೆ ಡಯಟ್ ಪ್ರಾಂಶುಪಾಲ ಪುರುಷೋತ್ತಮ್ 'ಜೀವನದಿ ಕಾವೇರಿ ಪ್ರಶಸ್ತಿ' ಯನ್ನು ಪ್ರದಾನ ಮಾಡಿದರು.

ವೇದಿಕೆಯಲ್ಲಿ ಸಾಮಾಜಿಕ ಹೋರಾಟಗಾರ್ತಿ ಜಮುನಾ ರಾಣಿ ಮಿರ್ಲೆ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ. ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ನಿವೃತ್ತ ಶಿಕ್ಷಕರಾದ ಫಾತಿಮಾ, ಎನ್.ಅನುಪಮಾ ಮುಂತಾದವರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ತಂಡೆಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗೇಮ್ ಚೇಂಜರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ನಿಲವುಕು ಎನಮೇಲ್ ಎನ್ನಡಿ ಕೋಪಂ(ತ)	4 ಪ್ರದರ್ಶನಗಳು
ಸಂಗಂ	
ವಿಷ್ಣುಪ್ರಿಯ (ಕ)	4 ಪ್ರದರ್ಶನಗಳು
ಲಿಡೋ	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಇದಮೊಯರ್ಚಿ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಆರೋಗ್ಯ ಉಚಿತ ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ಮತ್ತು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ವತಿಯಿಂದ ಅರ್ಜುನ ಅವಧೂತರ ಜ್ಞಾನ ಪ್ರಕಾಶೋತ್ಸವದ ಅಂಗವಾಗಿ ಭಾನುವಾರ(ಫೆ.23) ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಮೈಸೂರು–ಬನ್ನೂರು ರಸ್ತೆಯ ಹಾರೋಹಳ್ಳಿ ಬಳಿ ಇರುವ ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರದಲ್ಲಿ ಆರೋಗ್ಯ ಉಚಿತ ತಪಾಸಣೆ ಮತ್ತು ಔಷಧಿ ವಿತರಣೆ ಶಿಬಿರವನ್ನು ಏರ್ಪಡಿಸಲಾಗಿದೆ.

ಅರ್ಜುನ ಅವಧೂತರು ಸಾನ್ನಿಧ್ಯ ವಹಿಸಲಿದ್ದು, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಉದ್ಘಾಟಿಸುವರು. ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಕುಲಪತಿ ಡಾ.ಎಸ್.ವಿದ್ಯಾಶಂಕರ್, ಕಾವೇರಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಡಾ.ಬಿ.ಆರ್.ಚಂದ್ರಶೇಖರ್, ನ್ಯೂರೋ ಜೋನ್ ಕ್ಲಿನಿಕ್‌ನ ನರರೋಗ ತಜ್ಞ ಡಾ.ಸುಶೃತ್ ಗೌಡ, ಕೆಎಎಸ್ ಅಧಿಕಾರಿ ಶ್ರೀಮತಿ ಮೈತ್ರಿ, ಮೆಲ್ಲಹಳ್ಳಿ ಗ್ರಾಪಂ ಉಪಾಧ್ಯಕ್ಷೆ ಶ್ರೀಮತಿ ಶ್ರೀವಾಣಿ, ಉದ್ಯಮಿ ಪೋತರಾಜು ಅವರುಗಳು ಪಾಲ್ಗೊಳ್ಳುವರು. ಶಿಬಿರದಲ್ಲಿ 40ಕ್ಕೂ ಹೆಚ್ಚು ವೈದ್ಯರು, ವೈದ್ಯಕೀಯ ಸಿಬ್ಬಂದಿ ಭಾಗವಹಿಸಲಿದ್ದು, ಬಿ.ಪಿ.ಶುಗರ್, ಹೃದಯ ತಪಾಸಣೆ ಸೇರಿದಂತೆ ಎಲ್ಲಾ ರೀತಿಯ ತಪಾಸಣೆಗಳನ್ನು ನಡೆಸಿ, ಉಚಿತವಾಗಿ ಔಷಧಿಗಳನ್ನು ನೀಡಲಾಗುವುದು ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ

ಡಾ.ಬಿ.ಆರ್.ಅಂಬೇಡ್ಕರ್ ಓದು ಕಾರ್ಯಕ್ರಮ



ಮೈಸೂರು, ಫೆ.22–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2024–25ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ 'ಡಾ.ಬಿ.ಆರ್.ಅಂಬೇಡ್ಕರ್ ಓದು' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ನಿಮಿತ್ತ ಡಾ.ಬಿ. ಆರ್.ಅಂಬೇಡ್ಕರ್ ಅವರ ಬದುಕು ಬರಹ ಮತ್ತು ಭಾಷಣ ಕುರಿತು ಕವನ ವಾಚನ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಮೈಸೂರು ಜಿಲ್ಲೆಯ ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜಿನ ವಿದ್ಯಾರ್ಥಿಗಳು ಈ ಕವನ ವಾಚನ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಆಸಕ್ತ ವಿದ್ಯಾರ್ಥಿಗಳು ತಮ್ಮ ಸ್ವ–ವಿವರ ಹಾಗೂ ಕಾಲೇಜಿನ ಗುರುತಿನ ಚೀಟಿಯೊಂದಿಗೆ ಫೆ.25ರೊಳಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು.

ಡಾ.ಅಂಬೇಡ್ಕರ್ ಅವರ ಬದುಕು, ಬರಹ ಮತ್ತು ಸಾಧನೆ ವಿಷಯ ಬಿಟ್ಟು ಬೇರೆ ವಿಷಯಾಧಾರಿತ ಕವಿತೆಗಳನ್ನು ಪರಿಗಣಿಸಲಾಗುವುದಿಲ್ಲ, ಕವಿತೆಯು ಕನಿಷ್ಠ 60ರಿಂದ ಗರಿಷ್ಠ 100 ಪದಗಳನ್ನು ಹೊಂದಿರಬೇಕು. (ಸುಮಾರು 12ರಿಂದ 20 ಸಾಲುಗಳು), ಕವನವು ಸ್ವರಚಿತವಾಗಿರಬೇಕು ಹಾಗೂ ಕನ್ನಡ ಭಾಷೆಯಲ್ಲಿರಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821–2513225 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೊದಲ ವರ್ಷದ ಚಿರಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾಯಿತು ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ ಮತ್ತು ಸದಾ ನಿಮ್ಮ ನೆನಪಿನಲ್ಲೇ ಇರುವ

ಶ್ರೀ ಎನ್. ವೆಂಕಟಾಚಲಪ್ಪ

ನಿವೃತ್ತ ತಹಶೀಲ್ದಾರ್

1956–2024

ಪತ್ನಿ ನಾಗಮಣಿ ಮತ್ತು ಕುಟುಂಬವರ್ಗ ಕಂದಾಯನಗರ, ಮೈಸೂರು

2ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಕೆ.ರಾಧ (ತಾಯಮ್ಮ)

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖಿತಪ್ತರು: ಪತಿ–ಕೆ.ಪದ್ಮನಾಭ, ಮಕ್ಕಳು ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

4ನೇ ವರ್ಷದ ಸವಿನೆನಪು

ಶ್ರೀಮತಿ ಪದ್ಮ ಶ್ರೀನಿವಾಸ್‌ರವರು

(ನ್ಯಾಯಬೆಲೆ ಅಂಗಡಿ ಲೇಟ್ ಶ್ರೀನಿವಾಸ್‌ರವರ ಧರ್ಮಪತ್ನಿ)



ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಎಸ್. ನಟರಾಜ್ ಮತ್ತು ಕುಟುಂಬ ವರ್ಗದವರು

ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

10ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ಪುಟ್ಟಮಾದಮ್ಮ

ಹರವೆ, ಚಾಮರಾಜನಗರ ತಾ||


ಜನನ: 02–12–1944

ಮರಣ: 23–02–2015

ಸದಾ ನಿಮ್ಮ ನೆನಪಿನಲ್ಲೇ ಕಾಲ ಕಳೆಯುತ್ತಿರುವ ನಿಮ್ಮ ಮಕ್ಕಳಾದ ಚಿಕ್ಕಮಹದೇವಮ್ಮ ಎಸ್, ಮಹೇಶ ಎಸ್, ರಾಜು ಎಸ್, ಲತಾ ಎಸ್, ವಿಷ್ಣುಪ್ರಸಾದ್ ಎಸ್ ಮೊಮ್ಮಕ್ಕಳಾದ: ಪೂರ್ವಿಕ ಎಂ, ಧನ್ಯಶ್ರೀ ಎಂ, ಯಧುವೀರ್ ಎಂ ಸೊಸೆಯಂದಿರಾದ ಜಯಲಕ್ಷ್ಮಿ, ಮಂಜುಳಾ ಎಲ್ & ಕುಟುಂಬ ವರ್ಗದವರು

1ನೇ ವರ್ಷದ ಪುಣ್ಯಸ್ಮರಣೆ

ಪುಣ್ಯಾತ್ಮ



ಶ್ರೀ ಶಂಕರ್

ಕಂಟ್ರಾಕ್ಟರ್

ನಗು ಮುಖದ ಒಡೆಯ

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವೆವು

ಕಲಾ, ಪ್ರೀತಮ್, ಹೃಷ್ಟಿ, ದೀಪು, ಶಶಿ, ಚೈತ್ರಾ, ರಿತ್ವಿಸ್ ಆರ್ಯ ಚೆನ್ನೇಗೌಡ, ಸಾಕಮ್ಮ, ಕುಮಾರ್, ಮಿಂಚು

ಪುರಸಭಾ ಕಾರ್ಯಾಲಯ, ಸಕಲೇಶಪುರ

ಹಾಸನ ಜಿಲ್ಲೆ–573134

TOWN MUNICIPAL COUNCIL, SAKLESHPUR, HASSAN DISTRICT

ದೂರವಾಣಿ ಸಂಖ್ಯೆ: 08173–244042 email: itstaff_ulb_sakleshpur@yahoo.com

Website: www.sakaleshpurtown.gov.in

ನಂ/ಮುನಿಸಿ/ಜೆ.ಇ/ಪಿಆರ್/33/2024–25 ದಿನಾಂಕ 21–02–2025

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಕಲೇಶಪುರ ಪುರಸಭೆಯಿಂದ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆಡಬ್ಲ್ಯೂ–1/2 ನಿಯಮದಂತೆ ಇ–ಪೋರ್ಟಲ್ ಮೂಲಕ ಐಂಟವಾರು ಮರು ಟೆಂಡರ್ ಕರೆಯಲಾಗಿದ್ದು ಆಸಕ್ತಿಯುಳ್ಳ ಗುತ್ತಿಗೆದಾರರು http://Kppp.karnataka.gov.inನಿಂದ ಟೆಂಡರ್ ಷರತ್ತು ಇಎಂಡಿ ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ಅನ್ನು ಸಲ್ಲಿಸುವ ಮತ್ತು ತೆರೆಯುವ ದಿನಾಂಕವನ್ನು ಇ–ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಸಕಲೇಶಪುರ ಪುರಸಭೆಯ ತಾಂತ್ರಿಕ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕ್ರ.ಸಂ.ಇಂಡೆಂಟ್ ನಂ.1) DMA/2024-25/WS/WORK_INDENT 30891/CALL-4 ಅಂದಾಜು ಮೊತ್ತ (ಲಕ್ಷಗಳಲ್ಲಿ): 1.50 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28–02–2025 ಸಂಜೆ 5.30 ಗಂಟೆಗೆ 2) DMA/2024-25/OW/WORK_INDENT25673/CALL-4 ಅಂದಾಜು ಮೊತ್ತ (ಲಕ್ಷಗಳಲ್ಲಿ): 35.26 ಸೂಚನೆ:– ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://Kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಅಧ್ಯಕ್ಷರು,	ಸಹಿ/–ಉಪಾಧ್ಯಕ್ಷರು,	ಸಹಿ/–ಮುಖ್ಯಾಧಿಕಾರಿ,
ಪುರಸಭೆ,	ಪುರಸಭೆ,	ಪುರಸಭೆ,
ಸಕಲೇಶಪುರ	ಸಕಲೇಶಪುರ	ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/985/ಕೆಎಸ್‌ಎಂಸಿಎ/2024–25

ಮೈಸೂರು ಮಿತ್ರ 45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು